ಸರ್ಕಾರ ಹಾಗೂ ಮಾನ್ಯತೆ ಪಡೆದ ವಿದ್ಯಾರ್ಥಿನಿಲಯಗಳಲ್ಲಿ ಭಾರತ ಸರ್ಕಾರದ ವಿದ್ಯಾರ್ಥಿವೇತನಕ್ಕೆ ಅರ್ಹರಾಗಿರುವ ಪರಿಶಿಷ ಜಾತಿ ವಿದ್ಯಾರ್ಥಿಗಳಿಗೆ ಭಾರತ ಸರ್ಕಾರ ವಿದ್ಯಾರ್ಥಿವೇತನದ ಜೊತೆಗೆ ವಿದ್ಯಾರ್ಥಿನಿಲಯದ ಭೋಜನಾ ವೆಚ್ಚವನ್ನು ಸರಿದೂಗಿಸಲು ರಾಜ್ಯ ಸರ್ಕಾರದಿಂದ ಹೆಚ್ಚುವರಿ ಬೋಜನಾ ವೆಚ್ಚವನ್ನು ಮಂಜೂರು ಮಾಡಲಾಗುವುದು. ಈ ಯೋಜನೆಯಡಿ **ರೂ.129.60 ಲಕ್ಷಗಳು** ಗುರಿಯಿದ್ದು, **ರೂ. 81.33 ಲಕ್ಷ** ವೆಚ್ಚ ಮಾಡಿ **975** ಭೌತಿಕ ಸಾಧನೆ ಮಾಡಲಾಗಿದೆ.

5.ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ :–

ಗ್ರಾಮಾಂತರ ಪ್ರದೇಶಗಳಲ್ಲಿ ಬಡತನ ರೇಖೆಗಿಂತ ಕಡಿಮೆ ಮಟ್ಟದಲ್ಲಿರುವ ಪರಿಶಿಷ್ಟಜಾತಿ ವಿದ್ಯಾರ್ಥಿಗಳಿಗೆ ವ್ಯಾಸಂಗ ಮುಂದುವರೆಸಲು ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನವನ್ನು ಮಂಜೂರು ಮಾಡಲಾಗುತ್ತಿದೆ. ಹಾಗೂ ಇತರೆ ವಿದ್ಯಾರ್ಥಿಗಳ ಜೊತೆಯಲ್ಲಿ ಸ್ಪರ್ಧಾತ್ಮಕ ಮನೋಭಾವನೆ ಬೆಳೆಸಿಕೊಂಡು ಹೆಚ್ಚು ಅಂಕ ಪಡೆಯುವ ಉದ್ದೇಶಕ್ಕಾಗಿ ವಿದ್ಯಾರ್ಥಿವೇತನದ ಜೊತೆಗೆ ಪ್ರತಿಭಾ ವಿದ್ಯಾರ್ಥಿವೇತನವನ್ನು ಸಹ ಮಂಜೂರು ಮಾಡಲಾಗುತ್ತಿದೆ. 1 ರಿಂದ 5ನೇ ತರಗತಿ ಗಂಡು ಮಕ್ಕಳಿಗೆ ವಾರ್ಷಿಕ **ರೂ. 1000.00,** ಹೆಣ್ಣು ಮಕ್ಕಳಿಗೆ ವಾರ್ಷಿಕ **ರೂ. 1100.00,** 6 ರಿಂದ 7ನೇ ತರಗತಿ ಗಂಡು ಮಕ್ಕಳಿಗೆ ರೂ.**1150.00** ಹೆಣ್ಣು ಮಕ್ಕಳಿಗೆ ವಾರ್ಷಿಕ ರೂ.**1250.00** ರಂತೆ ಹಾಗೂ 8ನೇ ತರಗತಿಯ ಗಂಡು ಮಕ್ಕಳಿಗೆ ವಾರ್ಷಿಕ ರೂ.**1250.00** ಹೆಣ್ಣುಮಕ್ಕಳಿಗೆ ವಾರ್ಷಿಕ ರೂ.**1350.00** ವಿದ್ಯಾರ್ಥಿವೇತನ ಮಂಜೂರು ಮಾಡಲಾಗುತ್ತಿದೆ.

ಮುಂದುವರೆದು, 9 ಮತ್ತು 10ನೇ ತರಗತಿ ವಿದ್ಯಾರ್ಥಿಗಳಿಗೆ ಭಾರತ ಸರ್ಕಾರ ವಿದ್ಯಾರ್ಥಿವೇತನವನ್ನು ಪ್ರತಿ ವಿದ್ಯಾರ್ಥಿಗೆ ಮನೆ ನಿವಾಸಿಗಳಿಗೆ **150** ಪ್ರತಿ ಮಾಹೆಗೆ ನಿಲಯನಿವಾಸಿಗೆ 350 ರಂತೆ ಮಂಜೂರಾತಿ ಮಾಡಲಾಗಿದೆ. ಈ ಯೋಜನೆಯಡಿ **28100** ಗುರಿ ಇದ್ದು, ಮಾರ್ಚ್ ಅಂತ್ಯಕ್ಕೆ **24909** ಸಾಧನೆ ಮಾಡಲಾಗಿದೆ. ಈ ಯೋಜನೆಯಡಿ **ರೂ. 319.07 ಲಕ್ಷ** ಗುರಿಯಿದ್ದು, **ರೂ. 319.07 ಲಕ್ಷ** ವೆಚ್ಚ ಮಾಡಲಾಗಿದೆ.

6. ನೂತನ ಕಾನೂನು ಪಧವೀಧರರಿಗೆ ಸಹಾಯಧನ :–

ಪರಿಶಿಷ್ಟಜಾತಿ ನಿರುದ್ಯೋಗಿ ಕಾನೂನು ಪಧವೀಧರರು ಸ್ವತಂತ್ರವಾಗಿ ವಕೀಲ ವೃತ್ತಿಯನ್ನು ಪ್ರಾರಂಭಿಸಿರುವ ಅಭ್ಯರ್ಥಿಗಳಿಗೆ ಪ್ರತಿ ಮಾಹೆಯಾನ **ರೂ.5000–00** ಗಳ ಶಿಷ್ಯವೇತನವನ್ನು ನೀಡಲಾಗುವುದು. ಈ ಯೋಜನೆಯಡಿ **ರೂ.25.00 ಲಕ್ಷ** ಗುರಿಯಿದ್ದು, **ರೂ.25.00 ಲಕ್ಷ** ವೆಚ್ಚ ಮಾಡಿ **40** ಭೌತಿಕ ಸಾಧನೆ ಮಾಡಲಾಗಿದೆ.

7. ಕಾರ್ಯನಿರ್ವಾಹಕ ಸಿಬ್ಬಂದಿ :–

ಇಲಾಖೆಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಜಿಲ್ಲಾ ಮತ್ತು ತಾಲ್ಲೋಕು ಮಟ್ಟದಲ್ಲಿರುವ ಉಪನಿರ್ದೇಶಕರು / ಸಹಾಯಕ ನಿರ್ದೇಶಕರು ಹಾಗೂ ಸಿಬ್ಬಂದಿ ವರ್ಗದವರ ವೇತನ ಕಛೇರಿ ನಿರ್ವಹಣೆಯ ವೆಚ್ಚ ಭರಿಸಲಾಗುವುದು. ಈ ಸಾಲಿಗೆ **ರೂ.221.93 ಲಕ್ಷ** ಗುರಿ ಇದ್ದು, **ರೂ.197.31 ಲಕ್ಷಗಳನ್ನು** ವೆಚ್ಚ ಮಾಡಿ **36** ಸಿಬ್ಬಂದಿಗಳಿಗೆ ವೇತನ ಹಾಗೂ **5** ಕಛೇರಿಯ ನಿರ್ವಹಣೆ ಮಾಡಲಾಗಿದೆ.

8. ಖಾಸಗಿ ವಿದ್ಯಾರ್ಥಿನಿಲಯ ಸಹಾಯಧನ / ಶೋಷಿತ ವರ್ಗದ ವಿದ್ಯಾರ್ಥಿನಿಲಯ :–

ಚಾಮರಾಜನಗರ ಜಿಲ್ಲೆಯ ಚಾಮರಾಜನಗರ, ಗುಂಡ್ಲುಪೇಟೆ ಯಲ್ಲಿರುವ ಅನುದಾನಿತ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯದಲ್ಲಿರುವ ವಿದ್ಯಾರ್ಥಿಗಳಿಗೆ ಸರ್ಕಾರ ನಿಗಧಿಪಡಿಸಿದ ದರದಲ್ಲಿ ಭೋಜನ ವೆಚ್ಚವನ್ನು ಮಂಜೂರು ಮಾಡಲಾಗುವುದು. ಹಾಗೆಯೇ ಕೊಳ್ಳೇಗಾಲದಲ್ಲಿರುವ **1** ಖಾಸಗಿ ವಿದ್ಯಾರ್ಥಿನಿಲಯಗಳಿಗೆ ನ್ಯಾಯಲಯದ ಆದೇಶದಂತೆ ದಿನಗೂಲಿ ನೌಕರರಿಗೆ ವೇತನ ನೀಡಲಾಗುವುದು. ಈ ಸಾಲಿಗೆ **ರೂ.17.00 ಲಕ್ಷ** ಅನುದಾನ ನಿಗಧಿಯಾಗಿದ್ದು, **ರೂ.6.35 ಲಕ್ಷಗಳನ್ನು 30** ವಿದ್ಯಾರ್ಥಿಗಳ ಭೌತಿಕ ಸಾಧನೆ ಮಾಡಲಾಗಿದೆ.

7. ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಚಾಮರಾಜನಗರ

2019-20ನೇ ಸಾಲಿನ ಇಲಾಖಾ ಕಾರ್ಯಕ್ರಮಗಳ ವಾರ್ಷಿಕ ಆಡಳಿತ ವರದಿ

ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯು ಪರಿಶಿಷ್ಟ ವರ್ಗದ ಜನರಿಗೆ ಶೈಕ್ಷಣಿಕ, ಆರ್ಥಿಕ, ಸಾಮಾಜಿಕ ಹಾಗೂ ಮೂಲಭೂತ ಸೌಲಭ್ಯಗಳನ್ನು ಒದಗಿಸುವ ಕಾರ್ಯಕ್ರಮಗಳನ್ನು ಅನುಷ್ಠಾನ ಗೊಳಿಸಲಾಗುತ್ತಿದೆ. ಪರಿಶಿಷ್ಟ ವರ್ಗದವರ ಸರ್ವತೋಮುಖ ಅಭಿವೃದ್ಧಿಯೇ ಇಲಾಖೆಯ ಮುಖ್ಯ ಗುರಿಯಾಗಿದೆ. 2011ರ ಜನಗಣತಿಯ ಪ್ರಕಾರ ಜಿಲ್ಲೆಯಲ್ಲಿ 1,20,219 ಪರಿಶಿಷ್ಟ ವರ್ಗದ ಜನಸಂಖ್ಯೆ ಇದ್ದು, ಇದರಲ್ಲಿ 31,870 ಬುಡಕಟ್ಟು ಜನಸಂಖ್ಯೆ ಇರುತ್ತದೆ.

ಆಡಳಿತ ವ್ಯವಸ್ಥೆ:

ದಿನಾಂಕ 31.03.2020ರ ಅಂತ್ಯಕ್ಕೆ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿ ಮಂಜೂರು/ಭರ್ತಿ/ಖಾಲಿಯಿರುವ ಹುದ್ದೆಗಳ ಮಾಹಿತಿ

ಜಿಲ್ಲೆ : ಚಾಮರಾಜನಗರ

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಮಂಜೂರಾದ, ಭರ್ತಿಯಾಗಿರುವ ಹಾಗೂ ಖಾಲಿ ಇರುವ ಹುದ್ದೆಗಳ ವಿವರ				
ಕ್ರ. ಸಂ.	ಹುದ್ದೆಗಳ ಹೆಸರು	ಮಂಜೂರಾದ ಹುದ್ದೆಗಳ ಸಂಖ್ಯೆ	ಭರ್ತಿಯಾಗಿರುವ ಹುದ್ದೆಗಳ ಸಂಖ್ಯೆ	ಖಾಲಿ ಹುದ್ದೆ
1	ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ	1	1	0
2	ತಾಲ್ಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ	2	2	0
3	ಕಛೇರಿ ಅಧೀಕ್ಷಕರು	3	3	0
4	ತನಿಖಾ ಸಹಾಯಕರು	1	0	1
5	ಗಿರಿಜನ ಕಲ್ಯಾಣ ವಿಸ್ತರಣಾಧಿಕಾರಿ	2	0	2
6	ಪ್ರ.ದ.ಸ (ಜಿಲ್ಲಾ ಕಛೇರಿ)	1	0	1
7	ಪ್ರದಸ/ದ್ವಿದಸ (ತಾಲ್ಲೂಕು ಕಛೇರಿ)	2	0	2
8	ಬೆರಳಚ್ಚುಗಾರರು	1	1	0
9	ಮೇಲ್ವಿಚಾರಕರು	11	0	11
10	ಶಿಕ್ಷಕರು	100	29	71
11	ವಾಹನ ಚಾಲಕರು	1	1	0
12	ಗ್ರೂಪ್ ಡಿ	2	1	1
13	ಅಡುಗೆಯವರು	82	22	60
14	ಅಡುಗೆ ಸಹಾಯಕರು	57	9	48
15	ರಾತ್ರಿ ಕಾವಲುಗಾರರು	6	0	6
	ಒಟ್ಟು	272	69	203

I ಶೈಕ್ಷಣಿಕ ಕಾರ್ಯಕ್ರಮ

ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಲ್ಲಿ ಶೈಕ್ಷಣಿಕ ಮಟ್ಟ ಸುಧಾರಣೆ ಹಾಗೂ ಪ್ರೋತ್ಸಾಹಕ್ಕಾಗಿ ವಿವಿಧ ರೀತಿಯ ಕಾರ್ಯಕ್ರಮಗಳನ್ನು ಇಲಾಖೆ ಅನುಷ್ಠಾನಗೊಳಿಸಲಾಗುತ್ತಿದೆ. ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಲ್ಲಿ ವಿದ್ಯಾಭ್ಯಾಸದ ಅನುಕೂಲಕ್ಕಾಗಿ ವಿದ್ಯಾರ್ಥಿನಿಲಯ ಮತ್ತು ಆಶ್ರಮಶಾಲೆಗಳನ್ನು ನಡೆಸಲಾಗುತ್ತಿದೆ. ವಿಶೇಷವಾಗಿ ಗ್ರಾಮೀಣ ಮಟ್ಟದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಂಸ್ಥೆಗಳನ್ನು ನಡೆಸಲಾಗುತ್ತಿದೆ.

1.ಆಶ್ರಮಶಾಲೆಗಳು:

ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಆಶ್ರಮಶಾಲೆಗಳನ್ನು ಸ್ಥಾಪಿಸಲಾಗಿದೆ. ವಿದ್ಯಾರ್ಥಿಗಳಿಗೆ ಉಚಿತ ಊಟ, ವಸತಿ, ಸಮವಸ್ತ್ರ, ಲೇಖನ ಸಾಮಗ್ರಿ ಇತ್ಯಾದಿ ಶಿಕ್ಷಣದ ಸವಲತ್ತು ಒದಗಿಸಲಾಗುವುದು. ಈ ಆಶ್ರಮಶಾಲೆಗಳಲ್ಲಿ 1 ರಿಂದ 5ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಲು ವ್ಯವಸ್ಥೆ ಕಲ್ಪಿಸಿದ್ದು, ಜಿಲ್ಲೆಯಾದ್ಯಂತ 20 ಆಶ್ರಮಶಾಲೆಗಳನ್ನು ಸ್ಥಾಪಿಸಲಾಗಿರುತ್ತದೆ. 2019–20ನೇ ಸಾಲಿನಲ್ಲಿ ಶಾಲೆಗಳ ನಿರ್ವಹಣೆಗಾಗಿ 365.30 ಲಕ್ಷಗಳು ಹಾಗೂ ಸಿಬ್ಬಂದಿಗಳ ವೇತನಕ್ಕಾಗಿ ರೂ. 247.65 ಲಕ್ಷಗಳನ್ನು ಖರ್ಚು ಮಾಡಲಾಗಿದೆ.

ವಿದ್ಯಾರ್ಥಿನಿಲಯಗಳು

1. ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳು:

5ರಿಂದ 10ನೇ ತರಗೆವರೆಗೆ ವ್ಯಾಸಂಗ ಮಾಡುವ ಪರಿಶಿಷ್ಟ ವರ್ಗಗಳ ವಿದ್ಯಾರ್ಥಿ/ನಿಯರಿಗೆ ಉಚಿತ ವಸತಿ, ಊಟ, ತಿಂಡಿ, ಪುಸ್ತಕ, ಲೇಖನ ಸಾಮಗ್ರಿಗಳು, ಸಮವಸ್ತ್ರ ಹಾಗೂ ಇನ್ನಿತರೆ ಸೌಲಭ್ಯಗಳನ್ನು ಕಲ್ಪಿಸಲಾಗುತ್ತಿದೆ. ಬಾಲಕ ಮತ್ತು ಬಾಲಕಿಯರಿಗೆ ಜಿಲ್ಲೆಯಾದ್ಯಂತ 07 ವಿದ್ಯಾರ್ಥಿನಿಲಯಗಳಿದ್ದು, ವಿದ್ಯಾರ್ಥಿಗಳ ನಿರ್ವಹಣೆ ಹಾಗೂ ಸಿಬ್ಬಂದಿಗಳಿಗಾಗಿ ರೂ 186.66 ಲಕ್ಷಗಳನ್ನು ಖರ್ಚುಮಾಡಲಾಗಿದೆ.

2. ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು :

ಮೆಟ್ರಿಕ್ ನಂತರದ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ವರ್ಗದ ಬಾಲಕ & ಬಾಲಕಿಯರಿಗೆ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯವನ್ನು ನಡೆಸಲಾಗುತ್ತಿದೆ. ಪ್ರತಿ ವಿದ್ಯಾರ್ಥಿ/ನಿಯರಿಗೆ ತಿಂಗಳೊಂದಕ್ಕೆ ರೂ. 1600/– ವೆಚ್ಚದಲ್ಲಿ 996 ವಿದ್ಯಾರ್ಥಿಗಳಿಗೆ ಊಟ ತಿಂಡಿ ಒದಗಿಸಲಾಗುವುದು. ರೂ.14.95/– ಲಕ್ಷಗಳು ಖರ್ಚು ಮಾಡಲಾಗಿದೆ.

3. ಕಟ್ಟಡ ದುರಸ್ಥಿ :

ಚಾಮರಾಜನಗರ ಜಿಲ್ಲೆಯಲ್ಲಿ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ದುರಸ್ಥಿಗಾಗಿ ರೂ. 25.00 ಲಕ್ಷಗಳ ವೆಚ್ಚದಲ್ಲಿ 07 ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗಿದೆ.

4. ಅನುದಾನಿತ ವಿದ್ಯಾರ್ಥಿನಿಲಯಗಳಿಗೆ ಸಹಾಯ :

ಸ್ಥಳೀಯ ಸ್ವಯಂ ಸಂಘ ಸಂಸ್ಥೆಗಳ ವತಿಯಿಂದ ಕಾರ್ಯನಿರ್ವಹಿಸುತ್ತಿರುವ ವಿದ್ಯಾರ್ಥಿನಿಲಯಗಳಲ್ಲಿ ದಾಖಲಾಗಿ ವ್ಯಾಸಂಗ ಮಾಡುವ ವಿದ್ಯಾರ್ಥಿನಿಲಯಗಳಿಗೆ ಭೋಜನಾ ವೆಚ್ಚಕ್ಕಾಗಿ ಸಹಾಯಧನ ನೀಡಲಾಗುತ್ತಿದೆ. ವಿವೇಕಾನಂದ ಗಿರಿಜನ ಕಲ್ಯಾಣ ಕೇಂದ್ರ, ಬಿಳಿಗಿರಿರಂಗನಬೆಟ್ಟ ಯಳಂದೂರು ತಾಲ್ಲೂಕು, ಚಾಮರಾಜನಗರ ಜಿಲ್ಲೆ.

ವಿದ್ಯಾರ್ಥಿವೇತನ

1. ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ :

1 ರಿಂದ 5ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಪಂಗಡದ ಬಾಲಕಿಯರಿಗೆ ರೂ 450/–, 1 ರಿಂದ 7ನೇ ತರಗತಿಯ ಬಾಲಕರಿಗೆ ರೂ 400/–, 6 ಮತ್ತು 7ನೇ ತರಗತಿಯ ಬಾಲಕಿಯರಿಗೆ ರೂ 550/–, 8ನೇ ತರಗತಿ ಬಾಲಕರಿಗೆ ರೂ 650/–, 8ನೇ ತರಗತಿ ಬಾಲಕಿಯರಿಗೆ ರೂ 900/–, 9 ಮತ್ತು 10ನೇ ತರಗತಿ ವಿದ್ಯಾರ್ಥಿಗಳಿಗೆ ರೂ 2250/–ರಂತೆ ವಿದ್ಯಾರ್ಥಿವೇತನವನ್ನು ನೀಡಲಾಗುವುದು, ಕಳೆದ ಸಾಲಿನಲ್ಲಿ ಒಟ್ಟು 8113 ವಿದ್ಯಾರ್ಥಿಗಳಿಗೆ ರೂ. 99.63 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

2. ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ :

ಪಿ.ಯು.ಸಿ ಯಿಂದ ಪದವಿ/ಸ್ನಾತಕೋತ್ತರ ತರಗತಿಯವರೆವಿಗೆ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಸರ್ಕಾರ ನಿಗಧಿಪಡಿಸಿರುವ ಡೇ ಸ್ಕಾಲರ್‌ಶಿಪ್ ಮಾಹೆಯಾನ ರೂ.230/–ರಂತೆ ಮತ್ತು ಹಾಸ್ಟಲ್ ವಿದ್ಯಾರ್ಥಿಗಳಿಗೆ ರೂ.380/–ರಂತೆ, ದ್ವಿತೀಯ ಪದವಿಯಿಂದ ತೃತೀಯ ಪದವಿಯ ವಿದ್ಯಾರ್ಥಿಗಳಿಗೆ ರೂ.300/–ಹಾಗೂ ಹಾಸ್ಟೆಲ್ ವಿದ್ಯಾರ್ಥಿಗಳಿಗೆ ತಿಂಗಳಿಗೆ ರೂ.800/– ಹಾಗೂ ಡಿಪ್ಲೊಮೋ ವಿದ್ಯಾರ್ಥಿಗಳಿಗೆ ರೂ.530/–ರಂತೆ ವಿದ್ಯಾರ್ಥಿವೇತನ ನೀಡಲಾಗುತ್ತಿದೆ. ಜಿಲ್ಲೆಯಾದ್ಯಂತ 1950 ವಿದ್ಯಾರ್ಥಿಗಳಿಗೆ ರೂ.433.49 ಲಕ್ಷ ಖರ್ಚು ಮಾಡಲಾಗಿದೆ.

4. ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಕಛೇರಿ ಸಿಬ್ಬಂದಿ ವೇತನ:

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಕಛೇರಿಯ 09 ಸಿಬ್ಬಂದಿಗಳಿಗೆ ವೇತನ ಹಾಗೂ ನಿರ್ವಹಣೆಗಾಗಿ ರೂ. 86.34 ಲಕ್ಷಗಳು ಖರ್ಚು ಮಾಡಲಾಗಿದೆ.

5. ಪರಿಶಿಷ್ಟ ಪಂಗಡದ ಸಮುದಾಯದವರು ಅಂತರ್ ಜಾತಿ ವಿವಾಹವಾದ್ದಲ್ಲಿ ಪ್ರೋತ್ಸಾಹ ಧನ

ಪರಿಶಿಷ್ಟ ಪಂಗಡದ ಪುರುಷರು ಇತರೆ ಜಾತಿಯ ಹೆಣ್ಣು ಮಕ್ಕಳನ್ನು ವಿವಾಹವಾದಲ್ಲಿ ರೂ 2,00,000/–(ಎರಡು ಲಕ್ಷ ರೂಪಾಯಿ ಮಾತ್ರ) ಹಾಗೂ ಪರಿಶಿಷ್ಟ ವರ್ಗದ ಹೆಣ್ಣು ಮಕ್ಕಳನ್ನು ಇತರೆ ಜಾತಿಯ ಪುರುಷರು ವಿವಾಹವಾದಲ್ಲಿ ರೂ 3,00,000/–(ಮೂರು ಲಕ್ಷ ರೂಪಾಯಿಗಳು ಮಾತ್ರ)ಗಳನ್ನು ಒಂದು ಬಾರಿಗೆ ಪ್ರೋತ್ಸಾಹ ಧನ ಮಂಜೂರು ಮಾಡಲಾಗುವುದು. ಅದರಂತೆ ಪ್ರಸಕ್ತ ಸಾಲಿನಲ್ಲಿ 07 ದಂಪತಿಗಳಿಗೆ ಪ್ರೋತ್ಸಾಹ ಧನ ಮಂಜೂರು ಮಾಡಲಾಗಿದೆ.

6. ಕಾನೂನು ಪದವೀದರರಿಗೆ ನ್ಯಾಯಾಂಗ ತರಭೇತಿ ಕಾರ್ಯಕ್ರಮ

ಕಾನೂನು ಪದವೀಧರರಿಗೆ: ಪರಿಶಿಷ್ಟ ಪಂಗಡಗಳಿಗೆ ಸೇರಿದ ನಿರುದ್ಯೋಗಿ ಕಾನೂನು ಪದವೀಧರರು ಸ್ವತಂತ್ರವಾಗಿ ವಕೀಲ ವೃತ್ತಿಯನ್ನು ಕೈಗೊಳ್ಳಲು, ವಕೀಲರ ಸಂಘದಲ್ಲಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಲು ಹಾಗೂ ಪುಸ್ತಕಗಳನ್ನು ಖರೀದಿಸಲು ಸಹಾಯವಾಗುವಂತೆ ರೂ 5,000/– ಗಳ ಧನಸಹಾಯ ನೀಡಲಾಗುವುದು, ಅಲ್ಲದೇ ಪ್ರತಿ ಮಾಹೆ ರೂ 10,000/–ದಂತೆ 2 ವರ್ಷಗಳು ಪ್ರೋತ್ಸಾಹ ಧನ ಮಂಜೂರು ಮಾಡಲಾಗುತ್ತಿದ್ದು, ಹಾಲಿ 07 ಅಭ್ಯರ್ಥಿಗಳು ಸಹಾಯ ಧನ ಪಡೆಯುತ್ತಿದ್ದಾರೆ.

ಅಭಿವೃದ್ಧಿ ಕಾರ್ಯಕ್ರಮಗಳು

I. ಪರಿಶಿಷ್ಟ ಪಂಗಡದ ಉಪಯೋಜನೆ:–

ಪರಿಶಿಷ್ಟ ಪಂಗಡದವರ ಸರ್ವತೋಮುಖ ಅಭಿವೃದ್ಧಿಗಾಗಿ ಪರಿಶಿಷ್ಟ ಪಂಗಡದ ಉಪಯೋಜನೆಯನ್ನು ರೂಪಿಸಲಾಗಿದ್ದು, ವಿವಿಧ ಅಭಿವೃದ್ಧಿ ಇಲಾಖೆಗಳು, ನಿಗಮ, ಮಂಡಳಿಗಳಿಗೆ ಯೋಜನಾ ಆಯವ್ಯಯದ ರಾಜ್ಯವಲಯ ಮತ್ತು ಜಿಲ್ಲಾ ವಲಯಗಳಡಿ ಅನುದಾನವನ್ನು ಮೀಸಲಾಗಿಟ್ಟು ಬಡತನ ರೇಖೆಗಿಂತ

ಕೆಳಗಿರುವ ಕುಟುಂಬಗಳ ಶೈಕ್ಷಣಿಕ ಅಭಿವೃದ್ಧಿಗಾಗಿ, ಹಲವಾರು ಆರ್ಥಿಕ ಸವಲತ್ತುಗಳ ಜೊತೆಗೆ ವಸತಿ, ಕುಡಿಯುವ ನೀರು, ರಸ್ತೆ ಸಂಪರ್ಕ, ನೈರ್ಮಲೀಕರಣ, ಆರೋಗ್ಯ ಮುಂತಾದ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಆದ್ಯತೆ ನೀಡಲಾಗುತ್ತಿದೆ. ಪರಿಶಿಷ್ಟ ಪಂಗಡದ ಉಪಯೋಜನೆಯಡಿ ಅನುಷ್ಠಾನಗೊಳಿಸುತ್ತಿರುವ ಕಾರ್ಯಕ್ರಮಗಳ ವಿವರ ಕೆಳಕಂಡಂತಿದೆ.

ಗ್ರಾಮೀಣ ನೀರು ಸರಬರಾಜು ಮತ್ತು ರಸ್ತೆ ಸೇತುವೆ ಕಾಮಗಾರಿಗಳಿಗೆ ರೂ. 57.53 ಲಕ್ಷಗಳು ವೆಚ್ಚವಾಗಿರುತ್ತದೆ. ಕೃಷಿ ಇಲಾಖೆ, ಪಶುಸಂಗೋಪನೆ, ತೋಟಗಾರಿಕೆ, ರೇಷ್ಮೆಕೃಷಿ, ಗ್ರಾಮೀಣ ಮತ್ತು ಸಣ್ಣ ಉದ್ಯಮಗಳಿಗಾಗಿ ಸಹಾಯಧನ ಹಾಗೂ ಸ್ವಯಂ ಉದ್ಯೋಗಕ್ಕಾಗಿ ಸದರಿ ಇಲಾಖೆಗಳ ಮುಖಾಂತರವಾಗಿ ರೂ 29.76 ಲಕ್ಷಗಳನ್ನು ಖರ್ಚು ಮಾಡಲಾಗಿದೆ.

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಯೋಜನಾವಾರು ಕಾರ್ಯಕ್ರಮಗಳ ಪ್ರಗತಿ ವಿವರ

ಕ್ರ. ಸಂ	ಕಾರ್ಯಕ್ರಮಗಳು ಹಾಗೂ ಲೆಕ್ಕಶೀರ್ಷಿಕೆ	ನಿಗದಿ ಪಡಿಸಿದ ಮೊತ್ತ	ಬಿಡುಗಡೆಯಾದ ಮೊತ್ತ	ಖರ್ಚು	ಸಾಧನೆಯ ವಿವರ	ಶೇಖಡವಾರು
ಜಿಲ್ಲಾ ಪಂಚಾಯತ್ ಯೋಜನೆಗಳು						
1	ಪ.ಪಂ.ವಿದ್ಯಾರ್ಥಿನಿಲಯ ಗಳ ನಿರ್ವಹಣೆ 2225-00-102-0-33	198.70	198.70	186.66	755 ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿ ವೇತನ	94%
2	ವಿದ್ಯಾರ್ಥಿವೇತನ ಮತ್ತು ಧನಸಹಾಯ 2225-00-102-0-38	180.00	180.00	163.25	315 ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ 590 ಅಭ್ಯರ್ಥಿಗಳಿಗೆ ತರಬೇತಿ ಕಾರ್ಯಕ್ರಮ, 7 ದಂಪತಿಗಳಿಗೆ ಅಂ.ಜಾತಿ ಪ್ರೋತ್ಸಾಹ ಧನ	91%
3	ಆಶ್ರಮಶಾಲೆ,ಹಾಸ್ಟೆಲ್ ಗಳ ದುರಸ್ಥಿ2225-00-102-0-43	25.00	25.00	25.00	2 ಕಟ್ಟಡಗಳು 7 ಕಾಮಗಾರಿ	100%
4	ಪರಿಶಿಷ್ಟ ವರ್ಗಗಳ ಕಲ್ಯಾಣ ಅಧಿಕಾರಿಗಳ ಕಛೇರಿ 2225-00-102-0-46	87.00	87.00	86.34	ಕಛೇರಿ ನಿರ್ವಹಣೆ ಹಾಗೂ ಸಿಬ್ಬಂದಿ ವೇತನ	99%

5	ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ 2225-00-102-0-31	145.20	145.20	145.20	1400 ವಿದ್ಯಾರ್ಥಿಗಳು	100%
6	ಖಾಸಗಿವಿದ್ಯಾರ್ಥಿ ನಿಲಯ ಗಳಿಗೆ ಸಹಾಯಧನ 2225-02-102-0-48	5.00	5.00	0.00	ವಿದ್ಯಾರ್ಥಿಗಳು	–
7	ಆಶ್ರಮಶಾಲೆಗಳು 2225-00-102-0-35	697.63	697.63	612.95	972 ಆಶ್ರಮಶಾಲೆಯ ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿಗಳ ವೇತನ	88%
8	ಗಿರಿಜನಉಪಯೋಜನೆ ಸಿಬ್ಬಂದಿ ವೆಚ್ಚ 2225-00-102-0-45	7.00	7.00	0.00	2 ಸಿಬ್ಬಂದಿಗಳು	--
		1345.53	1345.53	1219.4		
ತಾಲ್ಲೂಕು ಪಂಚಾಯತ್ ಯೋಜನೆಗಳು						
9	ಪರಿಶಿಷ್ಟ ಪಂಗಡದ ವಿದ್ಯಾರ್ಥಿ ವೇತನ 2225-00-102-0-68	142.12	118.44	85.71	7430 ವಿದ್ಯಾರ್ಥಿಗಳು	72%
10	ಕೇಂದ್ರ ಪುರಸ್ಕೃತ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ (9 ಮತ್ತು 10ನೇ ತರಗತಿ ವಿದ್ಯಾರ್ಥಿಗಳಿಗೆ) 2225-00-102-0-09	58.47	50.13	40.46	1722 ವಿದ್ಯಾರ್ಥಿಗಳು	81%
11	ಮೆ. ನಂತರದ ವಿ.ನಿಲಯಗಳಿಗೆ ಹೆಚ್ಚಿನ ಭೋಜನ ಮತ್ತು ವಸತಿ ವೆಚ್ಚ 2225-00-102-0-71	15.00	15.00	14.95	98 ವಿದ್ಯಾರ್ಥಿಗಳು	99%

12	ಪರಿಶಿಷ್ಟ ವರ್ಗದವರಿಗೆ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ 2225-00-102-0-07	288.29	288.29	288.29	550 ವಿದ್ಯಾರ್ಥಿಗಳು	100%
ಜಿಲ್ಲಾ & ತಾಲ್ಲೂಕು ಪಂಚಾಯಿತಿ ಒಟ್ಟು		1849.41	1817.39	1648.81	13795	80%

ಪರಿಶಿಷ್ಟ ಪಂಗಡದ ಉಪಯೋಜನೆ

ಕ್ರ ಸಂ	ಕಾರ್ಯಕ್ರಮಗಳು ಹಾಗೂ ಲೆಕ್ಕಶೀರ್ಷಿಕೆ	ನಿಗದಿ ಪಡಿಸಿದ ಮೊತ್ತ	ಬಿಡುಗಡೆ ಯಾದ ಮೊತ್ತ	ಖರ್ಚು	ಸಾಧನೆಯ ವಿವರ	ಶೇಖಡ ವಾರು
ತಾಲ್ಲೂಕು ಪಂಚಾಯಿತಿ ಕಾರ್ಯಕ್ರಮಗಳು						
1	**ಪರಿಶಿಷ್ಟ ಪಂಗಡದ ಕಾಲೋನಿಗಳಿಗೆ ಮೂಲಭೂತ ಸೌಲಭ್ಯಗಳ ಅಭಿವೃದ್ಧಿ ಲೆಕ್ಕಶೀರ್ಷಿಕೆ:- 2225-00-102-0-69**					
a	ಗ್ರಾಮೀಣ ನೀರು ಸರಬರಾಜು	40.00	40.00	37.74	52 ಕಾಮಗಾರಿಗಳು	94.35
b	ರಸ್ತೆ ಮತ್ತು ಸೇತುವೆ	20.00	20.00	19.79		98.95
2	**ಪರಿಶಿಷ್ಟ ವರ್ಗದ ಕುಟುಂಬಗಳಿಗೆ ಸಹಾಯ 2225-00-102-0-70**					
a	ತೋಟಗಾರಿಕೆ ಇಲಾಖೆ	6.00	6.00	6.00	704 ಫಲಾನುಭವಿಗಳು	100%
b	ಪಶುಸಂಗೋಪನೆ	11.50	11.50	11.40		99%
c	ರೇಷ್ಮೆ ಇಲಾಖೆ	2.55	2.55	2.43		95%
d	ಕೃಷಿ ಇಲಾಖೆ	6.00	6.00	5.99		100%
e	ಗ್ರಾಮೀಣ ಮತ್ತು ಸಣ್ಣಉದ್ಯಮ	3.95	3.95	3.94		100%
ಒಟ್ಟು		**30.00**	**30.00**	**29.76**	**704**	**99.00%**

8. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

2019–20ನೇ ಸಾಲಿನ ವಾರ್ಷಿಕ ಆಡಳಿತ ವರದಿ

ಸಾಮಾಜಿಕವಾಗಿ, ಆರ್ಥಿಕವಾಗಿ ಹಾಗೂ ಶೈಕ್ಷಣಿಕವಾಗಿ ಹಿಂದುಳಿದ ಜನಾಂಗದ ಶ್ರೇಯೋಭಿವೃದ್ಧಿಗಾಗಿ 1977 ರಿಂದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯು ಅಸ್ತಿತ್ವಕ್ಕೆ ಬಂದಿರುತ್ತದೆ. ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿಗಳ ಜಿಲ್ಲಾ ಕಛೇರಿ ಇದ್ದು, ಇಲ್ಲಿ ಈ ಕೆಳಕಂಡಂತೆ ಸಿಬ್ಬಂದಿ ಮಂಜೂರಾಗಿರುತ್ತದೆ.

ಕ್ರ.ಸಂ	ಹುದ್ದೆಯ ವಿವರ	ಮಂಜೂರಾದ ಹುದ್ದೆ	ಭರ್ತಿಯಾದ ಹುದ್ದೆ	ಖಾಲಿ ಹುದ್ದೆ
1	ಜಿಲ್ಲಾ ಅಧಿಕಾರಿಗಳು	01	1	0
2	ಪತ್ರಾಂಕಿತ ವ್ಯವಸ್ಥಾಪಕರು	01	0	1
3	ಕಛೇರಿ ಮೇಲ್ವಿಚಾರಕರು	01	0	1
4	ಲೆಕ್ಕ ಅಧೀಕ್ಷಕರು	01	1	0
5	ಪ್ರಥಮ ದರ್ಜೆ ಸಹಾಯಕರು	02	0	2
6	ದ್ವಿತೀಯ ದರ್ಜೆ ಸಹಾಯಕರು	03	2	1
7	ಬೆರಳಚ್ಚುಗಾರರು	01	0	1
8	ವಾಹನ ಚಾಲಕರು	01	0	1
9	'ಡಿ' ದರ್ಜೆ ನೌಕರರು	01	0	1
	ಒಟ್ಟು	**12**	**04**	**08**

ತಾಲ್ಲೂಕು ಮಟ್ಟದಲ್ಲಿ ಪ್ರತಿ ತಾಲ್ಲೂಕಿನಲ್ಲಿ ತಾಲ್ಲೂಕು ಹಿಂದುಳಿದ ವರ್ಗಗಳ ವಿಸ್ತರಣಾಧಿಕಾರಿಗಳು ರವರು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡುತ್ತಿದ್ದಾರೆ.

ಕಾರ್ಯಕ್ರಮಗಳು:– (2019–20)

ವಿದ್ಯಾಸಿರಿ –_(2225-03-283-0-03)

2019–20 ನೇ ಸಾಲಿನಲ್ಲಿ ಮೆಟ್ರಿಕ್ ನಂತರದ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಹಿಂದುಳಿದ ವರ್ಗಗಳ ಜನಾಂಗಕ್ಕೆ ಸೇರಿದ 733 ವಿದ್ಯಾರ್ಥಿಗಳು ಆನ್ ಲೈನ್ ಮೂಲಕ ಅರ್ಜಿ ಸಲ್ಲಿಸಿದ್ದು, ಅರ್ಹ ವಿದ್ಯಾರ್ಥಿಗಳಿಗೆ ಮಾಹೆಯಾನ ರೂ. 1500/– ರಂತೆ ಶೈಕ್ಷಣಿಕ ವರ್ಷದ 10 ತಿಂಗಳಿಗೆ ಶೇ. 75/–ಕ್ಕಿಂತ ಹೆಚ್ಚು ಹಾಜರಾತಿ ಹೊಂದಿರುವ ವಿದ್ಯಾರ್ಥಿಗಳಿಗೆ ಈ ಯೋಜನೆಯಡಿ ಅನುದಾನವನ್ನು ಮಂಜೂರು ಮಾಡಲಾಗುವುದು. ಪ್ರಸಕ್ತ ಸಾಲಿನಲ್ಲಿ ರೂ. 44.46 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು, 44.44 ಲಕ್ಷಗಳನ್ನು ಖರ್ಚು ಭರಿಸಿದೆ

ಅಲೆಮಾರಿ/ ಅರೆ ಅಲೆಮಾರಿ ಜನಾಂಗದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸಹಾಯಧನ – (2225-03-102-0-12) ಅಲೆಮಾರಿ/ ಅರೆಅಲೆಮಾರಿ ಜನಾಂಗದ ಮಾಧ್ಯಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ವಾರ್ಷಿಕ ರೂ. 2000/– ಗಳನ್ನು ಮಂಜೂರು ಮಾಡಲಾಗುವುದು. ಈ ಯೋಜನೆಯಡಿ ಪ್ರಸಕ್ತ ಯೋಜನೆಯಡಿ ರೂ. 8.86 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು, ರೂ. 8.68 ಲಕ್ಷಗಳನ್ನು ಖರ್ಚು ಭರಿಸಿದೆ.

ಹಿಂದುಳಿದ ವಿದ್ಯಾರ್ಥಿನಿಲಯಗಳ ನಿರ್ವಹಣೆ –_(2225-00-103-0-26) ಜಿಲ್ಲೆಯಲ್ಲಿ 12 ಮೆಟ್ರಿಕ್ ಪೂರ್ವ ಮತ್ತು 12 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು ಹಾಗೂ 05 ಖಾಸಗಿ ಅನುದಾನಿತ ವಿದ್ಯಾರ್ಥಿನಿಲಯಗಳಿದ್ದು, ಒಟ್ಟು ರೂ. 796.63 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು, 1803 ವಿದ್ಯಾರ್ಥಿ/ಸಿಬ್ಬಂದಿಗಳಿಗೆ ಒಟ್ಟು ರೂ. 774.52 ಲಕ್ಷಗಳನ್ನು ಖರ್ಚು ಮಾಡಲಾಗಿದೆ. ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳಿಗೆ ಮಾಹೆಯಾನ ರೂ. 1500/– ರಂತೆ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳ ವಿದ್ಯಾರ್ಥಿಗಳಿಗೆ ಮಾಹೆಯಾನ ರೂ. 1600/– ರಂತೆ ನೀಡಲಾಗುವುದು.

ಶುಲ್ಕ ವಿನಾಯಿತಿ –_(2225-00-103-0-28) & (2225-03-277-2-51)

ಈ ಲೆಕ್ಕಶೀರ್ಷಿಕೆಯಡಿಯಲ್ಲಿ ಸರ್ಕಾರಿ/ಖಾಸಗಿ ಶಾಲಾ ಕಾಲೇಜುಗಳಲ್ಲಿ ಅಧ್ಯಯನ ಮಾಡುತ್ತಿರುವ ಹಿಂದುಳಿದ ವರ್ಗಗಳ ಪ್ರವರ್ಗ–1ರ ವಿದ್ಯಾರ್ಥಿಗಳಿಗೆ ವಾರ್ಷಿಕ ಆದಾಯ ಮಿತಿ ರೂ. 2.50 ಇದ್ದಲ್ಲಿ ಸರ್ಕಾರ ನಿಗಧಿಪಡಿಸಿರುವ ಬೋಧನಾ ಶುಲ್ಕ, ಪರೀಕ್ಷಾ ಶುಲ್ಕ, ಪ್ರಯೋಗಾಲಯ ಶುಲ್ಕ, ಗ್ರಂಥಾಲಯ ಶುಲ್ಕ ಮತ್ತು ಕ್ರೀಡಾ ಶುಲ್ಕ ಹಾಗೂ ಇತರೇ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಅವರ ತಂದೆ, ತಾಯಿ, ಪೋಷಕರ ವಾರ್ಷಿಕ ವರಮಾನ ರೂ. 1.00 ಲಕ್ಷಗಳಿಗಿಂದ ಕಡಿಮೆ ಇದ್ದಲ್ಲಿ ಅಂತಹ ವಿದ್ಯಾರ್ಥಿಗಳ ಶುಲ್ಕ ವಸೂಲಿ ಮಾಡದೇ ಇವರಿಂದ ಸಂಸ್ಥೆಗೆ ಉಂಟಾಗುವ ಶುಲ್ಕದ ನಷ್ಟವನ್ನು ಸರ್ಕಾರಿ ಸಂಸ್ಥೆಗಳಿಗೆ ವಿಧಿಸಿದ ದರದಲ್ಲಿ ಭೋದನಾ ಶುಲ್ಕ, ಪರೀಕ್ಷಾ ಶುಲ್ಕ, ಪ್ರಯೋಗಾಲಯ ಶುಲ್ಕ, ಗ್ರಂಥಾಲಯ ಶುಲ್ಕ, ಕ್ರೀಡಾ ಶುಲ್ಕ ಮರುಪಾವತಿ ಮಾಡಲಾಗುವುದು. ಈ ಉದ್ದೇಶಕ್ಕೆ ಒಟ್ಟು ರೂ. 369.33 ಲಕ್ಷಗಳ ಹಣ ಒದಗಿಸಿದ್ದು, ರೂ. 349.23 ಲಕ್ಷಗಳನ್ನು ಖರ್ಚು ಮಾಡಲಾಗಿದ್ದು, ಈ ಕಾರ್ಯಕ್ರಮದಡಿ 7083 ವಿದ್ಯಾರ್ಥಿಗಳು ಪ್ರಯೋಜನ ಪಡೆದಿರುತ್ತಾರೆ. ರಾಜ್ಯವಲಯ ಯೋಜನೆಯಡಿ 18,700/– ಬಿಡುಗಡೆಯಾಗಿದ್ದು, ಈ ಅನುದಾನವನ್ನು 2084 ವಿದ್ಯಾರ್ಥಿಗಳಿಗೆ ಮಂಜೂರು ಮಾಡಿದೆ.

ಕಾರ್ಯನಿರ್ವಾಹಕ ಸಿಬ್ಬಂದಿ –_(2225-00-103-0-39)ಈ ಲೆಕ್ಕಶೀರ್ಷಿಕೆಯಡಿಯಲ್ಲಿ ರೂ. 51.62 ಲಕ್ಷಗಳು ಬಿಡುಗಡೆಯಾಗಿದ್ದು, ರೂ. 33.93 ಲಕ್ಷಗಳನ್ನು ವಿನಿಯೋಗಿಸಲಾಗಿರುತ್ತದೆ. ಈ ಹಣವನ್ನು ಅಧಿಕಾರಿಗಳ ಹಾಗೂ ಸಿಬ್ಬಂದಿಯವರ ವೇತನ ಪಾವತಿಸಲು ಕಛೇರಿ ವೆಚ್ಚ ಮತ್ತು ಇಲಾಖಾ ವಾಹನ ನಿರ್ವಹಣೆ ಹಾಗೂ ಇಂಧನ ವೆಚ್ಚಕ್ಕೆ ಖರ್ಚು ಮಾಡಲಾಗಿದೆ.

ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯಗಳ ಕಟ್ಟಡಗಳ ನಿರ್ಮಾಣ ಮತ್ತು ವಿಶೇಷ ದುರಸ್ಥಿ – (2225-00-103-0-40) ಈ ಲೆಕ್ಕಶೀರ್ಷಿಕೆಯಡಿಯಲ್ಲಿ ರೂ. 37.23 ಲಕ್ಷಗಳ ಅನುದಾನ ಜಿಲ್ಲಾ ಪಂಚಾಯಿತಿಯಿಂದ ಬಿಡುಗಡೆಯಾಗಿದ್ದು, ರೂ. 37.23 ಲಕ್ಷಗಳನ್ನು ಖರ್ಚು ಮಾಡಿದ್ದು, ಈ ಹಣವನ್ನು 13 ವಿದ್ಯಾರ್ಥಿನಿಲಯಗಳ ಕಟ್ಟಡದ ದುರಸ್ಥಿ ಕಾರ್ಯಕ್ಕೆ ವಿನಿಯೋಗಿಸಲಾಗಿದೆ.

ಶ್ರೀ ಡಿ.ದೇವರಾಜ ಅರಸುರವರ ಹುಟ್ಟುಹಬ್ಬದ ದಿನಾಚರಣೆ –_(2225-00-103-0-56)

ಈ ಲೆಕ್ಕಶೀರ್ಷಿಕೆಯಡಿಯಲ್ಲಿ ರೂ. 1.00 ಲಕ್ಷಗಳು ಬಿಡುಗಡೆ ಮಾಡಿದ್ದು, ರೂ. 1.00 ಲಕ್ಷಗಳನ್ನು ವಿನಿಯೋಗಿಸಿ ಕಾರ್ಯಕ್ರಮವನ್ನು ನಡೆಸಲಾಗಿರುತ್ತದೆ.

ಹಿಂದುಳಿದ ವರ್ಗಗಳ ಕಾನೂನು ಪದವಿಧರರಿಗೆ ಶಿಷ್ಯವೇತನ –_(2225-00-103-0-58)

ಈ ಲೆಕ್ಕಶೀರ್ಷಿಕೆಯಡಿಯಲ್ಲಿ ರೂ. 19.20 ಲಕ್ಷಗಳ ಅನುದಾನ ಜಿಲ್ಲಾ ಪಂಚಾಯಿತಿಯಿಂದ ಬಿಡುಗಡೆಯಾಗಿದ್ದು, ಈ ಪೈಕಿ ರೂ.13.82 ಲಕ್ಷಗಳ ಅನುದಾನವನ್ನು 34 ಹಿಂದುಳಿದ ವರ್ಗಗಳ ಕಾನೂನು ಪದವೀಧರರ ಶಿಷ್ಯವೇತನಕ್ಕಾಗಿ ಖರ್ಚು ಮಾಡಲಾಗಿದೆ.

ಡಿ. **ದೇವರಾಜ ಅರಸು ಪ್ರತಿಭಾ ಪುರಸ್ಕಾರ – (2225-03-277-2-37)**

ಈ ಯೋಜನೆಯಡಿ ಎಸ್.ಎಸ್.ಎಲ್.ಸಿ. ಪಿಯುಸಿ ಮತ್ತು ಪದವಿ ಮತ್ತು ಸ್ನಾತಕೋತ್ತರ ಪದವಿಯಲ್ಲಿ ಶೇ. 90 ಕ್ಕಿಂತ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಕ್ರಮವಾಗಿ ರೂ 10,000/– 15000/– 20000/– ಹಾಗೂ 25000/ ರಂತೆ ಮಂಜೂರು ಮಾಡಲಾಗುವುದು. ಈ ಯೋಜನೆಯಡಿ ಪ್ರಸಕ್ತ ಸಾಲಿನಲ್ಲಿ ಎಸ್.ಎಸ್.ಎಲ್.ಸಿ. 8 ವಿದ್ಯಾರ್ಥಿಗಳಿಗೆ ಹಾಗೂ 7 ಪಿಯುಸಿ ವಿದ್ಯಾರ್ಥಿಗಳಿಗೆ ರೂ 1.85 ಲಕ್ಷಗಳು ಹಾಗೂ ಪದವಿ ಮತ್ತು ಸ್ನಾತಕೋತ್ತರ ಪದವಿಯಲ್ಲಿ ಶೇ. 70/– ಕ್ಕಿಂತ ಹೆಚ್ಚು ಅಂಕ ಪಡೆದ 17 ವಿದ್ಯಾರ್ಥಿಗಳಿಗೆ ರೂ. 3.40 ಲಕ್ಷಗಳು ಒಟ್ಟು ಸೇರಿ ರೂ. 5.25 ಲಕ್ಷಗಳು ಬಿಡುಗಡೆಯಾಗಿದ್ದು, ರೂ. 5.25 ಲಕ್ಷಗಳನ್ನು ಖರ್ಚು ಮಾಡಲಾಗಿದೆ.

ಜಿ.ಎನ್.ಎಂ. ಮತ್ತು ಬಿಎಸ್ಸಿ ನರ್ಸಿಂಗ್ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಶಿಷ್ಯವೇತನ –(2225-03-277-2-37) 2019–20 ನೇ ಸಾಲಿನಲ್ಲಿ ಹಿಂದುಳಿದ ವರ್ಗಗಳ ಜನಾಂಗದ ವಿದ್ಯಾರ್ಥಿಗಳು ಜಿ.ಎನ್.ಎಂ. ಮತ್ತು ಬಿ.ಎಸ್ಸಿ ನರ್ಸಿಂಗ್ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ವಾರ್ಷಿಕ ರೂ. 5000/– ರಂತೆ ಶಿಷ್ಯವೇತನವನ್ನು ಮಂಜೂರು ಮಾಡಲಾಗುವುದು. ಪ್ರಸಕ್ತ ಸಾಲಿನಲ್ಲಿ ಈ ಯೋಜನೆಯಡಿ ರೂ 12.94 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು, ರೂ. 12.78 ಲಕ್ಷಗಳ ಖರ್ಚು ಭರಿಸಿದೆ. ಈ ಅನುದಾನವನ್ನು 213 ವಿದ್ಯಾರ್ಥಿಗಳಿಗೆ ಮಂಜೂರು ಮಾಡಿದೆ.

ಸಮುದಾಯ ಭವನ ಕಟ್ಟಡಗಳಿಗೆ ಸಹಾಯಧನ – (2225-03-001-0-05)

ಹಿಂದುಳಿದ ವರ್ಗಗಳ ಜನಾಂಗದ ವಿವಿಧ ಸಮುದಾಯದವರು ನಿರ್ಮಿಸಲು ಉದ್ದೇಶಿಸಿರುವ ಸಮುದಾಯ ಭವನ/ ವಿದ್ಯಾರ್ಥಿ ನಿಲಯಗಳ ಕಟ್ಟಡ ನಿರ್ಮಾಣಕ್ಕೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ರೂ. 10.00 ಲಕ್ಷ ತಾಲ್ಲೂಕು ಮಟ್ಟದಲ್ಲಿ ರೂ. 25.00 ಲಕ್ಷ ಹಾಗೂ ಜಿಲ್ಲಾ ಮಟ್ಟದಲ್ಲಿ ರೂ. 50.00 ಲಕ್ಷಗಳ ಸಹಾಯಧನವನ್ನು ಮಂಜೂರು ಮಾಡಲಾಗುತ್ತಿದೆ. ಈ ಯೋಜನೆಯಡಿ ಪ್ರಸಕ್ತ ಸಾಲಿನಲ್ಲಿ ರೂ. 390.00 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು, 50 ಸಂಸ್ಥೆಗಳಿಗೆ ಬಿಡುಗಡೆ ಮಾಡಲಾಗಿದೆ.

ತಾಲ್ಲೂಕು ಪಂಚಾಯತ್ ಕಾರ್ಯಕ್ರಮಗಳು

ಮೆಟ್ರಿಕ್ ನಂತರ ಮತ್ತು ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ – (2225-00-103-0-66) ಮತ್ತು (2225-03-277-2-51 & 52) ಈ ಲೆಕ್ಕಶೀರ್ಷಿಕೆಯಡಿಯಲ್ಲಿ 5ನೇ ತರಗತಿಯಿಂದ 10ನೇ ತರಗತಿ ಹಾಗೂ ಮೆಟ್ರಿಕ್ ನಂತರದ ವಿವಿಧ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಮಂಜೂರು ಮಾಡಲಾಗುತ್ತಿದೆ. ಈ ಉದ್ದೇಶಕ್ಕೆ ರೂ. 163.05 ಲಕ್ಷಗಳು ಬಿಡುಗಡೆಯಾಗಿದ್ದು, ಒಟ್ಟು ರೂ. 105.04 ಲಕ್ಷಗಳು ಖರ್ಚಾಗಿದ್ದು, 7124 ವಿದ್ಯಾರ್ಥಿಗಳು ಪ್ರಯೋಜನ ಪಡೆದಿರುತ್ತಾರೆ. ರಾಜ್ಯವಲಯ ಯೋಜನೆಯಡಿ 323.45 ಲಕ್ಷಗಳು ಬಿಡುಗಡೆಯಾಗಿದ್ದು, 314.17 ಲಕ್ಷಗಳನ್ನು ಖರ್ಚು ಮಾಡಲಾಗಿದ್ದು, ಈ ಅನುದಾನವನ್ನು 35,541 ವಿದ್ಯಾರ್ಥಿಗಳಿಗೆ ಮಂಜೂರು ಮಾಡಿದೆ.

ವಿದ್ಯಾರ್ಥಿನಿಲಯಗಳ ಸುಧಾರಣೆ – (2225-00-103-0-72)

ಈ ಲೆಕ್ಕಶೀರ್ಷಿಕೆಯಡಿಯಲ್ಲಿ ರೂ. 30.00 ಲಕ್ಷಗಳ ಅನುದಾನ ಒದಗಿಸಿದ್ದು, ರೂ. 30.00 ಲಕ್ಷ ಖರ್ಚು ಮಾಡಿ 13 ವಿದ್ಯಾರ್ಥಿನಿಲಯಗಳಿಗೆ ಅಗತ್ಯ ಸಾಮಾಗ್ರಿ ಖರೀದಿ ಹಾಗೂ ಪೀಠೋಪರಕರಣಗಳ ದುರಸ್ಥಿ ಕಾರ್ಯಕ್ಕಾಗಿ ವೆಚ್ಚ ಭರಿಸಲಾಗಿದೆ.

12. ಖಾಸಗಿ ಅನಾಥಾಲಯಗಳಿಗೆ ಸಹಾಯಧನ –_(2225-00-103-0-73)

ಈ ಲೆಕ್ಕಶೀರ್ಷಿಕೆಯಡಿಯಲ್ಲಿ ಖಾಸಗಿ ಸಂಸ್ಥೆಯವರು 07 ಅನಾಥಾಲಯಗಳಿಗೆ ಪ್ರತಿ ವಿದ್ಯಾರ್ಥಿಗೆ ಮಾಹೆಯಾನ ರೂ. 800/–ರಂತೆ ಊಟದ ವೆಚ್ಚಕ್ಕಾಗಿ 12 ತಿಂಗಳಿಗೆ ಸಹಾಯಧನ ನೀಡಲಾಗುತ್ತಿದೆ. ಈ ಉದ್ದೇಶಕ್ಕೆ ರೂ. 51.17 ಲಕ್ಷಗಳು ಒದಗಿಸಿದ್ದು, ಈ ಪೈಕಿ ರೂ. 35.39 ಲಕ್ಷಗಳ ಅನುದಾನ ಖರ್ಚು ಮಾಡಲಾಗಿದೆ. ಇದರಲ್ಲಿ 444 ವಿದ್ಯಾರ್ಥಿಗಳು ಪ್ರಯೋಜನ ಪಡೆದಿರುತ್ತಾರೆ.

ಹಿಂದುಳಿದ ವರ್ಗಗಳ ನಿರ್ದೇಶನಾಲಯದ ಕಾರ್ಯಕಾರಿವೆಚ್ಚ (ತಾಲ್ಲೂಕು ಮಟ್ಟದಲ್ಲಿ ವಿಸ್ತರಣಾಧಿಕಾರಿ) – (2225-00-103-0-74)ಈ ಶೀರ್ಷಿಕೆಯಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ 04 ಹಿಂದುಳಿದ ವರ್ಗಗಳ ವಿಸ್ತರಣಾಧಿಕಾರಿಗಳವರ ವೇತನೇತರಕ್ಕಾಗಿ ರೂ. 10.00 ಲಕ್ಷಗಳನ್ನು ಒದಗಿಸಿದ್ದು, ರೂ. 10.00 ಲಕ್ಷಗಳ ಅನುದಾನವನ್ನು ಕಛೇರಿ ನಿರ್ವಹಣೆಗಾಗಿ ಖರ್ಚು ಮಾಡಲಾಗಿರುತ್ತದೆ.

ಹೊಲಿಗೆ ತರಬೇತಿ ಕೇಂದ್ರಗಳು –_(2225-00-103-0-78)

ಈ ಲೆಕ್ಕಶೀರ್ಷಿಕೆಯಡಿಯಲ್ಲಿ ಗುಂಡ್ಲುಪೇಟೆ ಟೌನ್‌ನಲ್ಲಿ 20 ಸಂಖ್ಯಾಬಲವುಳ್ಳ ಮಹಿಳಾ ಹೊಲಿಗೆ ತರಬೇತಿ ಕೇಂದ್ರ ನಡೆಯುತ್ತಿದ್ದು, ಇಲ್ಲಿ 20 ಮಹಿಳಾ ಅಭ್ಯರ್ಥಿಗಳು ಹೊಲಿಗೆಯಲ್ಲಿ ತರಬೇತಿ ಪಡೆಯುತ್ತಿದ್ದು, ಇವರ ಶಿಷ್ಯವೇತನ ಹಾಗೂ ಹೊಲಿಗೆಯಂತ್ರ ವಿತರಣೆಗೆ ಒಟ್ಟು ರೂ. 4.17 ಲಕ್ಷಗಳು ಬಿಡುಗಡೆಯಾಗಿದ್ದು, ರೂ. 4.17 ಲಕ್ಷಗಳನ್ನು ಖರ್ಚು ಮಾಡಲಾಗಿದೆ.

ವಿದ್ಯಾರ್ಥಿನಿಲಯಗಳಲ್ಲಿರುವವರಿಗೆ ಪ್ರೋತ್ಸಾಹಕಗಳು –_(2225-00-103-0-79)

ಈ ಲೆಕ್ಕಶೀರ್ಷಿಕೆಯಡಿಯಲ್ಲಿ ವಿದ್ಯಾರ್ಥಿನಿಲಯಗಳಲ್ಲಿದ್ದು, ವಾರ್ಷಿಕ ಪಬ್ಲಿಕ್ ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ ನೀಡಲಾಗಿದ್ದು, ಈ ಬಾಬ್ತಿಗೆ ರೂ. 15.50 ಲಕ್ಷ ಬಿಡುಗಡೆಯಾಗಿದ್ದು, ರೂ. 6.67 ಲಕ್ಷ ಖರ್ಚು ಮಾಡಲಾಗಿದೆ. ಇದರಲ್ಲಿ 240 ವಿದ್ಯಾರ್ಥಿಗಳು ಪ್ರಯೋಜನ ಪಡೆದಿರುತ್ತಾರೆ.

9. ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ

ಸಿಬ್ಬಂದಿ ವಿವರ

ಕ್ರ.ಸಂ	ಪದನಾಮ	ಮಂಜೂರಾದ ಹುದ್ದೆಗಳ ಸಂಖ್ಯೆ	ಭರ್ತಿಯಾದ ಹುದ್ದೆ	ಖಾಲಿ ಹುದ್ದೆ
1	ಜಿಲ್ಲಾ ಅಧಿಕಾರಿಗಳು	01	0	1
2	ಪ್ರಥಮ ದರ್ಜೆ ಸಹಾಯಕರು	02	0	2
3	ದ್ವಿತೀಯ ದರ್ಜೆ ಸಹಾಯಕರು	02	2	0
4	'ಡಿ' ದರ್ಜೆ ನೌಕರರು	01	0	1
5	ವಾಹನ ಚಾಲಕರು	01	0	1
	ಒಟ್ಟು	**7**	**2**	**5**

ತಾಲ್ಲೂಕು ಮಟ್ಟದಲ್ಲಿ ಕೊಳ್ಳೇಗಾಲ ಹಾಗೂ ಚಾಮರಾಜನಗರ ತಾಲ್ಲೂಕಿನಲ್ಲಿ ಅಲ್ಪಸಂಖ್ಯಾತರ ತಾಲ್ಲೂಕು ವಿಸ್ತರಣಾಧಿಕಾರಿಗಳ ಎರಡು ಹುದ್ದೆ ಮಂಜೂರಾಗಿರುತ್ತದೆ.

ಜಿಲ್ಲಾವಲಯ ಕಾರ್ಯಕ್ರಮಗಳು:– (2019–20).

1) **ಅಲ್ಪಸಂಖ್ಯಾತರ ಮೆಟ್ರಿಕ್ ನಂತರದ ಬಾಲಕ/ಬಾಲಕಿಯರ ವಿದ್ಯಾರ್ಥಿ ನಿಲಯಗಳ ನಿರ್ವಹಣೆ 2225–00–103–0–34.**

ಚಾಮರಾಜನಗರ ಟೌನ್‌ನಲ್ಲಿ 01 ಮೆಟ್ರಿಕ್ ನಂತರದ 50 ಸಂಖ್ಯಾಬಲದ ಬಾಲಕಿಯರ ವಿದ್ಯಾರ್ಥಿನಿಲಯ ಹಾಗೂ 75 ಸಂಖ್ಯಾಬಲದ ಬಾಲಕರ ವಿದ್ಯಾರ್ಥಿನಿಲಯವು ಮತ್ತು ಗುಂಡ್ಲುಪೇಟೆ ಟೌನ್‌ನಲ್ಲಿ 50 ಸಂಖ್ಯಾಬಲದ ಬಾಲಕರ ವಿದ್ಯಾರ್ಥಿನಿಲಯವು ಕಾರ್ಯನಿರ್ವಹಿಸುತ್ತಿದ್ದು, ಸದರಿ ವಿದ್ಯಾರ್ಥಿನಿಲಯಗಳ ನಿರ್ವಹಣೆಗಾಗಿ ಒಟ್ಟು ರೂ. 98.54 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು, ಒಟ್ಟು ರೂ.86.06 ಲಕ್ಷಗಳ ಅನುದಾನವು ಖರ್ಚಾಗಿರುತ್ತದೆ.

2) **.ಅಲ್ಪಸಂಖ್ಯಾತರ ವರ್ಗಗಳ ಕಾನೂನು ಪದವಿಧರರಿಗೆ ಶಿಷ್ಯವೇತನ 2225–00–103–0–44**

ಈ ಲೆಕ್ಕಶೀರ್ಷಿಕೆಯಡಿಯಲ್ಲಿ ರೂ.1.80ಲಕ್ಷಗಳ ಅನುದಾನ ಜಿಲ್ಲಾ ಪಂಚಾಯತಿಯಿಂದ ಬಿಡುಗಡೆಯಾಗಿದ್ದು, ಈ ಪೈಕಿ ರೂ. 0.80 ಲಕ್ಷಗಳ ಅನುದಾನವನ್ನು 02 ಅಲ್ಪಸಂಖ್ಯಾತರ ವರ್ಗಗಳ ಕಾನೂನು ಪದವೀಧರರ ಶಿಷ್ಯವೇತನಕ್ಕಾಗಿ ಖರ್ಚು ಮಾಡಲಾಗಿದೆ.

3) **.ಕಛೇರಿ ನಿರ್ವಹಣೆ ಹಾಗೂ ಸಿಬ್ಬಂದಿ ವೇತನ 2225–00–103–0–51**

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಕಛೇರಿ ನಿರ್ವಹಣೆ ಹಾಗೂ ವೇತನಕ್ಕಾಗಿ ರೂ. 33.75ಲಕ್ಷಗಳ ಅನುದಾನವು ಜಿಲ್ಲಾ ಪಂಚಾಯತಿಯಿಂದ ಬಿಡುಗಡೆಯಾಗಿದ್ದು, ಈ ಪೈಕಿ ರೂ. 33.56 ಲಕ್ಷಗಳ ಅನುದಾನವನ್ನು ಖರ್ಚು ಮಾಡಲಾಗಿದೆ.

10. ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಚಾಮರಾಜನಗರ

ಭಾರತ ಸರ್ಕಾರವು 1975 ರಿಂದ ಸಮಗ್ರ ಶಿಶು ಅಭಿವೃದ್ಧಿ ಯೋಜನೆಯನ್ನು ಜಾರಿಗೊಳಿಸಿದ್ದು, 06 ತಿಂಗಳಿನಿಂದ 06 ವರ್ಷದ ಮಕ್ಕಳು, ಗರ್ಭಿಣಿ, ಬಾಣಂತಿಯರು ಮತ್ತು ಕಿಶೋರಿಯರ ಆರೋಗ್ಯ, ಅಪೌಷ್ಠಿಕತೆಯ ಮಟ್ಟ ಹಾಗೂ ಬಾಲ್ಯ ಪೂರ್ವ ಶಿಕ್ಷಣದ ಜೊತೆಗೆ ಮಕ್ಕಳ ಆರೋಗ್ಯ ಮತ್ತು ಪೌಷ್ಠಿಕತೆಯ ಮಟ್ಟವನ್ನು ವೃದ್ಧಿಸುವುದು, ಮಗುವಿನ ದೈಹಿಕ, ಮಾನಸಿಕ ಮತ್ತು ಸಾಮಾಜಿಕ ಬೆಳವಣಿಗೆಗೆ ಭದ್ರ ಅಡಿಪಾಯ ಹಾಕುವುದು, ಮಕ್ಕಳಲ್ಲಿನ ಅನಾರೋಗ್ಯ, ಅಪೌಷ್ಠಿಕತೆ, ಮತ್ತು ಶಾಲಾ ಬಿಡುವಿಕೆಯ ಪ್ರಮಾಣವನ್ನು ಕಡಿಮೆಗೊಳಿಸುವುದು, ಗರ್ಭಿಣಿ ಮತ್ತು ಬಾಣಂತಿಯರ ಆರೋಗ್ಯ ಮತ್ತು ಪೌಷ್ಠಿಕತೆಯ ಅಗತ್ಯತೆ/ಸಾಮರ್ಥ್ಯವನ್ನು ಹೆಚ್ಚಿಸುವುದು ಇಲಾಖೆಯ ಉದ್ದೇಶವಾಗಿದೆ.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಚಾಮರಾಜನಗರ–ಹುದ್ದೆಗಳ ಮಾಹಿತಿ

ಕ್ರ.ಸಂ	ಪದನಾಮ	ಮಂಜೂರು	ಭರ್ತಿ	ಖಾಲಿ
1	ಉಪ ನಿರ್ದೇಶಕರು	1	1	0
2	ನಿರೂಪಣಾಧಿಕಾರಿಗಳು	1	1	0
3	ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಅಧಿಕಾರಿ	1	0	1
4	ಕಛೇರಿ ಅಧೀಕ್ಷಕರು	2	2	0
5	ಆಹಾರ ನಿರೀಕ್ಷಕರು	2	0	2
6	ಬೆರಳಚ್ಚುಗಾರರು	2	0	2
7	ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು	5	4	1
8	ಸಹಾಯಕ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು	7	3	4
9	ಮೇಲ್ವಿಚಾರಕಿಯರು	54	13	41
10	ಪ್ರಥಮ ದರ್ಜೆ ಸಹಾಯಕರು	19	8	11
11	ದ್ವಿತೀಯ ದರ್ಜೆ ಸಹಾಯಕರು	7	4	3
12	ಡ್ರೈವರ್	7	2	5
13	ಗ್ರೂಪ್ ಡಿ	12	5	7
ಒಟ್ಟು		**120**	**43**	**77**
1	ಅಂಗನವಾಡಿ ಕಾರ್ಯಕರ್ತೆಯರು	1421	1384	37
2	ಅಂಗನವಾಡಿ ಸಹಾಯಕಿಯರು	1371	1294	77
ಒಟ್ಟು		**2792**	**2678**	**114**
ಎಲ್ಲ ಹುದ್ದೆಗಳ ಒಟ್ಟು		**2912**	**2721**	**191**

ವಿವಿಧ ಯೋಜನೆ: ಕಾರ್ಯಕ್ರಮಗಳ ಪ್ರಗತಿಯ ವಿವರ ಕೆಳಕಂಡಂತಿದೆ:

ಶಾಲಾ ಪೂರ್ವ ಮಕ್ಕಳಿಗೆ ಪೂರಕ ಪೌಷ್ಠಿಕ ಆಹಾರ ಕಾರ್ಯಕ್ರಮ :

ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಡಿ ನಡೆಸಲಾಗುತ್ತಿರುವ ಈ ಕಾರ್ಯಕ್ರಮದಡಿ ಜಿಲ್ಲೆಯ 1421 ಅಂಗನವಾಡಿ ಕೇಂದ್ರಗಳ ಮೂಲಕ 06 ವರ್ಷದೊಳಗಿನ 63712 ಮಕ್ಕಳಿಗೆ, 11579 ಗರ್ಭಿಣಿಯರಿಗೆ: ಬಾಣಂತಿಯರಿಗೆ, 169 ಪ್ರಾಯಪೂರ್ವ ಬಾಲಕಿಯರು ಮತ್ತು 1421 ಅಂಗನವಾಡಿ ಕಾರ್ಯಕರ್ತೆಯರಿಗೆ ಹಾಗೂ 1371 ಅಂಗನವಾಡಿ ಸಹಾಯಕಿಯರಿಗೆ ಎಲ್ಲಾ ಸೇರಿದಂತೆ ಒಟ್ಟು 78252 ಫಲಾನುಭವಿಗಳಿಗೆ ವಾರ್ಷಿಕ ಸರಾಸರಿ 300 ದಿನಗಳು ಪೂರಕ ಪೌಷ್ಠಿಕ ಆಹಾರವನ್ನು ವಿತರಿಸಲಾಗಿದೆ. ಈ ಪೈಕಿ ಪರಿಶಿಷ್ಠ ಜಾತಿಯ 20873 ಮತ್ತು ಪರಿಶಿಷ್ಟ ಪಂಗಡದ 9355 ಹಾಗೂ ಅಲ್ಪಸಂಖ್ಯಾತ 7466 ಫಲಾನುಭವಿಗಳು ಈ ಪ್ರಯೋಜನ ಪಡೆದಿರುತ್ತಾರೆ. 2019–20ನೇ ಸಾಲಿನಲ್ಲಿ 3153.75 ಲಕ್ಷ ಬಿಡುಗಡೆಯಾಗಿರುತ್ತದೆ. ಒಟ್ಟಾರೆ ರೂ.2453.77 ಲಕ್ಷ ಖರ್ಚು ಭರಿಸಲಾಗಿದೆ.

ಅ) ಮಾತೃ ಪೂರ್ಣ ಯೋಜನೆ

ಮಾತೃ ಪೂರ್ಣ ಯೋಜನೆಯು ಅಕ್ಟೋಬರ್ 2, 2017ರಿಂದ ಪ್ರಾರಂಭವಾಗಿದ್ದು, ಈ ಯೋಜನೆಯಡಿ

ಹೆರಿಗೆ ಸಮಯದಲ್ಲಿ ಗರ್ಭಿಣಿ ತಾಯಂದಿರು ಹಾಗೂ ಶಿಶುಗಳ ಮರಣ ಪ್ರಮಾಣವನ್ನು ತಡೆಗಟ್ಟುವುದು, ಗರ್ಭಿಣಿ ಹಾಗೂ ಬಾಣಂತಿಯರಲ್ಲಿ ಅಪೌಷ್ಠಿಕತೆ ತಡೆಗಟ್ಟುವುದು, ಉತ್ತಮ ಆರೋಗ್ಯ ಬೆಳವಣಿಗೆ ಮೂಲಕ ರಕ್ತಹೀನತೆ ಕಡಿಮೆಗೊಳಿಸುವುದು ಹಾಗೂ ಕಡಿಮೆ ತೂಕದ ಶಿಶುಗಳ ಜನನ ತಡೆಗಟ್ಟುವುದು ಈ ಯೋಜನೆಯ ಉದ್ದೇಶವಾಗಿದೆ. ಈ ಯೋಜನೆಯಲ್ಲಿ 5831 ಗರ್ಭಿಣಿಯರು ಮತ್ತು 5748 ಬಾಣಂತಿಯರು ಪ್ರಯೋಜನ ಪಡೆಯುವಂತೆ ಗುರಿ ಹೊಂದಲಾಗಿದೆ. ಈ ಯೋಜನೆಯಲ್ಲಿ ಪ್ರತಿಯೊಬ್ಬರಿಗೆ ಪ್ರತಿದಿನ 21 ರೂ.ಗಳ ಘಟಕ ವೆಚ್ಚದಲ್ಲಿ ತಿಂಗಳಲ್ಲಿ 25 ದಿನಗಳು ಮಧ್ಯಾಹ್ನದ ಪೌಷ್ಠಿಕ ಆಹಾರ, (ಅನ್ನ, ಸಾಂಬರ್, ಬೆಲ್ಲ ಮತ್ತು ಕಡ್ಲೆಕಾಯಿ ಮಿಶ್ರಣದ ಚಿಕ್ಕಿ, ತರಕಾರಿ) ಮೊಟ್ಟೆ, ಹಾಗೂ 200 ಮಿ.ಲಿ ಹಾಲನ್ನು ನೀಡಲಾಗುತ್ತಿದೆ.

ಆ) ಪ್ರಧಾನಮಂತ್ರಿ ಮಾತೃವಂದನಾ ಯೋಜನೆ (PMMVY):

ಕೇಂದ್ರ ಸರ್ಕಾರವು ಪ್ರಧಾನಮಂತ್ರಿಗಳ ಪ್ಯಾನ್ ಇಂಡಿಯಾ ಅಡಿಯಲ್ಲಿ "ಪ್ರಧಾನಮಂತ್ರಿ ಮಾತೃವಂದನಾ ಯೋಜನೆ" (Maternity Benefit Scheme) ಎಂಬ ಹೊಸ ಯೋಜನೆಯನ್ನು ಲೆಕ್ಕಶೀರ್ಷಿಕೆ:– 101–01–2017 ರಿಂದ ಜಾರಿಗೆ ಬರುತ್ತದೆ. ಅದರನ್ವಯ ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ 2017–18ನೇ ಸಾಲಿನಿಂದ ಜಿಲ್ಲೆಯಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆ. ಈ ಯೋಜನೆಯಡಿಯಲ್ಲಿ ಪೂರ್ವನ್ವಯವಾಗುವಂತೆ ದಿನಾಂಕ:01–04–2016ರ ನಂತರ ಗರ್ಭಿಣಿಯಾದ (ಸರ್ಕಾರಿ ನೌಕರರನ್ನು ಹೊರತುಪಡಿಸಿ)ಎಲ್ಲಾ ಮೊದಲ ಪ್ರಸವದ ಮಹಿಳೆಯರಿಗೆ ರೂ.5000/– ಗಳ ಸಹಾಯಧನವನ್ನು ಮೂರು ಕಂತುಗಳ ಮೂಲಕ ನೇರ ನಗದು ವರ್ಗಾವಣೆಯ ಮೂಲಕ ಫಲಾನುಭವಿಗಳ ಆಧಾರ್ ಲಿಂಕ್ ಬ್ಯಾಂಕ್ ಖಾತೆಗೆ ನೇರವಾಗಿ ಖಾತೆಗೆ ವರ್ಗಾಯಿಸಲಾಗುವುದು. ಈ ನಿಟ್ಟಿನಲ್ಲಿ ಏಪ್ರಿಲ್–2018 ರಿಂದ ಫೆಬ್ರವರಿ–2020ರ ಸಾಲಿನಲ್ಲಿ ಶೇಕಡವಾರು 95 ರಷ್ಟು ಫಲಾನುಭವಿಗಳನ್ನು ನೊಂದಣಿ ಮಾಡಿ ಇಡೀ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದು ಪ್ರಶಂಸೆಗೆ ಪಾತ್ರವಾಗಿದೆ. ಅಂತೇಯೇ ಜಿಲ್ಲೆಯಲ್ಲಿ 2019–20ನೇ ಸಾಲಿನಲ್ಲಿ **4823** ಫಲಾನುಭವಿಗಳು ಆರ್ಥಿಕ ಪ್ರಯೋಜನ ಪಡೆದಿದ್ದಾರೆ.

ಇ) ಮುಖ್ಯಮಂತ್ರಿ ಮಾತೃಶ್ರೀ ಯೋಜನೆ :

ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆ ಯೋಜನೆಯಾದ ಮುಖ್ಯಮಂತ್ರಿ ಮಾತೃಶ್ರೀ ಯೋಜನೆಯು 1ನೇ ನವೆಂಬರ್ 2018ರಂದು ರಾಜ್ಯಾದ್ಯಂತ ಜಾರಿಯಾಗಿದ್ದು, ಈ ಯೋಜನೆಯಡಿ ಆದ್ಯತಾ ಕುಟುಂಬದ (ಬಿಪಿಎಲ್ ಕಾರ್ಡುದಾರರು) ಮೊದಲ ಎರಡು ಪ್ರಸವದ ಗರ್ಭಿಣಿಯರಿಗೆ ಗರ್ಭಿಣಿಯ ಕೊನೆಯ 3 ತಿಂಗಳು ಮಾಸಿಕ ರೂ.1000/–ರಂತೆ ಹಾಗೂ ಹೆರಿಗೆ ನಂತರದ ಮೊದಲ 3 ತಿಂಗಳ ಮಾಸಿಕ ರೂ.1000/–ಗಳಂತೆ ಒಟ್ಟು ರೂ.6000/–ಗಳನ್ನು ಫಲಾನುಭವಿಗಳ ಆಧಾರ್ ಲಿಂಕ್ ಬ್ಯಾಂಕ್ ಖಾತೆಗೆ ನೇರವಾಗಿ ಸಹಾಯಧನವನ್ನು ವರ್ಗಾಯಿಸಲಾಗುತ್ತದೆ. ಈ ಯೋಜನೆಯಡಿ ಜಿಲ್ಲೆಯಾದ್ಯಂತ ಸೇವಾ ಸಿಂಧು ವೆಬ್‌ಪೋರ್ಟಲ್‌ನಲ್ಲಿ ಈವರೆಗೆ ಏಪ್ರಿಲ್–2019 ರಿಂದ 2020 ಏಪ್ರಿಲ್– ಒಟ್ಟು 9574 ಫಲಾನುಭವಿಗಳು ನೋಂದಾಯಿಸಿದ್ದಾರೆ.

ಈ) ರಾಷ್ಟ್ರೀಯ ಪೋಷಣ ಅಭಿಯಾನ ಯೋಜನೆ:

ಕೇಂದ್ರ ಸರ್ಕಾರದ ಮಹತ್ವಕಾಂಕ್ಷೆ ಯೋಜನೆಯಾದ ರಾಷ್ಟ್ರೀಯ ಪೋಷಣ ಅಭಿಯಾನ ಯೋಜನೆಯನ್ನು ಜಿಲ್ಲೆಯಲ್ಲಿ 2018 ರಿಂದ ಅನುಷ್ಠಾನಗೊಳಿಸಲಾಗಿದ್ದು, ಈ ಯೋಜನೆ ಮುಖ್ಯವಾಗಿ ಅಪೌಷ್ಟಿಕತೆ ರಕ್ತಹೀನತೆ ಮುಂತಾದವುಗಳನ್ನು ಹೋಗಲಾಡಿಸುವುದರ ಜೊತೆಗೆ ಮಹಿಳೆಯರ ಮತ್ತು ಮಕ್ಕಳ ಸರ್ವತೋಮುಖ ಅಭಿವೃದ್ಧಿಗೆ ಪೂರಕವಾಗಿದೆ. ಸಮುದಾಯ ಆಧಾರಿತ ಚಟುವಟಿಕೆಗಳು ಈ ಯೋಜನೆಯ ಮುಖ್ಯ ಭಾಗವಾಗಿದೆ. ಈ ನಿಟ್ಟಿನಲ್ಲಿ ಜನಾಂಧೋಲನ ಪರಿಕಲ್ಪನೆ ಮೂಲಕ ಫಲಾನುಭವಿಗಳು ಅಷ್ಟೆ ಅಲ್ಲದೇ ಅವರ ಕುಟುಂಬ ಸಮುದಾಯ ಹಾಗೂ ಚುನಾಯಿತ ಪ್ರತಿನಿಧಿಗಳು ವಿವಿಧ ಚಟುವಟಿಕೆಗಳಲ್ಲಿ ಭಾಗವಹಿಸುವಂತೆ ಪ್ರೇರೇಪಿಸಿ ತಾಯಿ ಮತ್ತು ಮಗುವಿನ ಆರೈಕೆಗೆ ಹೆಚ್ಚಿನ ಪ್ರಾಮುಖ್ಯತೆಯೊಂದಿಗೆ ಇತರೆ ಅವಶ್ಯಕ ವಿಷಯಗಳ ಕುರಿತು ಜಾಗೃತಿ ಶಿಕ್ಷಣ ಮೂಡಿಸುವುದಾಗಿದೆ.

ಪೋಷಣ ಅಭಿಯಾನದ ಪ್ರಮುಖ ಕಾರ್ಯಕ್ರಮಗಳು

1.ಗರ್ಭಿಣಿ ಬಾಣಂತಿಯರ ಸಭೆ:

2.ಅನ್ನಪ್ರಾಶನ ದಿವಸ

3.ಪೋಷಣ ದಿವಸ

4.ಶಾಲಾಪೂರ್ವ ಶಿಕ್ಷಣಕ್ಕೆ ದಾಖಲಿಸುವ ಬಗ್ಗೆ ಅರಿವು

5. ಸಾರ್ವಜನಿಕ ಆರೋಗ್ಯಕ್ಕೆ ಸಂಬಂದಿಸಿದಂತೆ ತಿಳುವಳಿಕೆ ಮೂಡಿಸುವುದು.

ನಮ್ಮ ಜಿಲ್ಲೆಯಲ್ಲಿ ಎಲ್ಲಾ ಅಂಗನವಾಡಿ ಕೇಂದ್ರಗಳಲ್ಲಿ ಪ್ರತಿ ತಿಂಗಳಲ್ಲಿ ತಲಾ ಎರಡು ಸಮುದಾಯ ಆಧಾರಿತ ಚಟುವಟಿಕೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಅಲ್ಲದೇ ಸೆಪ್ಟಂಬರ್ ಮಾಸದಲ್ಲಿ ಪೋಷಣ ದಿವಸ & ಪೋಷಣ ಮಾಸಚರಣೆ ಮಾಡಿರುವುದಲ್ಲದೇ ಸಮನ್ವಯ ಕಲಾ ತಂಡ ಶಿವಮೊಗ್ಗ ಇವರಿಂದ ಜಿಲ್ಲೆಯಾದ್ಯಂತ ಪ್ರತಿ ಯೋಜನೆಗಳಲ್ಲಿ ಬೀದಿ ನಾಟಕ ಹಾಗೂ ಗೋಡೆಬರಹದೊಂದಿಗೆ ಯೋಜನೆ ಕುರಿತು ಸಾರ್ವಜನಿಕರಿಗೆ ಅರಿವು ಮೂಡಿಸಲಾಗಿದೆ.

ಉ) ಜಿಲ್ಲೆಯಲ್ಲಿ ಮಕ್ಕಳ ಪೌಷ್ಠಿಕತೆಯ ಮಟ್ಟ

ಚಾಮರಾಜನಗರ ಜಿಲ್ಲೆಯಲ್ಲಿ ಕಳೆದ 5 ವರ್ಷಗಳಲ್ಲಿ ತೀವ್ರ ಅಪೌಷ್ಟಿಕ ಮಕ್ಕಳ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಿದ್ದು, 2013–14ನೇ ಸಾಲಿನಲ್ಲಿ 490 ಮಕ್ಕಳಿದ್ದು, 2017–18ನೇ ಸಾಲಿನಲ್ಲಿ 142, 2018–19ನೇ ಸಾಲಿನಲ್ಲಿ 137 ಮತ್ತು 2019–20ನೇ ಸಾಲಿನಲ್ಲಿ 95 ಮಕ್ಕಳ ಸಂಖ್ಯೆಯನ್ನು ಕಾಣಬಹುದು.

ಸರ್ಕಾರದಿಂದ ದೊರೆಯುತ್ತಿರುವ ತೀವ್ರ ಅಪೌಷ್ಠಿಕ ಮಕ್ಕಳಿಗೆ ಪೂರಕ ಪೌಷ್ಠಿಕ ಆಹಾರ ಹಾಗೂ ಹಾಲು, ಮೊಟ್ಟೆ ಮತ್ತು ವೈದ್ಯಕೀಯ ಸೇವಾ ಸೌಲಭ್ಯಗಳನ್ನು ನೇರವಾಗಿ ಫಲಾನುಭವಿಗಳಿಗೆ ನಿರಂತರವಾಗಿ ತಲುಪಿಸುವ ನಿಟ್ಟಿನಲ್ಲಿ ಕಾರ್ಯನಿರತರಾಗಿದ್ದು, ಆರೋಗ್ಯ ಇಲಾಖೆಯ ಸಹಯೋಗದೊಂದಿಗೆ ಪೋಷಕರಲ್ಲಿ ಮತ್ತು ಸಮುದಾಯದಲ್ಲಿ ಈ ಬಗ್ಗೆ ಅರಿವು ಮೂಡಿಸಿ ಸಕಾಲದಲ್ಲಿ ವೈದ್ಯಕೀಯ ನೆರವು ನೀಡಲಾಗುತ್ತಿದೆ.

ಅಂಗನವಾಡಿ ಕೇಂದ್ರದ 06 ತಿಂಗಳಿನಿಂದ 6ವರ್ಷದ ತ್ರೀವ್ರ ಅಪೌಷ್ಠಿಕ ಮಕ್ಕಳಿಗೆ ವಾರದಲ್ಲಿ 5 ದಿನ ಕೋಳಿ ಮೊಟ್ಟೆಯನ್ನು ಮತ್ತು 5 ದಿನ 200 ಎಂ.ಎಲ್ ಹಾಲು ವಿತರಿಸಲಾಗುತ್ತಿದ್ದು, ಮೊಟ್ಟೆಯನ್ನು ಸೇವಿಸದ ಮಕ್ಕಳಿಗೆ ವಾರದಲ್ಲಿ 6 ದಿನವೂ 200 ಎಂ.ಎಲ್ ಹಾಲನ್ನು ಹಾಗೂ ತೀವ್ರ ಅಪೌಷ್ಠಿಕ ಮಕ್ಕಳಿಗೆ ಘಟಕ ವೆಚ್ಚ ರೂ.12.00 ರಂತೆ ವಾರದಲ್ಲಿ 6 ದಿನ ಒಂದುವರೆ ಪಟ್ಟು ಪೌಷ್ಠಿಕ ಆಹಾರವನ್ನು ವಿತರಿಸಲಾಗುತ್ತಿದೆ. ವಾರ್ಷಿಕ ರೂ.2000/– ಗಳನ್ನು ಅಪೌಷ್ಠಿಕ ಮಕ್ಕಳಿಗೆ ವೈಧ್ಯಕೀಯ ವೆಚ್ಚವನ್ನು ಭರಿಸಲು ಅವಕಾಶ ಕಲ್ಪಿಸಿದೆ. 2019–20ನೇ ಸಾಲಿನಲ್ಲಿ 49 ಅಪೌಷ್ಠಿಕ ಮಕ್ಕಳ ವೈದ್ಯಕೀಯ ವೆಚ್ಚಕ್ಕಾಗಿ ರೂ. 0.98 ಲಕ್ಷ ವೆಚ್ಚವನ್ನು ಭರಿಸಲಾಗಿದೆ.

ಅಂಗನವಾಡಿ ಕಟ್ಟಡಗಳ ನಿರ್ಮಾಣ :

ಚಾಮರಾಜನಗರ ಜಿಲ್ಲೆಯಲ್ಲಿ ಒಟ್ಟು 1421 ಅಂಗನವಾಡಿ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ. ಅವುಗಳಲ್ಲಿ 1074 ಕೇಂದ್ರಗಳು ಸ್ವಂತ ಕಟ್ಟಡ ಹೊಂದಿದ್ದು, 225 ಬಾಡಿಗೆ ಕಟ್ಟಡಗಳಲ್ಲಿ 43 ಕೇಂದ್ರಗಳು ಶಾಲೆ ಆವರಣದಲ್ಲಿ ಹಾಗೂ 79 ಕೇಂದ್ರಗಳು ಸಮುದಾಯ ಭವನ ಮತ್ತು ಇತರೆ ಖಾಸಗಿ ಕಟ್ಟಡಗಳಲ್ಲಿ ನಡೆಯುತ್ತಿವೆ. ವಿವಿಧ ಯೋಜನೆಗಳಡಿ 97 ಅಂಗನವಾಡಿ ಕಟ್ಟಡಗಳು ಮಂಜೂರಾಗಿದ್ದು ಪ್ರಗತಿ ಹಂತದಲ್ಲಿದೆ.

ಅನಾಥ/ಏಕ ಪೋಷಕ/ ನಿರ್ಗತಿಕ ಮಕ್ಕಳ ಪಾಲನೆ ಮತ್ತು ಪೋಷಣೆ ಯೋಜನೆ :

ಅನಾಥ/ಏಕ ಪೋಷಕ/ನಿರ್ಗತಿಕ ಮಕ್ಕಳ ಪಾಲನೆ, ರಕ್ಷಣೆ ಹಾಗೂ ಪುನರ್ವಸತಿ ಹಾಗೂ ಅವರಿಗೆ ಕೌಟುಂಬಿಕ ವಾತಾವರಣ ಕಲ್ಪಿಸುವುದು, ಸಮಾಜದಲ್ಲಿ ಅವರ ಆರ್ಥಿಕ ಹಾಗೂ ಜೀವನ ಮಟ್ಟವನ್ನು ಸುಧಾರಿಸಿ ಉತ್ತಮ ಪ್ರಜೆಗಳನ್ನಾಗಿ ರೂಪಿಸುವುದು ಈ ಕಾರ್ಯಕ್ರಮದ ಉದ್ದೇಶವಾಗಿದೆ. ಚಾಮರಾಜನಗರ ಜಿಲ್ಲೆಯಲ್ಲಿ ಎರಡು ಸ್ವಯಂ ಸೇವಾ ಸಂಸ್ಥೆಗಳು 10 ನಿರ್ಗತಿಕ ಮಕ್ಕಳ ಕುಟೀರಗಳನ್ನು ನಡೆಸುತ್ತಿವೆ. ಒಟ್ಟು 250 ಅನಾಥ/ಏಕಪೋಷಕ ಮಕ್ಕಳು ಈ ಯೋಜನೆಯಡಿ ಪ್ರಯೋಜನ ಪಡೆದಿರುತ್ತಾರೆ. 2019–20ನೇ ಸಾಲಿನಲ್ಲಿ ಎರಡು ಸ್ವಯಂ ಸೇವಾ ಸಂಸ್ಥೆಗಳಿಗೆ ಅನಾಥ ಮತ್ತು ಏಕ ಪೋಷಕ ಮಕ್ಕಳ ಪಾಲನೆ, ಪೋಷಣೆಗಾಗಿ ಒಟ್ಟು ರೂ.15.33 ಲಕ್ಷ ಅನುದಾನ ಖರ್ಚು ಮಾಡಲಾಗಿದೆ.

ಉದ್ಯೋಗಸ್ಥ ಮಹಿಳೆಯರ ಮಕ್ಕಳಿಗಾಗಿ ಶಿಶುಪಾಲನಾ ಕೇಂದ್ರಗಳು :

ವ್ಯವಸಾಯ ಹಾಗೂ ಇನ್ನೀತರ ವೃತ್ತಿ ನಿರತ ಮಹಿಳೆಯರ 0–3 ವರ್ಷದ ಮಕ್ಕಳಿಗೆ ಗ್ರಾಮಾಂತರ ಹಾಗೂ ನಗರ ಪ್ರದೇಶಗಳಲ್ಲಿ ಆಶ್ರಯ ನೀಡಲು ಶಿಶುಪಾಲನಾ ಕೇಂದ್ರಗಳನ್ನು ಪ್ರಾರಂಭಿಸಲು ಸ್ವಯಂಸೇವಾ ಸಂಸ್ಥೆಗಳಿಗೆ ಧನ ಸಹಾಯ ನೀಡಲಾಗುತ್ತದೆ. ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕಿನ ರಾಮಾಪುರ ಹಾಗೂ ಕಾಮಗೆರೆ ಗ್ರಾಮಗಳಲ್ಲಿ ಜೆ.ಎಸ್.ಎಸ್ ಮಹಾ ವಿದ್ಯಾಪೀಠ, ಮೈಸೂರು ಸಂಸ್ಥೆಯ ವತಿಯಿಂದ ರಾಜ್ಯ ಶಿಶುಪಾಲನಾ ಕೇಂದ್ರ ಯೋಜನೆಯಡಿ ತಲಾ 25 ಮಕ್ಕಳ ಎರಡು ಶಿಶುಪಾಲನಾ ಕೇಂದ್ರಗಳನ್ನು ನಡೆಸಲಾಗುತ್ತಿದೆ. 2019–20ನೇ ಸಾಲಿಗೆ ಸದರಿ ಸಂಸ್ಥೆಗಳ ಶಿಶು ಪಾಲನಾ ಕೇಂದ್ರಗಳ ನಿರ್ವಹಣೆ ಬಾಬ್ತು ರೂ.0.98 ಲಕ್ಷ ಖರ್ಚು ಮಾಡಲಾಗಿದೆ.

ಸಾಂತ್ವನ ಯೋಜನೆ : ದೌರ್ಜನ್ಯ ಹಾಗೂ ಅತ್ಯಾಚಾರಕ್ಕೊಳಪಟ್ಟ ಮಹಿಳೆಯರಿಗೆ ಕಾನೂನು, ಆಶ್ರಯ, ಆರ್ಥಿಕ ಸಹಾಯ, ತರಬೇತಿ ಇತ್ಯಾದಿ ಸೌಲಭ್ಯಗಳನ್ನು ಒದಗಿಸಲು ಶ್ರೀ ರಾಜೀವ್‌ಗಾಂಧಿ ಎಜುಕೇಷನ್ ಅಂಡ್ ವೆಲ್‌ಫೇರ್ ಟ್ರಸ್ಟ್, ಮೈಸೂರು ಸ್ವಯಂ ಸೇವಾ ಸಂಸ್ಥೆಯ ಮೂಲಕ ಚಾಮರಾಜನಗರ ಜಿಲ್ಲಾ ಕೇಂದ್ರದಲ್ಲಿ ಸಾಂತ್ವನ ಮಹಿಳಾ ಸಹಾಯವಾಣಿ ಕೇಂದ್ರ ಹಾಗೂ ಪೂರ್ಣಚಂದ್ರ ಎಜುಕೇಷನ್ ಟ್ರಸ್ಟ್, ಅಕ್ಕಿಹೆಬ್ಬಾಳ್, ಕೆ.ಆರ್.ಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆ ಸ್ವಯಂ ಸೇವಾ ಸಂಸ್ಥೆಯ ಮೂಲಕ ಕೊಳ್ಳೇಗಾಲ ತಾಲ್ಲೂಕು ಕೇಂದ್ರದಲ್ಲಿ ಸಾಂತ್ವನ ಮಹಿಳಾ ಸಹಾಯವಾಣಿ ಕೇಂದ್ರ, ಯೂಥ್ ಡೆವಲಪ್‌ಮೆಂಟ್ ಚಾರಿಟಬಲ್ ಟ್ರಸ್ಟ್, ಗುಂಡ್ಲುಪೇಟೆ ತಾಲ್ಲೂಕು, ಸ್ವಯಂ ಸೇವಾ ಸಂಸ್ಥೆಯ ಮೂಲಕ ಗುಂಡ್ಲುಪೇಟೆ ತಾಲ್ಲೂಕು ಕೇಂದ್ರದಲ್ಲಿ ಸಾಂತ್ವನ ಮಹಿಳಾ ಸಹಾಯವಾಣಿ ಕೇಂದ್ರ ಮತ್ತು ಗ್ರೀನ್ ಗ್ರಾಮೀಣಾಭಿವೃದ್ಧಿ ಮತ್ತು ತರಬೇತಿ ಸಂಸ್ಥೆ, ಹೆಗ್ಗವಾಡಿ, ಕುದೇರು ಅಂಚೆ, ಚಾಮರಾಜನಗರ ತಾಲ್ಲೂಕು, ಸ್ವಯಂಸೇವಾ ಸಂಸ್ಥೆಯ ಮೂಲಕ ಯಳಂದೂರು ತಾಲ್ಲೂಕು ಕೇಂದ್ರದಲ್ಲಿ ಸಾಂತ್ವನ ಮಹಿಳಾ ಸಹಾಯವಾಣಿ ಕೇಂದ್ರ ನಡೆಸಲ್ಪಡುತ್ತಿದ್ದು ಸದರಿ ನಾಲ್ಕು ಸಾಂತ್ವನ ಮಹಿಳಾ ಸಹಾಯವಾಣಿ ಕೇಂದ್ರಗಳ ನಿರ್ವಹಣೆಗಾಗಿ 2019–20ನೇ ಸಾಲಿನಲ್ಲಿ 1458 ಪ್ರಕರಣ ದಾಖಲಾಗಿರುತ್ತದೆ ರೂ.26.65 ಲಕ್ಷಗಳ ವೆಚ್ಚ ಭರಿಸಲಾಗಿದೆ.

ಗ್ರಾಮಾಂತರ ಪ್ರದೇಶದ ಬಾಲಕಿಯರ ವಸತಿ ನಿಲಯ ನಡೆಸಲು ಆರ್ಥಿಕ ನೆರವು : ಗ್ರಾಮಾಂತರ ಪ್ರದೇಶದ ಹೆಣ್ಣು ಮಕ್ಕಳ ವಿದ್ಯಾಭ್ಯಾಸವನ್ನು ಪ್ರೋತ್ಸಾಹಿಸಲು ವಸತಿ ನಿಲಯವನ್ನು ಸ್ವಯಂಸೇವಾ ಸಂಸ್ಥೆಯ ಮೂಲಕ ನಡೆಸಲಾಗುತ್ತಿದೆ. ಶ್ರೀ ರಾಜೀವ್‌ಗಾಂಧಿ ಎಜುಕೇಷನ್ ಅಂಡ್ ವೆಲ್‌ಫೇರ್ ಟ್ರಸ್ಟ್, ಮೈಸೂರು ಈ ಸ್ವಯಂ ಸೇವಾ ಸಂಸ್ಥೆಯ ಮೂಲಕ ಚಾಮರಾಜನಗರ ಜಿಲ್ಲಾ ಕೇಂದ್ರದಲ್ಲಿ ಮೆಟ್ರಿಕ್ ನಂತರದ ಬಾಲಕಿಯರ ವಸತಿ ನಿಲಯ ನಡೆಸಲ್ಪಡುತ್ತಿದ್ದು, 2019–20ನೇ ಸಾಲಿನಲ್ಲಿ ಸದರಿ ವಸತಿ ನಿಲಯದ ನಿರ್ವಹಣೆಗೆ ರೂ.19.40 ಲಕ್ಷ ವೆಚ್ಚ ಭರಿಸಲಾಗಿದೆ.

ಸಖಿ (ಒನ್ ಸ್ಟಾಪ್ ಸೆಂಟರ್) :ದೌರ್ಜನ್ಯಕ್ಕೊಳಗಾದ ಮಹಿಳೆಯರಿಗೆ ಒಂದೇ ಸೂರಿನಡಿ ಸಮಗ್ರ ಸೌಲಭ್ಯ ಅಂದರೆ ವೈದ್ಯಕೀಯ ಸೇವೆ, ಪೊಲೀಸ್ ಸೇವೆ, ಕಾನೂನು ಸೇವೆ, ಸಮಲೋಚನೆ ಮತ್ತು ತಾತ್ಕಲಿಕ ವಸತಿ ವ್ಯವಸ್ಥೆಗಳನ್ನು ಒದಗಿಸುವ ಸಲುವಾಗಿ **ಸಖಿ (ಒನ್ ಸ್ಟಾಪ್ ಸೆಂಟರ್)** ಚಾಮರಾಜನಗರ ಜಿಲ್ಲಾ ಆಸ್ಪತ್ರೆಯಲ್ಲಿ ದಿನಾಂಕ.01–11–2014 ರಿಂದ ಪ್ರಾರಂಭವಾಗಿದ್ದು 2019–20ನೇ ಸಾಲಿನಲ್ಲಿ ವಿವಿಧ ದೌರ್ಜನ್ಯಕ್ಕೊಳಗಾದ 97 ಮಂದಿ ಮಹಿಳೆಯರು **ಸಖಿ (ಒನ್ ಸ್ಟಾಪ್ ಸೆಂಟರ್)**ಘಟಕದಲ್ಲಿ ಅಗತ್ಯ ಸೇವೆ ಪಡೆದಿರುತ್ತಾರೆ.

ಸ್ತ್ರೀಶಕ್ತಿ ಯೋಜನೆ : ಮಹಿಳೆಯರನ್ನು ಸ್ವಾವಲಂಬಿಗಳನ್ನಾಗಿಸಿ ಸಬಲೀಕರಣಗೊಳಿಸುವ ನಿಟ್ಟಿನಲ್ಲಿ ಸ್ತ್ರೀಶಕ್ತಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆ. ಚಾಮರಾಜನಗರ ಜಿಲ್ಲೆಯಲ್ಲಿ 4295 ಸ್ತ್ರೀಶಕ್ತಿ ಸ್ವಸಹಾಯ ಗುಂಪುಗಳು ರಚನೆಯಾಗಿದ್ದು, ಈ ಗುಂಪುಗಳಿಗೆ ಸುತ್ತುನಿಧಿ, ಆದಾಯೋತ್ಪನ್ನ ಗುಂಪುಗಳಿಗೆ ಪ್ರೋತ್ಸಾಹಧನವನ್ನು ನೀಡಲಾಗಿದೆ. 2019–20ನೇ ಸಾಲಿನಲ್ಲಿ ರೂ.11.86 ಲಕ್ಷಗಳ ವೆಚ್ಚಭರಿಸಲಾಗಿದೆ.

ಭಾಗ್ಯಲಕ್ಷ್ಮಿ ಯೋಜನೆ :ಸಮಾಜದಲ್ಲಿ ಹೆಣ್ಣು ಮಗುವಿನ ಸ್ಥಾನವನ್ನು ಹೆಚ್ಚಿಸಲು ಮತ್ತು ಹೆಣ್ಣು ಮಗುವಿನ ಜನನವನ್ನು ಉತ್ತೇಜಿಸಲು ಭಾಗ್ಯಲಕ್ಷ್ಮಿ ಎಂಬ ಯೋಜನೆಯನ್ನು 2006–07ನೇ ಸಾಲಿನಿಂದ ಜಾರಿಗೆ ತರಲಾಗಿದೆ. ಈ ಯೋಜನೆಯಡಿ ಜಿಲ್ಲೆಯಲ್ಲಿ ಈವರೆಗೆ 56457 ಫಲಾನುಭವಿಗಳಿಗೆ ಭಾಗ್ಯಲಕ್ಷ್ಮಿ ಬಾಂಡ್‌ಗಳ ವಿತರಣೆ ಮಾಡಲಾಗಿದೆ.

11. ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆ

ಸಿಬ್ಬಂದಿ ವರ್ಗದವರ ವಿವರ

ಕ್ರ: ಸಂ	ಸಿಬ್ಬಂದಿ ವಿವರ	ವೃಂದ	ಹುದ್ದೆ ಸಂಖ್ಯೆ
1	ಜಿಲ್ಲಾ ಅಂಗವಿಕಲರ ಹಾಗೂ ಹಿರಿಯ ನಾಗರೀಕರ ಕಲ್ಯಾಣಾಧಿಕಾರಿಗಳು	' ಬಿ '	01 – ಖಾಲಿ
2	ಯೋಜನಾ ಸಹಾಯಕರು	' ಸಿ '	01 – ಭರ್ತಿ
3	ಬೆರಳಚ್ಚುಗಾರರು	' ಸಿ '	01 – (ಬಾಹ್ಯಮೂಲ)
4	' ಡಿ ' ಗ್ರೂಪ್	' ಡಿ '	01 – ಖಾಲಿ

ವಿಕಲಚೇತನರ ಗುರುತಿನ ಚೀಟಿ:– 2019–20ನೇ ಸಾಲಿನಲ್ಲಿ ಇಲಾಖೆಯ ಜಿಲ್ಲಾ ಶಾಖಾ ಕಛೇರಿಯಿಂದ ವಿಕಲಚೇತನ ರುಗಳನ್ನು ಗುರುತಿಸುವುದರೊಂದಿಗೆ ಸರ್ಕಾರದಿಂದ ದೊರೆಯುವ ವಿವಿಧ ರೀತಿಯ ಸೇವಾ ಸೌಲಭ್ಯಗಳನ್ನು ಪಡೆದು ಕೊಳ್ಳಲು ಅನುಕೂಲವಾಗುವಂತೆ ಗುರುತಿನ ಚೀಟಿಗಳನ್ನು ವೈದ್ಯಕೀಯ ಮಂಡಳಿ ಶಿಫಾರಸ್ಸಿನ ಮೇರೆಗೆ ವಿತರಣೆ ಮಾಡ ಲಾಗುತ್ತಿದೆ. ಸರ್ಕಾರವು ಹೊಸದಾಗಿ ಯೂನಿಕ್ ಡಿಸೆಬಿಲಿಟಿ ಐಡೆಂಟಿಟಿ ಕಾರ್ಡ್(UDID)ಗಳನ್ನು ನೇರವಾಗಿ ಫಲಾನುಭವಿ ಗಳಿಗೆ ವಿತರಿಸುವ ಸಂಬಂಧ ಆನ್‌ಲೈನ್ ಮುಖಾಂತರ ಅರ್ಜಿಗಳನ್ನು ಆಹ್ವಾನಿಸಿದ್ದು, ಪ್ರಸಕ್ತ ಸಾಲಿನಲ್ಲಿ ಸುಮಾರು 5637 ಜನರಿಗೆ ಗುರುತಿನ ಚೀಟಿಗಳನ್ನು ವಿತರಿಸಲಾಗಿದೆ. ಕಾರ್ಯಕ್ರಮವು ಪ್ರಗತಿಯಲ್ಲಿದೆ.

ವಿದ್ಯಾರ್ಥಿ ವೇತನ/ಪ್ರೋತ್ಸಾಹಧನ ಯೋಜನೆ:– ವಿಕಲಚೇತನ ವಿದ್ಯಾರ್ಥಿಗಳಿಗೆ. ರೂ. 11.30 ಲಕ್ಷಗಳ ವಿದ್ಯಾರ್ಥಿ ವೇತನವನ್ನು ಒಟ್ಟು 632 ವಿದ್ಯಾರ್ಥಿಗಳಿಗೆ ನೀಡಲಾಗಿದೆ. ಅದರಲ್ಲಿ ಎಸ್.ಎಸ್.ಎಲ್.ಸಿ, ಪಿ.ಯು.ಸಿ, ಪದವಿ ಮತ್ತು ಸ್ನಾತ ಕೋತ್ತರ ಪದವಿ ಪರೀಕ್ಷೆಗಳಲ್ಲಿ ಶೇ.60ಕ್ಕಿಂತ ಹೆಚ್ಚು ಅಂಗಗಳಿಸಿದ 11 ಮಂದಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ಸೌಲಭ್ಯವನ್ನು ನೀಡಲಾಗಿದೆ.

ಉನ್ನತ ಶಿಕ್ಷಣ ಪಡೆಯುವ ವಿಕಲಚೇತನರಿಗೆ ಶಿಕ್ಷಣ ಶುಲ್ಕವನ್ನು ಮರು ಪಾವತಿ ಯೋಜನೆ:– ವಿಕಲಚೇತನ ವಿದ್ಯಾರ್ಥಿಗಳು ಎಸ್.ಎಸ್.ಎಲ್.ಸಿ ನಂತರ ಯಾವುದೇ ಸರ್ಕಾರಿ/ಅರೆ ಸರ್ಕಾರಿ/ಸ್ಥಳೀಯ ಸಂಸ್ಥೆ/ ಅನುದಾನ ರಹಿತ/ ಅನುದಾನ ಸಹಿತ ಶಿಕ್ಷಣ ಸಂಸ್ಥೆಗಳಲ್ಲಿ ಉನ್ನತ ಶಿಕ್ಷಣ/ಸ್ನಾತ್ತಕೊತ್ತರ /ಔದ್ಯೋಗಿಕ ಸಂಸ್ಥೆ/ ತಾಂತ್ರಿಕ ಶಿಕ್ಷಣಗಳಲ್ಲಿ ವ್ಯಾಸಂಗ ಮಾಡುತ್ತಿದ್ದಲ್ಲಿ ಅಂತಹ ವಿದ್ಯಾರ್ಥಿಗಳಿಗೆ ಸರ್ಕಾರವು ನಿಗದಿ ಪಡಿಸಿರುವ ಪರೀಕ್ಷಾ ಶುಲ್ಕ / ಬೋಧನಾ ಶುಲ್ಕ / ಪ್ರಯೋಗಾಲಯ ಶುಲ್ಕ/ಕ್ರೀಡಾ ಶುಲ್ಕ/ಗ್ರಂಥಾಲಯ ಶುಲ್ಕವನ್ನು ಮರು ಪಾವತಿಸಲಾಗು ವುದು ಸದರಿ ಸಾಲಿಗೆ ರೂ.0.71 ಲಕ್ಷಗಳ ಅನುದಾನವನ್ನು ಅರ್ಜಿ ಸಲ್ಲಿಸಿದ 37 ಅರ್ಹ ವಿದ್ಯಾರ್ಥಿಗಳಿಗೆ ವಿನಿಯೋಗಿಸಲಾಗಿದೆ.

ಸಾಧನ ಸಲಕರಣೆ ಯೋಜನೆ:– ಸಾಧನ ಸಲಕರಣೆ ಸೌಲಭ್ಯ ಒದಗಿಸುವ ಕಾರ್ಯಕ್ರಮದಡಿ ಭಾರತ ಸರ್ಕಾರದ ಸಾಮಾಜಿಕ ನ್ಯಾಯ ಸಬಲೀಕರಣ ಮಂತ್ರಾಲಯದ ವಿಕಲಾಂಗ ವ್ಯಕ್ತಿಗಳ ಸಬಲೀಕರಣ ಇಲಾಖೆಯ ಕೇಂದ್ರ ಸಾರ್ವಜನಿಕ ಉದ್ದಿಮೆಯ "ಮಿನಿರತ್ನ" ಕೃತಕಾಂಗ ತಯಾರಿಕಾ ಕಾರ್ಪೋರೇಷನ್ ಆಫ್ ಇಂಡಿಯಾ (ಅಲಿಂಕೋ), ಬೆಂಗಳೂರು ರವರ ಸಹಯೋಗದೊಂದಿಗೆ ಚಾಮರಾಜನಗರ ಜಿಲ್ಲೆಯಲ್ಲಿನ ವಿಕಲಚೇತನರುಗಳಿಗೆ ಅಗತ್ಯವಿರುವ ಸಾದನ ಸಲಕರಣೆಗಳ ಸೌಲಭ್ಯವನ್ನು ಒದಗಿಸುವ ಸಲುವಾಗಿ ತಪಾಸಣಾ ಶಿಬಿರಗಳನ್ನು ಹಮ್ಮಿಕೊಂಡು ಶಿಬಿರಗಳಲ್ಲಿ ಗುರುತಿಸಲ್ಪಟ್ಟ ಸುಮಾರು 570ಮಂದಿ ವಿಕಲಚೇತನರುಗಳಿಗೆ ಅಗತ್ಯವಿರುವ ವಿವಿಧ ರೀತಿಯ ಸಾದನ ಸಲಕರಣೆಗಳನ್ನು ಇಂಡಿಯನ್ ಆಯಿಲ್ ಕಾರ್ಪೋರೇಷನ್ ಲಿಮಿಟೆಡ್, ಕರ್ನಾಟಕರವರ ಸಿ.ಎಸ್.ಆರ್ ಯೋಜನೆ ಪ್ರಾಯೋಜಿಕತ್ವ ಮತ್ತು ಕೇಂದ್ರ ಸರ್ಕಾರದ ಅಡಿಪ್ ಯೋಜನೆಯಡಿ ವಿತರಿಸಲಾಗಿದೆ.

ಅವುಗಳಲ್ಲಿ ಮುಖ್ಯವಾಗಿ ಕೃತಕಾಂಗಗಳು ಮತ್ತು ಕ್ಯಾಲಿಪರ್ಸ್ ಬ್ಯಾಟರಿ ಚಾಲಿತ ಮೂರು ಚಕ್ರದ ಸೈಕಲ್, ಬ್ಯಾಟರಿ ಚಾಲಿತ ಗಾಲಿ ಕುರ್ಚಿ, ತ್ರಿಚಕ್ರ ಸೈಕಲ್, ಸಾದಾ ಗಾಲಿ ಕುರ್ಚಿ, ರೊಲೇಟರ್ಸ್/ನಡಿಗೆ ಸಾಧನ, ಶ್ರವಣೋಪಕರಣ, ಕಂಕಳು ದೊಣ್ಣೆ, ಎಲ್ಬೋ ಕ್ರಚಸ್, ವಾಕರ್, ಮತ್ತು ಅಂಧರಿಗೆ ಬಿಳಿ ಕೋಲು (ಸ್ಮಾರ್ಟ್ ಕೇನ್), ಅಂಧರ ಶಿಕ್ಷಣಕ್ಕೆ ಕಲಿಕಾ ಕಿಟ್, ಸಿ.ಪಿ.ಚೇರ್, ಅಂಧರಿಗೆ ಸ್ಮಾರ್ಟ್ ಫೋನ್, ಕುಷ್ಠರೋಗದಿಂದ ಗುಣಮುಖರಾದವರಿಗೆ ಎಡಿಎಲ್ ಕಿಟ್‌ಗಳನ್ನು ಫಲಾನುಭವಿಗಳಿಗೆ ವಿತರಿಸಲಾಗಿದೆ.

ಗ್ರಾಮೀಣ ಪುನರ್ವಸತಿ ಯೋಜನೆ:- 2019-20ನೇ ಸಾಲಿನಲ್ಲಿ ಗ್ರಾಮೀಣ ಪುನರ್ವಸತಿ ಯೋಜನೆಯಡಿ ಇಲಾಖೆಯ ಜಿಲ್ಲಾ ಶಾಖೆಯಲ್ಲಿ ಜಿಲ್ಲೆಯ 130 ಗ್ರಾಮ ಪಂಚಾಯಿತಿಗಳಿಗೆ ಒಟ್ಟು 124 ಗ್ರಾಮೀಣ ಪುನರ್ವಸತಿ ಕಾರ್ಯಕರ್ತರುಗಳು ನಗರ ವ್ಯಾಪ್ತಿಗೆ 07 ನಗರ ಪುನರ್ವಸತಿ ಕಾರ್ಯಕರ್ತರುಗಳು ಹಾಗೂ ಜಿಲ್ಲೆಯ 4 ತಾಲ್ಲೂಕುಗಳಲ್ಲಿ ಒಬ್ಬರಂತೆ ತಾಲ್ಲೂಕು ವಿವಿದೊದ್ದೇಶ ಪುನರ್ವಸತಿ ಕಾರ್ಯಕರ್ತರು ಕಾರ್ಯನಿರ್ವಹಿಸುತ್ತಿದ್ದಾರೆ.

ಕಾರ್ಯಕರ್ತರು ಪಂಚಾಯಿತಿ ವ್ಯಾಪ್ತಿಯ ಗ್ರಾಮ ಗಳ/ನಗರ ವ್ಯಾಪ್ತಿಯಲ್ಲಿನ ವಾರ್ಡ್‌ಗಳಲ್ಲಿನ ಅಂಗವಿಕಲರಿಗೆ ಮನೆ ಬಾಗಿಲಿಗೆ ಸರ್ಕಾರದ ಯೋಜನೆಯ ಅರಿವು ಮೂಡಿಸು ವುದು ಮತ್ತು ಅನುಷ್ಠಾನ ಮಾಡುವುದರಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದಾರೆ. ಸದರಿ ಯೋಜನೆಯಡಿ ಗ್ರಾಮೀಣ/ನಗರ ಪುನರ್ವಸತಿ ಕಾರ್ಯಕರ್ತರುಗಳು ಮಾಸಿಕ ರೂ. 6,000/-ಮತ್ತು ತಾಲ್ಲೂಕು ವಿವಿದೊದ್ದೇಶ ಪುನರ್ವಸತಿ ಕಾರ್ಯಕರ್ತರು 12,000/- ಗೌರವಧನವನ್ನು ಪಡೆದು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಇಲಾಖೆಯಿಂದ ಈ ಯೋಜನೆಯಡಿ ರೂ. 62.70 ಲಕ್ಷ ಅನುದಾನ ವನ್ನು ಪ್ರಸಕ್ತ ಸಾಲಿನಲ್ಲಿ ವೆಚ್ಚ ಮಾಡಲಾಗಿದೆ.

ವಿಕಲಚೇತನ ಉದ್ಯೋಗಸ್ಥ ಮಹಿಳೆಯರ ಮತ್ತು ವಿದ್ಯಾರ್ಥಿನಿಯರ ವಸತಿ ನಿಲಯ ಯೋಜನೆ:-

ಸದರಿ ಯೋಜನಯಡಿ ಚಾಮರಾಜನಗರ ಜಿಲ್ಲಾ ಕೇಂದ್ರದಲ್ಲಿ ಸ್ವಯಂ ಸೇವಾ ಸಂಸ್ಥೆಯ ಮೂಲಕ ನಡೆಸಲ್ಪಡುತ್ತಿದ್ದು ವಿಕಲಚೇತನ ಉದ್ಯೋಗಸ್ಥ ಮಹಿಳೆಯರು ಮತ್ತು ವಿದ್ಯಾರ್ಥಿನಿಯರು ಹಾಗೂ ತರಬೇತಿದಾರರು ಇದರ ಪ್ರಯೋಜನ ಪಡೆಯುತ್ತಿದ್ದಾರೆ. 2019-20ನೇ ಸಾಲಿನಲ್ಲಿ ಸದರಿ ವಸತಿ ನಿಲಯದ ನಿರ್ವಹಣೆಗಾಗಿ ರೂ.12.12 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

ವಿಕಲಚೇತನರಿಗೆ ರಿಯಾಯಿತಿ ದರದಲ್ಲಿ ಬಸ್‌ಪಾಸ್ ಹಾಗೂ ರೈಲ್ವೆ ರಿಯಾಯಿತಿ ಪಾಸ್:-

ವಿಕಲಚೇತನರಿಗೆ ರಿಯಾಯಿತಿ ದರದ ಬಸ್ ಪಾಸ್‌ಗಳನ್ನು ಅರ್ಜಿ ಸಲ್ಲಿಸುವ ಎಲ್ಲಾ ವಿವಿಧ ರೀತಿಯ ವಿಕಲಚೇತನ ಫಲಾನುಭವಿಗಳಿಗೆ ನೀಡಲಾಗಿದೆ. ಅದೇ ರೀತಿ ಬೇರೆ ರಾಜ್ಯಗಳಿಗೆ ಪ್ರವಾಸ ಮಾಡುವ ವಿಕಲಚೇತನರುಗಳಿಗೆ ಹಾಗೂ ಅವರ ರಕ್ಷಕರಿಗೆ ರೈಲ್ವೆ ರಿಯಾಯಿತಿ ಪಾಸ್‌ಗಳನ್ನು ಪಡೆಯುವ ಬಗ್ಗೆ ಮಾಹಿತಿಯನ್ನು ನೀಡಿ ಸೌಲಭ್ಯ ಪಡೆಯಲು ಪ್ರೋತ್ಸಾಹ ನೀಡಲಾಗಿದೆ.

ದೃಷ್ಟಿಹೀನ ಮಹಿಳೆಯರಿಗೆ ಹೆರಿಗೆ ನಂತರ ಶಿಶುಪಾಲನಾ ಭತ್ಯೆ ನೀಡುವ ಯೋಜನೆ:-ಬಡತನ ರೇಖೆಗಿಂತ ಕೆಳಗಿರುವ ಕುಟುಂಬದಲ್ಲಿನ ವಾರ್ಷಿಕ ಆದಾಯ 2.50 ಲಕ್ಷ ಮಿತಿಯೊಳಗೆ ಬಡ ಕುಟುಂಬ ದಲ್ಲಿನ ದೃಷ್ಠಿಹೀನ ಮಹಿಳೆ ಯರಿಗೆ ಜನಿಸುವ 2 ಮಕ್ಕಳಿಗೆ ಹೆರಿಗೆ ನಂತರ 2 ವರ್ಷಗಳ ಅವಧಿಗೆ ಆರೋಗ್ಯ ಹಾಗೂ ಪೌಷ್ಠಿಕ ಆಹಾರ ಒದಗಿಸುವ ದೃಷ್ಟಿಯಿಂದ ಮಾಸಿಕ ರೂ.2,000/- ಶಿಶು ಪಾಲನಾ ಭತ್ಯೆ ಮಂಜೂರು ಮಾಡಲಾಗುವುದು. ಸದರಿ ಯೋಜನೆಯಡಿ ಈ ಸಾಲಿಗೆ 07 ಫಲಾನುಭವಿಗಳಿಗೆ ರೂ.0.86 ಲಕ್ಷಗಳನ್ನು ವೆಚ್ಚವಾಗಿ ಭರಿಸಲಾಗಿದೆ.

ವಿಕಲಚೇತನ ವ್ಯಕ್ತಿಗಳೊಡನೆ ವಿವಾಹವಾಗುವ ಸಾಮಾನ್ಯ ಯುವಕ/ಯುವತಿಯರಿಗೆ ಪ್ರೋತ್ಸಾಹ ಧನ ಯೋಜನೆ:- ವಿಕಲಚೇತನ ವ್ಯಕ್ತಿಗಳೊಡನೆ ವಿವಾಹವಾಗುವ ಸಾಮಾನ್ಯ ಯುವಕ/ಯುವತಿಯರಿಗೆ ರೂ,50,000/-ಗಳ ಹೊಡಿಕೆ: ವಿಕಲಚೇತನ ಯುವಕ ಯುವತಿಯರನ್ನು ವಿವಾಹ ವಾಗುವ ಸಾಮಾನ್ಯ ಯುವಕ/ಯುವತಿಯರಿಗೆ ನಿರಂತರ ವಾಗಿ ಪ್ರೋತ್ಸಾಹ ಧನವನ್ನು ಮಾಸಿಕ ಆದಾಯ ರೀತಿ ದೊರಕಿಸಲು ಜಂಟಿ ಖಾತೆಯಲ್ಲಿ ರೂ.50,000/-ಗಳ ಹೊಡಿಕೆ ರೂಪದಲ್ಲಿ ನೀಡಲಾಗುವುದು. ಸದರಿ ಯೋಜನೆಯಡಿ 2019-20ನೇ ಸಾಲಿನಲ್ಲಿ ರೂ.8.00 ಲಕ್ಷಗಳ ಅನುದಾನ 16 ವಿವಾಹ ಪ್ರಕರಣ ಗಳಿಗೆ ಧನಸಹಾಯ ರೂಪದಲ್ಲಿ ನೀಡಲಾಗಿದೆ.

ವಿಕಲಚೇತನರ ಮಾಹಿತಿ ಸಲಹಾ (ಸಹಾಯವಾಣಿ) ಕೇಂದ್ರ:- ವಿಕಲಚೇತನರ ಮಾಹಿತಿ ಸಲಹಾ (ಸಹಾಯವಾಣಿ) ಕೇಂದ್ರದ ದೂರವಾಣಿ ಸಂಖ್ಯೆ: (08226-224688) ಇಲಾಖೆಯ ಸಹಯೋಗದಲ್ಲೇ ನಿರ್ವಹಿಸಲಾಗುತ್ತಿದೆ. ಇದರ ಉದ್ದೇಶ ವಿವಿಧ ಇಲಾಖೆಗಳಲ್ಲಿ ದೊರೆಯುವ ಸೌಲಭ್ಯಗಳ ಬಗ್ಗೆ ವಿಕಲಚೇತನರಿಗೆ ಅರಿವು ಮೂಡಿಸುವುದು ಮತ್ತು ಅದರ ಸೌಲಭ್ಯವನ್ನು ಪಡೆದು ಕೊಳ್ಳಲು ಮಾಹಿತಿ ನೀಡುವುದಾಗಿದೆ. 2018-19ನೇ ಸಾಲಿನಲ್ಲಿ ಸದರಿ ಯೋಜನೆಯಡಿ ಒಟ್ಟು ರೂ.2.93 ಲಕ್ಷಗಳ ಅನುದಾನವನ್ನು ವೆಚ್ಚವಾಗಿ ಭರಿಸಲಾಗಿದ್ದು ಪ್ರಸಕ್ತ ಸಾಲಿನಲ್ಲಿ ಒಟ್ಟು 198 ಮಂದಿ ವಿಕಲಚೇತನರು ಪ್ರಯೋಜನ ಪಡೆದಿರುತ್ತಾರೆ.

ಹಿರಿಯ ನಾಗರೀಕರಿಗೆ ಸಂಬಂಧಿಸಿದ ಯೋಜನೆಗಳು

ಹಿರಿಯ ನಾಗರಿಕರ ಗುರುತಿನ ಚೀಟಿ:- 60 ವರ್ಷ ಮೇಲ್ಪಟ್ಟ ಹಿರಿಯ ನಾಗರೀಕರಿಗಾಗಿ ಗುರುತಿನ ಚೀಟಿಗಳನ್ನು ವಿವಿಧ ಸ್ವಯಂ ಸೇವಾ ಸಂಸ್ಥೆಗಳ ಸಹಯೋಗದಲ್ಲಿ ವಿತರಿಸಲಾಗುತ್ತಿದೆ. ಇದುವರೆವಿಗೆ ಸುಮಾರು 70105 ಜನ ಹಿರಿಯ ನಾಗರಿಕರಿಗೆ ಗುರುತಿನ ಚೀಟಿಗಳನ್ನು ವಿತರಣೆ ಮಾಡಲಾಗಿದ್ದು, ಸರ್ಕಾರವು ಹೊಸದಾಗಿ ಹಿರಿಯ ನಾಗರಿಕರ ಗುರುತಿನ ಚೀಟಿ(Identity Card)ಗಳನ್ನು ನೇರವಾಗಿ ಫಲಾನುಭವಿಗಳಿಗೆ ವಿತರಿಸುವ ಸಂಬಂಧ ಸೇವಾ ಸಿಂಧು ಕೇಂದ್ರಗಳಲ್ಲಿ ಆನ್‌ಲೈನ್ ಮುಖಾಂತರ ಅರ್ಜಿಗಳನ್ನು ಸಲ್ಲಿಸಲು ಅವಕಾಶ ಕಲ್ಪಿಸಲಾಗಿದ್ದು, ಪ್ರಸಕ್ತ ಸಾಲಿನಲ್ಲಿ ಸುಮಾರು 340 ಜನರಿಗೆ ಗುರುತಿನ ಚೀಟಿಗಳನ್ನು ವಿತರಿಸಲಾಗಿದೆ. ಕಾರ್ಯಕ್ರಮವು ಪ್ರಗತಿಯಲ್ಲಿದೆ

ವೃದ್ಧಾಶ್ರಮ:- ಹಿರಿಯ ನಾಗರೀಕರಿಗಾಗಿ ಜಿಲ್ಲೆಯ ಚಾಮರಾಜನಗರ ತಾಲ್ಲೂಕು ಸಂತೇಮರಹಳ್ಳಿಯಲ್ಲಿ ಸ್ವಯಂ ಸೇವಾ ಸಂಸ್ಥೆಯಿಂದ ಒಂದು ವೃದ್ಧಾಶ್ರಮ ನಡೆಸಲಾಗುತ್ತಿದ್ದು 25 ಜನ ವೃದ್ಧ ನಿವಾಸಿಗಳು ಈ ಯೋಜನೆಯ ಪ್ರಯೋಜನ ಪಡೆಯು ತ್ತಿದ್ದಾರೆ. ವೃಧ್ಧಾಶ್ರಮದ ನಿರ್ವಹಣೆಗಾಗಿ ಪ್ರಸ್ತುತ ವರ್ಷದಲ್ಲಿ ರೂ.7.99 ಲಕ್ಷ ಅನುದಾನವನ್ನು ಮಂಜೂರು ಮಾಡಲಾಗಿದ್ದು ಅದರಲ್ಲಿ ರೂ.7.99 ರಷ್ಟು ಅನುದಾನವನ್ನು ವೆಚ್ಚವಾಗಿ ಭರಿಸಲಾಗಿದೆ.

ಹಿರಿಯ ನಾಗರೀಕರ ಸಹಾಯವಾಣಿ (1090) ನಿರ್ವಹಣಾ ವೆಚ್ಚ :-ಚಾಮರಾಜನಗರ ಜಿಲ್ಲಾ ಕೇಂದ್ರದಲ್ಲಿ ಸ್ವಯಂ ಸೇವಾ ಸಂಸ್ಥೆಯ ಮೂಲಕ ಹಿರಿಯ ನಾಗರಿಕರ ಸಹಾಯವಾಣಿ ನಡೆಸಲ್ಪಡುತ್ತಿದ್ದು ಹಿರಿಯ ನಾಗರೀಕರಿಗೆ ಪಾಲಕರ ಪೋಷಕರ ಸಂರಕ್ಷಣಾ ಕಾಯಿದೆಯನ್ವಯ ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳ ಮೇಲ್ವಿಚಾರಣೆಯಲ್ಲಿ ಪೋಲೀಸ್ ಇಲಾಖೆಯ ಕಟ್ಟಡದಲ್ಲಿ ನಿರ್ವಹಿಸಲಾಗುತ್ತಿದೆ. ಪ್ರಸಕ್ತ ಸಾಲಿನಲ್ಲಿ ಹಿರಿಯ ನಾಗರಿಕರ ಸಹಾಯವಾಣಿ ನಿರ್ವಹಣೆಗಾಗಿ ರೂ.6.15 ಲಕ್ಷಗಳ ಅನುದಾನ ಇಲಾಖೆಯಿಂದ ಬಿಡುಗಡೆ ಮಾಡಲಾಗಿರುತ್ತದೆ.

ಹಿರಿಯ ನಾಗರೀಕರಿಗೆ ಹಗಲು ಯೋಗಕ್ಷೇಮ ಕೇಂದ್ರ:- ಚಾಮರಾಜನಗರ ಜಿಲ್ಲಾ ಕೇಂದ್ರದಲ್ಲಿ ಸ್ವಯಂ ಸೇವಾ ಸಂಸ್ಥೆಯ ಮೂಲಕ ಹಿರಿಯ ನಾಗರೀಕರಿಗಾಗಿ ಹಗಲು ಯೋಗಕ್ಷೇಮ ಕೇಂದ್ರವನ್ನು ನಡೆಸಲ್ಪಡುತ್ತಿದ್ದು, ಪ್ರತಿ ಕೇಂದ್ರದಲ್ಲಿ 50ರಿಂದ 150 ವಯೋವೃದ್ಧರಿಗೆ ಅವಕಾಶ ಕಲ್ಪಿಸಿಕೊಡಲಾಗಿದೆ. ಪ್ರಸಕ್ತ ಸಾಲಿನಲ್ಲಿ ಸದರಿ ಹಿರಿಯ ನಾಗರೀಕರ ಹಗಲು ಯೋಗಕ್ಷೇಮ ಕೇಂದ್ರದ ನಿರ್ವಹಣೆಗಾಗಿ ರೂ.9.84 ಲಕ್ಷಗಳ ಅನುದಾನ ಇಲಾಖೆಯಿಂದ ಬಿಡುಗಡೆ ಮಾಡಲಾಗಿರುತ್ತದೆ.

2020ರ ಮಾರ್ಚ್ ಮಾಹೆಯ ಅಂತ್ಯದವರೆಗೆ ವಿವಿಧ ಯೋಜನೆಗಳಡಿ ಸಾಧಿಸಿರುವ ಪ್ರಗತಿಯ ಅಂಕಿ ಅಂಶಗಳ ವಿವರಗಳು

ಕ್ರ: ಸಂ	ಯೋಜನೆಗಳ ವಿವರಗಳು	ಯೋಜನೆ/ ಯೋಜನೇತರ		ನಿಗದಿಪಡಿಸಿರುವ ವಾರ್ಷಿಕ ಗುರಿ		ಏಪ್ರಿಲ್'2019 ರಿಂದ ಮಾರ್ಚ್ 2020ರ ಅಂತ್ಯದವರೆಗೆ			
				ಆರ್ಥಿಕ	ಭೌತಿಕ	ಬಿಡುಗಡೆಯಾದ ಆಯವ್ಯಯ/ ಅನುದಾನ	ಖರ್ಚಾದ ಆಯವ್ಯಯ/ ಅನುದಾನ	ಉಳಿಕೆ ಆಯವ್ಯಯ/ ಅನುದಾನ	ಫಲಾನುಭವಿಗಳ ಸಂಖ್ಯೆ
01	ವಿಕಲಚೇತನ ವಿದ್ಯಾರ್ಥಿ ವೇತನ ಮತ್ತು ಪ್ರೋತ್ಸಾಹ ಧನ ಯೋಜನೆ	ಯೋಜನೆ	ಎಸ್.ಸಿ.ಪಿ	1.50	150	1.50	1.50	–	126
			ಟಿ.ಎಸ್.ಪಿ	0.80	50	0.80	0.80	–	59
			ಇತರೆ	10.25	500	10.25	9.00	1.25	447
			ಒಟ್ಟು	12.55	700	12.55	11.30	1.25	632
02	ವಿಕಲಚೇತನರ ಸ್ವಯಂ ಉದ್ಯೋಗ ಆಧಾರ ಯೋಜನೆ	ಯೋಜನೆ	ಎಸ್.ಸಿ.ಪಿ	1.00	2	–	–	–	–
			ಟಿ.ಎಸ್.ಪಿ	0.50	1	–	–	–	–
			ಇತರೆ	2.50	5	–	–	–	–
			ಒಟ್ಟು	4.00	08	–	–	–	–
03	ಸಾಧನ ಸಲಕರಣೆ ಯೋಜನೆ	ಯೋಜನೆ	ಎಸ್.ಸಿ.ಪಿ	1.00	–	ಚಾಮರಾಜನಗರ ಜಿಲ್ಲೆಯಲ್ಲಿನ ವಿಕಲಚೇತನರುಗಳಿಗೆ ಅಗತ್ಯವಿರುವ ಸಾದನ ಸಲಕರಣೆಗಳ ಸೌಲಭ್ಯವನ್ನು ಒದಗಿಸುವ ಸಲುವಾಗಿ ತಪಾಸಣಾ ಶಿಬಿರ ಗಳನ್ನು ಹಮ್ಮಿಕೊಂಡು ಶಿಬಿರಗಳಲ್ಲಿ ಗುರುತಿಸಲ್ಪಟ್ಟ ಸುಮಾರು 570ಮಂದಿ ವಿಕಲಚೇತನರುಗಳಿಗೆ ಅಗತ್ಯವಿರುವ ವಿವಿಧ ರೀತಿಯ ಸಾದನ ಸಲಕರಣೆ ಗಳನ್ನು ಭಾರತ ಸರ್ಕಾರ ಸಾಮ್ಯದ ಅಲಿಮ್ಕೋ, ಬೆಂಗಳೂರು, ಸಹಯೋಗ ದಲ್ಲಿ ಐಓಸಿಎಲ್, ಕರ್ನಾಟಕರವರ ಸಿ.ಎಸ್.ಆರ್ ಯೋಜನೆ ಪ್ರಾಯೋಜಿಕತ್ವ ಮತ್ತು ಕೇಂದ್ರ ಸರ್ಕಾರದ ಅಡಿಪ್ ಯೋಜನೆಯಡಿ ಸೌಲಭ್ಯ ಒದಗಿಸಲಾಗಿದೆ.				
			ಟಿ.ಎಸ್.ಪಿ	1.00	–				
			ಇತರೆ	2.00	–				
			ಒಟ್ಟು	4.00	–				
04	ಗ್ರಾಮೀಣ ಪುನರ್ವಸತಿ ಯೋಜನೆ	ಯೋಜನೆ	ಎಸ್.ಸಿ.ಪಿ	8.00	24	8.00	8.00	–	63
			ಟಿ.ಎಸ್.ಪಿ	2.25	10	2.25	2.25	–	13
			ಸಾಮಾನ್ಯ	55.30	106	55.30	53.45	1.85	55
			ಒಟ್ಟು	65.55	140	65.55	62.70	1.85	131
05	ವಿಕಲಚೇತನ ವಿವಾಹವಾಗುವ ಸಾಮಾನ್ಯ ವ್ಯಕ್ತಿಗೆ ಪ್ರೋತ್ಸಾಹ ಧನ	ಯೋಜನೆ	ಎಸ್.ಸಿ.ಪಿ	2.50	5	2.50	2.50	–	5
			ಟಿ.ಎಸ್.ಪಿ	0.00	–	0.00	0.00	–	–
			ಇತರೆ	6.00	12	6.00	6.00	–	12
			ಒಟ್ಟು	8.50	17	8.50	8.50	–	17

06	ಶುಲ್ಕ ಮರುಪಾವತಿ ಯೋಜನೆ	ಯೋಜನೆ	ಎಸ್.ಸಿ.ಪಿ	0.20	05	0.20	0.06	0.14	5	
			ಟಿ.ಎಸ್.ಪಿ	0.00	00	0.00	0.00	–	0	
			ಇತರೆ	0.65	30	0.65	0.65	–	32	
			ಒಟ್ಟು	0.85	35	0.85	0.71	0.14	37	
07	ಉದ್ಯೋಗಸ್ಥ ವಿಕಲಚೇತನ ಮಹಿಳೆಯರ ಹಾಗೂವಿದ್ಯಾರ್ಥಿನಿಯರ ವಸತಿ ನಿಲಯ	ಯೋಜನೇತರ		12.12	40	12.12	12.12	–	39	
08	ಅಂಧ ಮಹಿಳೆಗೆ ಜನಿಸುವ ಮಕ್ಕಳ ಶಿಶುಪಾಲನಾ ಭತ್ಯೆ ಯೋಜನೆ	ಯೋಜನೆ	ಎಸ್.ಸಿ.ಪಿ	0.20	2	0.20	0.20	–	2	
			ಟಿ.ಎಸ್.ಪಿ	0	–	0	0	0	–	
			ಇತರೆ	1.00	5	1.00	0.66	0.34	5	
			ಒಟ್ಟು	1.20	7	1.20	0.86	0.34	7	
09	ವಿಕಲಚೇತನರ ಸಹಾಯವಾಣಿ ಕೇಂದ್ರ ಯೋಜನೆ	ಯೋಜನೆ	–	5.00	–	4.93	2.93	2.00	4	
10	ಹಿರಿಯ ನಾಗರೀಕರ ಸಹಾಯ ವಾಣಿ ಕೇಂದ್ರ	ಯೋಜನೆ	ಎಸ್.ಸಿ.ಪಿ	–	–	–	–	–	4	
			ಟಿ.ಎಸ್.ಪಿ	–	–	–	–	–		
			ಇತರೆ	6.15	–	6.15	6.15	–		
			ಒಟ್ಟು	6.15	–	6.15	6.15	–		
11	ಹಿರಿಯ ನಾಗರೀಕರ ಹಗಲು ಯೋಗಕ್ಷೇಮ ಕೇಂದ್ರ ಯೋಜನೆ	ಯೋಜನೆ	ಎಸ್.ಸಿ.ಪಿ	1.76	–	1.76	1.76	–	50	
			ಟಿ.ಎಸ್.ಪಿ	0.68	–	0.68	0.68	–		
			ಇತರೆ	7.40	–	7.40	7.40	–		
			ಒಟ್ಟು	9.84	–	9.84	9.84	–		
ಜಿಲ್ಲಾ ಪಂಚಾಯತ್ ವಲಯ ಯೋಜನೆ										
12	ವೃದ್ಧಾಶ್ರಮ	ಯೋಜನೇತರ		7.99	25	7.99	7.99	–	25	

12. ಕೃಷಿ ಇಲಾಖೆ

ಚಾಮರಾಜನಗರ ಜಿಲ್ಲೆಯ ವಾರ್ಷಿಕ ವಾಡಿಕೆ ಮಳೆ 791.2 ಮಿ.ಮೀ ಇದ್ದು, ಡಿಸೆಂಬರ್ ಅಂತ್ಯದವರೆಗೆ ಒಟ್ಟಾರೆ ಬಿದ್ದ ಜಿಲ್ಲೆಯ ಸರಾಸರಿ ಮಳೆ 900.4 ಮಿ.ಮೀ ಆಗಿರುತ್ತದೆ. ವಾಡಿಕೆ ಮಳೆ ಹಾಗೂ ಸ್ವೀಕೃತಗೊಂಡ ಮಳೆಗೆ ಹೋಲಿಸಿದಾಗ ದಿನಾಂಕ 01-01-2019 ರಿಂದ 31-12-2019 ರ ಅಂತ್ಯಕ್ಕೆ 109.2 ಮಿ.ಮೀ ವಾಡಿಕೆ ಮಳೆಗಿಂತ ಹೆಚ್ಚು ಮಳೆ ಆಗಿದೆ. ಜನವರಿ, ಆಗಸ್ಟ್ ಮತ್ತು ಅಕ್ಟೋಬರ್ ಮಾಹೆಯಲ್ಲಿ ವಾಡಿಕೆಗಿಂತ ಹೆಚ್ಚು ಮಳೆಯಾಗಿರುತ್ತದೆ. ಉಳಿದಂತೆ ಫೆಬ್ರವರಿ, ಮಾರ್ಚ, ಏಪ್ರಿಲ್, ಮೇ, ಜೂನ್, ಜುಲೈ, ಸೆಪ್ಟೆಂಬರ್, ನವಂಬರ್ ಮತ್ತು ಡಿಸೆಂಬರ್ ಮಾಹೆಗಳಲ್ಲಿ ವಾಡಿಕೆಗಿಂತ ಕಡಿಮೆ ಮಳೆ ಆಗಿರುತ್ತದೆ. 2018-19ನೇ ಸಾಲಿನಲ್ಲಿ 794.2 ಮಿ.ಮೀ ಮಳೆಯಾಗಿರುತ್ತದೆ.

2019-20 ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಒಟ್ಟು 137770 ಹೆಕ್ಟೇರ್ ಬಿತ್ತನೆ ಪ್ರದೇಶ ಗುರಿ ಇದ್ದು, ಅದರಲ್ಲಿ ಏಕದಳಧಾನ್ಯ ಬೆಳೆಗಳು 68813 ಹೆಕ್ಟೇರ್, ದ್ವಿದಳಧಾನ್ಯ ಬೆಳೆಗಳು 17771 ಹೆಕ್ಟೇರ್, ಎಣ್ಣೇಕಾಳು ಬೆಳೆಗಳು 24860 ಹೆಕ್ಟೇರ್ ಹಾಗೂ ವಾಣಿಜ್ಯ ಬೆಳೆಗಳು 8947 ಹೆಕ್ಟೇರ್, ಒಟ್ಟಾರೆ 120391 ಹೆಕ್ಟೇರ್‌ಗಳಲ್ಲಿಯೂ, ಹಿಂಗಾರು ಹಂಗಾಮಿನಲ್ಲಿ ಒಟ್ಟು 40690 ಹೆಕ್ಟೇರ್ ಬಿತ್ತನೆ ಪ್ರದೇಶ ಗುರಿ ಇದ್ದು, ಏಕದಳ ಧಾನ್ಯಗಳು 4775 ಹೆಕ್ಟೇರ್, ದ್ವಿದಳಧಾನ್ಯ ಬೆಳೆಗಳು 31141 ಹೆಕ್ಟೇರ್ ಹಾಗೂ ವಾಣಿಜ್ಯ ಬೆಳೆಗಳು 2313 ಹೆಕ್ಟೇರ್, ಒಟ್ಟಾರೆ 38229 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿರುತ್ತದೆ ಹಾಗೂ ಬೇಸಿಗೆ ಹಂಗಾಮಿನಲ್ಲಿ ಒಟ್ಟು 1385 ಹೆಕ್ಟೇರ್ ಬಿತ್ತನೆ ಪ್ರದೇಶ ಗುರಿ ಇದ್ದು, ಅದರಲ್ಲಿ ಏಕದಳ ಧಾನ್ಯಗಳು 2190 ಹೆಕ್ಟೇರ್ ಹಾಗೂ ವಾಣಿಜ್ಯ ಬೆಳೆಗಳು 1584 ಹೆಕ್ಟೇರ್, ಒಟ್ಟಾರೆ 3814 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿರುತ್ತದೆ.

2019-20ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಮಳೆ ಅಭಾವದಿಂದ ಚಾಮರಾಜನಗರ ತಾಲ್ಲೂಕಿನಲ್ಲಿ 11006 ಹೆಕ್ಟೇರ್ ಪ್ರದೇಶದಲ್ಲಿ, ಗುಂಡ್ಲುಪೇಟೆ ತಾಲ್ಲೂಕಿನಲ್ಲಿ 34473 ಹೆಕ್ಟೇರ್ ಪ್ರದೇಶದಲ್ಲಿ, ಕೊಳ್ಳೇಗಾಲ ತಾಲ್ಲೂಕಿನಲ್ಲಿ 1239 ಹೆಕ್ಟೇರ್ ಪ್ರದೇಶದಲ್ಲಿ, ಹನೂರು ತಾಲ್ಲೂಕಿನಲ್ಲಿ 1933 ಹೆಕ್ಟೇರ್ ಪ್ರದೇಶದಲ್ಲಿ ಮತ್ತು ಯಳಂದೂರು ತಾಲ್ಲೂಕಿನಲ್ಲಿ 2460 ಹೆಕ್ಟೇರ್ ಸೇರಿದಂತೆ ಒಟ್ಟು 51111 ಹೆಕ್ಟೇರ್ ಪ್ರದೇಶದಲ್ಲಿ ಶೇ.33 ಕ್ಕಿಂತ ಹೆಚ್ಚು ಬೆಳೆ ಹಾನಿಯಾಗಿರುತ್ತದೆ. ಹಾಗೂ ಕೊಳ್ಳೇಗಾಲ ತಾಲ್ಲೂಕಿನಲ್ಲಿ ಪ್ರವಾಹದಿಂದ 242.80 ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಹಾನಿಯಾಗಿರುತ್ತದೆ.

ಸಿಬ್ಬಂದಿ ವಿವರ:

ಕ್ರ.ಸಂ	ಪದನಾಮ	ಮಂಜೂರಾದ ಹುದ್ದೆಗಳು	ಭರ್ತಿಯಾದ ಹುದ್ದೆಗಳು	ಖಾಲಿಯಿರುವ ಹುದ್ದೆಗಳು
01	ಜಂಟಿ ಕೃಷಿ ನಿರ್ದೇಶಕರು	01	01	00
02	ಉಪ ಕೃಷಿ ನಿರ್ದೇಶಕರು	01	01	00
03	ಸಹಾಯಕ ಕೃಷಿ ನಿರ್ದೇಶಕರು	08	04	04
04	ಆಡಳಿತ ಸಹಾಯಕರು	01	01	00
05	ಕೃಷಿ ಅಧಿಕಾರಿಗಳು	29	10	19

06	ಸಹಾಯಕ ಕೃಷಿ ಅಧಿಕಾರಿಗಳು	44	6	38
07	ಅಧೀಕ್ಷಕರು	08	03	05
08	ಪ್ರಥಮ ದರ್ಜೆ ಸಹಾಯಕರು	10	05	05
09	ಶೀಘ್ರಲಿಪಿಗಾರರು	01	00	01
10	ದ್ವಿತೀಯ ದರ್ಜೆ ಸಹಾಯಕರು	14	10	04
11	ಕೃಷಿ ಸಹಾಯಕರು	05	02	03
12	ಬೆರಳಚ್ಚುಗಾರರು	07	01	06
13	ಹಿರಿಯ ವಾಹನ ಚಾಲಕರು	08	01	07
14	"ಡಿ " ದರ್ಜೆ ನೌಕರರು	17	05	12
ಒಟ್ಟು		154	50	**104**

ಅರಣ್ಯ ಮತ್ತು ತೋಟಗಾರಿಕೆ ಘಟಕ

ಕ್ರ ಸಂ	ಪದನಾಮ	ಮಂಜೂರು ಹುದ್ದೆಗಳು	ಭರ್ತಿಯಾದ ಹುದ್ದೆಗಳು	ಖಾಲಿಯಿರುವ ಹುದ್ದೆಗಳು.
01	ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ	01	01	00
02	ವಲಯ ಅರಣ್ಯಾಧಿಕಾರಿ	01	00	01
03	ಸಹಾಯಕ ತೋಟಗಾರಿಕಾಅಧಿಕಾರಿ	01	00	01
04	ಉಪ ವಲಯ ಅರಣ್ಯಾಧಿಕಾರಿ	02	02	00
05	ತೋಟಗಾರಿಕಾ ಸಹಾಯಕ	02	00	02
ಒಟ್ಟು		**7**	**3**	**4**

ಷರಾ :-

1. ಸಹಾಯಕ ಕೃಷಿ ನಿರ್ದೇಶಕರು, ಯಳಂದೂರು ಮತ್ತು ಸಹಾಯಕ ಕೃಷಿ ನಿರ್ದೇಶಕರು, ಕೊಳ್ಳೇಗಾಲ ರವರು ಮೈಸೂರು ಜಿಲ್ಲೆಯಿಂದ ನಿಯೋಜನೆ ಮೇಲೆ ಕರ್ತವ್ಯ ನಿರ್ವಹಿಸ್ತಿದ್ದಾರೆ. ಸದರಿಯವರ ಮಾಹಿತಿಯನ್ನು ಸಹ ಒಳಗೊಂಡಿದೆ.

2. ತಾಂತ್ರಿಕ ಅಧಿಕಾರಿಗಳು, ಸಹಾಯಕ ಕೃಷಿ ನಿರ್ದೇಶಕರುರವರ ಕಛೇರಿ ಕೊಳ್ಳೇಗಾಲರವರ ಮಾಹಿತಿಯನ್ನು ಸಹ ಒಳಗೊಂಡಿದೆ.

ಸಸ್ಯ ಸಂಗೋಪನೆ

ಸಸ್ಯ ಸಂರಕ್ಷಣೆ ಯೋಜನೆ (ರೈತರಿಗೆ ಸಹಾಯ): 2435-00-101-0.63

ಈ ಯೋಜನೆಯಡಿ 8.00 ಲಕ್ಷ ಅನುದಾನ ನಿಗಧಿಯಾಗಿದ್ದು ಶೇ.50 ರ ರಿಯಾಯಿತಿ ದರದಲ್ಲಿ ಹೆಕ್ಟೇರ್‌ಗೆ ಗರಿಷ್ಟ ರೂ. 500/- ರಂತೆ ಸಸ್ಯ ಸಂರಕ್ಷಣಾ ಔಷಧಿ ಹಾಗೂ ಶೇ. 50 ರ ಗರಿಷ್ಟ ರೂ. 800/- ಮೀರದಂತೆ ಸಸ್ಯ ಸಂರಕ್ಷಣಾ ಉಪಕರಣಗಳ ವಿತರಣೆ ಕಾರ್ಯಕ್ರಮ ಇರುತ್ತದೆ. ಈ ಯೋಜನೆಗೆ ರೂ. 8.00 ಲಕ್ಷ ಅನುದಾನ ಬಿಡುಗಡೆಯಾಗಿದ್ದು, ರೂ. 7.98 ಲಕ್ಷ ಖರ್ಚಾಗಿರುತ್ತದೆ ಶೇ. 99.8 ಸಾಧನೆಯಾಗಿರುತ್ತದೆ.

ಕೃಷಿ ಮೇಳ ಮತ್ತು ಕೃಷಿ ವಸ್ತು ಪ್ರದರ್ಶನ: 2435-00-101-0.65

ಈ ಯೋಜನೆಯಡಿ ತಾಲ್ಲೂಕುಗಳಲ್ಲಿ ಕೃಷಿ ಮೇಳ ಮತ್ತು ಕೃಷಿ ವಸ್ತು ಪ್ರದರ್ಶನವನ್ನು ಏರ್ಪಡಿಸುವ ಕಾರ್ಯಕ್ರಮವಿರುತ್ತದೆ. ರಾಜ್ಯ ಮಟ್ಟದ ಕೃಷಿ ಮೇಳ ಮತ್ತು ವಸ್ತು ಪ್ರದರ್ಶನ ಕಾರ್ಯಕ್ರಮಕ್ಕೆ ಜಿಲ್ಲೆಯ ರೈತರನ್ನು ಕರೆದುಕೊಂಡು ಹೋಗಿ ವೆಚ್ಚ ಭರಿಸಲಾಗಿದೆ.

ಈ ಯೋಜನೆಗೆ ಜಿಲ್ಲೆಗೆ ರೂ. 2.00 ಲಕ್ಷ ಅನುದಾನ ನಿಗಧಿಯಾಗಿದ್ದು, ಇದರಲ್ಲಿ ರೂ. 2.00 ಲಕ್ಷ ಅನುದಾನ ಬಿಡುಗಡೆಯಾಗಿರುತ್ತದೆ, ರೂ. 2.00 ಲಕ್ಷ ವೆಚ್ಚವಾಗಿದ್ದು ಬಿಡುಗಡೆಯಾಗಿರುವ ಅನುದಾನಕ್ಕೆ ಶೇ.100 ಸಾಧನೆಯಾಗಿರುತ್ತದೆ.

ಬೇಸಾಯ ಸಂಬಂಧಿತ ಚಟುವಟಿಕೆ ರೈತ ಸಂಪರ್ಕ ಕೇಂದ್ರ: 2435-00-101-0-31:

ಈ ಯೋಜನೆಯಡಿ ಜಿಲ್ಲೆಯಲ್ಲಿ ಖಾಸಗಿ ಕಟ್ಟಡದಲ್ಲಿರುವ ರೈತ ಸಂಪರ್ಕ ಕೇಂದ್ರಗಳ ಬಾಡಿಗೆ ವೆಚ್ಚ ಹಾಗೂ ಎಲ್ಲಾ ಹೋಬಳಿಗಳ ರೈತ ಸಂಪರ್ಕ ಕೇಂದ್ರಗಳ ನಿರ್ವಹಣಾ ವೆಚ್ಚಗಳನ್ನು ಭರಿಸಲಾಗಿದ್ದು, ವಾರ್ಷಿಕ ಗುರಿ ಆರ್ಥಿಕ ರೂ. 6.12 ಲಕ್ಷ ಅನುದಾನ ನಿಗಧಿಯಾಗಿದ್ದು, ರೂ. 6.44 ಲಕ್ಷ ಅನುದಾನ ಬಿಡುಗಡೆಯಾಗಿರುತ್ತದೆ. ಇದರಲ್ಲಿ ರೂ. 6.39 ಲಕ್ಷ ವೆಚ್ಚವಾಗಿದ್ದು, ಶೇ.99 ಸಾಧನೆಯಾಗಿರುತ್ತದೆ.

ಜಿಲ್ಲಾ ಕೃಷಿ ತರಬೇತಿ ಕೇಂದ್ರ (ಬೇಸಾಯ ಸಂಬಂಧಿತ ಚಟುವಟಿಕೆ) 2435-00-101-0-31:

ಈ ಯೋಜನೆಯಡಿ ರೈತರುಗಳಿಗೆ ಹಾಗೂ ವಿಸ್ತರಣಾ ಕಾರ್ಯಕರ್ತರಿಗೆ 3 ದಿವಸಗಳ ತರಬೇತಿಯನ್ನು ಜಿಲ್ಲೆಯ ಕೃಷಿ ವಿಜ್ಞಾನ ಕೇಂದ್ರ ಹಾಗೂ ಸರ್ಕಾರೇತರ ಸಂಸ್ಥೆಗಳಲ್ಲಿ ಕೃಷಿ ವಿಜ್ಞಾನಿಗಳಿಂದ/ತಜ್ಞರಿಂದ ಆಧುನಿಕ ಬೇಸಾಯ ತಾಂತ್ರಿಕ ಸಲಹೆಗಳ ಬಗ್ಗೆ ತರಬೇತಿ ನೀಡಲಾಗಿದೆ. ವಾರ್ಷಿಕ ಗುರಿ ಆರ್ಥಿಕ ರೂ. 4.88 ಲಕ್ಷ ಅನುದಾನ ನಿಗಧಿಯಾಗಿದ್ದು, ಈ ಯೋಜನೆಗೆ ರೂ. 4.88 ಲಕ್ಷ ಬಿಡುಗಡೆಯಾಗಿದ್ದು, ರೂ. 4.31 ಲಕ್ಷ ವೆಚ್ಚವಾಗಿರುತ್ತದೆ. ಒಟ್ಟಾರೆ ಬಿಡುಗಡೆಯಾಗಿರುವ ಅನುದಾನಕ್ಕೆ ಶೇ. 88 ಸಾಧನೆಯಾಗಿರುತ್ತದೆ.

ಕೃಷಿ ಕಛೇರಿ ಕಟ್ಟಡ : 2435-00-101-0-33_ಈ ಯೋಜನೆಯಡಿ ಚಾಮರಾಜನಗರ ಟೌನ್ ಕೃಷಿ ಕಟ್ಟಡ ದುರಸ್ಥಿ, ಚಾಮರಾಜನಗರ ತಾಲ್ಲೂಕು ಸಂತೇಮರಹಳ್ಳಿ ರೈತ ಸಂಪರ್ಕ ಕೇಂದ್ರ ಸುತ್ತುಗೋಡೆ ನಿರ್ಮಾಣ ಮತ್ತು ಮೇಲ್ಚಾವಣಿ ದುರಸ್ಥಿ, ಹರದನಹಳ್ಳಿ ರೈತ ಸಂಪರ್ಕ ಕೇಂದ್ರ ಮೇಲ್ಚಾವಣಿ ದುರಸ್ಥಿ. ಗುಂಡ್ಲುಪೇಟೆ ಟೌನ್ ಕೃಷಿ ಕಟ್ಟಡ ದುರಸ್ಥಿ ಮತ್ತು ಸುತ್ತುಗೋಡೆ ದುರಸ್ಥಿ. ಬೇಗೂರು ರೈತ ಸಂಪರ್ಕ ಕೇಂದ್ರ ಸುತ್ತುಗೋಡೆ ಮುಂದುವರೆದ ಕಾಮಗಾರಿ ಕೊಳ್ಳೇಗಾಲ ಟೌನ್ ಕೃಷಿ ಕಟ್ಟಡ ಸುತ್ತುಗೋಡೆ ಮುಂದುವರೆದ ಕಾಮಗಾರಿ, ಲೊಕ್ಕನಹಳ್ಳಿ ರೈತ ಸಂಪರ್ಕ ಕೇಂದ್ರ ಕಟ್ಟಡ ನಿರ್ಮಾಣ, ಸುತ್ತುಗೋಡೆ ದುರಸ್ಥಿ, ಶೌಚಾಲಯ ನಿರ್ಮಾಣ, ನೀರಿನ ಪಂಪ್, ನೀರಿನ ಪೈಪ್‌ಲೈನ್ ಅಳವಡಿಸುವುದು. ಮತ್ತು ಯಳಂದೂರು ಸಹಾಯಕ ಕೃಷಿ ನಿರ್ದೇಶಕರ ಕಛೇರಿ ದುರಸ್ಥಿ ಕಾಮಗಾರಿ ಮಾಡಲಾಗಿದೆ. ಈ ಯೋಜನೆಯಡಿ ಒಟ್ಟು ರೂ. 21.00 ಲಕ್ಷ ಅನುದಾನ ಬಿಡುಗಡೆಯಾಗಿದ್ದು, ರೂ. 21.00 ಲಕ್ಷ ವೆಚ್ಚವಾಗಿರುತ್ತದೆ. ಒಟ್ಟಾರೆ ಬಿಡುಗಡೆಯಾಗಿರುವ ಅನುದಾನಕ್ಕೆ ಶೇ. 100 ಸಾಧನೆಯಾಗಿರುತ್ತದೆ.

ಇತರೆ ಕೃಷಿ ಯೋಜನೆ (ಕೃಷಿ ಯಾಂತ್ರೀಕರಣ ಯೋಜನೆ) : 2435-00-101-0-29:

ಈ ಯೋಜನೆಯಡಿ ಒದಗಿಸಲಾದ ಅನುದಾನವನ್ನು ಜಿಲ್ಲಾ ಕೃಷಿ ಉಪಕರಣ ಸಮಿತಿಯಲ್ಲಿ ಅನುಮೋದನೆಗೊಂಡ ಎತ್ತುಚಾಲಿತ/ಮಾನವಚಾಲಿತ ಉಪಕರಣಗಳನ್ನು ರೈತರಿಗೆ ರಿಯಾಯಿತಿ ದರದಲ್ಲಿ ವಿತರಿಸಿದ್ದು, ಈ ಯೋಜನೆಗೆ ವಾರ್ಷಿಕ ಆರ್ಥಿಕ ಗುರಿ ರೂ. 14.00 ಲಕ್ಷ ಅನುದಾನ ನಿಗಧಿಯಾಗಿದ್ದು, ರೂ. 14.00 ಲಕ್ಷ ಅನುದಾನ ಬಿಡುಗಡೆಯಾಗಿರುತ್ತದೆ. ರೂ. 13.98 ಲಕ್ಷ ಖರ್ಚಾಗಿದ್ದು, ಬಿಡುಗಡೆಯಾದ ಅನುದಾನಕ್ಕೆ ಶೇ.100 ಸಾಧನೆಯಾಗಿರುತ್ತದೆ.

ಸಾವಯವ ಗೊಬ್ಬರ ಯೋಜನೆ : 2435-00-101-0-34:

ಈ ಯೋಜನೆಯಡಿ ರೈತರಿಗೆ ಶೇ.50/75 ರಿಯಾಯಿತಿ ದರದಲ್ಲಿ ಹಸಿರೆಲೆ ಗೊಬ್ಬರ ಬೀಜ, ಎರೆಹುಳು ಗೊಬ್ಬರ, ಸಿಟಿ ಕಾಂಪೋಸ್ಟ್ ಮತ್ತು ಸಾವಯವ ಗೊಬ್ಬರ ವಿತರಿಸಿದ್ದು, ವಾರ್ಷಿಕ ಆರ್ಥಿಕ ಗುರಿ ರೂ. 6.00 ಲಕ್ಷ ಅನುದಾನ ನಿಗಧಿಯಾಗಿದ್ದು, ರೂ. 6.00 ಲಕ್ಷ ಅನುದಾನ ಬಿಡುಗಡೆಯಾಗಿರುತ್ತದೆ. ರೂ. 5.99 ಲಕ್ಷ ಖರ್ಚಾಗಿರುತ್ತದೆ. ಬಿಡುಗಡೆಯಾಗಿರುವ ಅನುದಾನಕ್ಕೆ ಶೇ. 99.8 ಸಾಧನೆಯಾಗಿರುತ್ತದೆ.

ಬೆಳೆ ವಿಮಾ ಯೋಜನೆ : 2435-00-101-0-41:

ಈ ಯೋಜನೆಯಡಿ ಬೆಳೆ ಅಂದಾಜು ಸಮೀಕ್ಷ ಸಾಧನ ಸಾಮಾಗ್ರಿಗಳನ್ನು ಜಿಲ್ಲೆಯ ಎಲ್ಲಾ ರೈತ ಸಂಪರ್ಕ ಕೇಂದ್ರಗಳಿಗೆ ಸರಬರಾಜು ಮಾಡಲಾಗಿರುತ್ತದೆ.

ವಾರ್ಷಿಕ ಆರ್ಥಿಕ ಗುರಿ ರೂ. 8.00 ಲಕ್ಷ ಅನುದಾನ ನಿಗಧಿಯಾಗಿದ್ದು, ರೂ. 8.00 ಲಕ್ಷ ಅನುದಾನ ಬಿಡುಗಡೆಯಾಗಿರುತ್ತದೆ. ರೂ. 7.93 ಲಕ್ಷ ಖರ್ಚಾಗಿರುತ್ತದೆ. ಬಿಡುಗಡೆಯಾಗಿರುವ ಅನುದಾನಕ್ಕೆ ಶೇ. 99 ಸಾಧನೆಯಾಗಿರುತ್ತದೆ.

ಜಲಾನಯನ ಅಭಿವೃದ್ಧಿ ಕಾರ್ಯಕ್ರಮಗಳು:

ಜಲಾನಯನ ಅಭಿವೃದ್ಧಿ ಇಲಾಖೆಯನ್ನು ಕೃಷಿ ಇಲಾಖೆಯಲ್ಲಿ ವಿಲೀನಗೊಳಿಸಿ ಕೃಷಿ ಉತ್ಪಾದನೆಯ ಸುಸ್ಥಿರತೆ ಮತ್ತು ಹೆಚ್ಚಿಸುವಿಕೆಯನ್ನು ಗುರಿಯಾಗಿ ಇಟ್ಟುಕೊಂಡು ಕೃಷಿ ಇಲಾಖೆ ಕಾರ್ಯಕ್ರಮಗಳು ಮತ್ತು ಜಲಾನಯನ ಅಭಿವೃದ್ಧಿ ಇಲಾಖೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಜಲಾನಯನ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಮೂರು ಘಟಕಗಳಿದ್ದು, ಕೃಷಿ ಘಟಕವು ಮಣ್ಣು ಮತ್ತು ನೀರಿನ ಸಂರಕ್ಷಣೆ, ಅಂತರ್ಜಲ ಮಟ್ಟ ಹೆಚ್ಚಿಸುವಿಕೆ ಕಾಮಗಾರಿಗಳನ್ನು ಹಾಗೂ ಅರಣ್ಯ ಮತ್ತು ತೋಟಗಾರಿಕೆ ಘಟಕಗಳಿಂದ ಅನುತ್ಪಾದಕ ಜಮೀನನ್ನು ಉತ್ಪಾದಕತೆ ಪರಿವರ್ತಿಸುವುದು, ಗಿಡ ನೆಡುವುದರ ಮೂಲ ಹೆಸರೀಕರಣದ ಹೆಚ್ಚಳ ಹಾಗೂ ಪರಿಸರ ಸಮತೋಲನ ನಿರ್ವಹಣೆಗೆ ಪೂರಕವಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಇದರ ಜೊತೆಗೆ ಸ್ವ-ಸಹಾಯ ಗುಂಪುಗಳ ರಚನೆ ಮತ್ತು ಸಾಂಸ್ಥಿಕ ಬಲವರ್ಧನೆ, ಜಲಾನಯನ ಸಮಿತಿಗಳನ್ನು ರಚಿಸಿ ಬಳಕೆದಾರರ ಗುಂಪುಗಳನ್ನು ರಚಿಸುವುದು. ಸ್ವ-ಸಹಾಯ ಗುಂಪುಗಳ ಸದಸ್ಯರುಗಳಿಗೆ ಮತ್ತು ಬಳಕೆದಾರರ ಗುಂಪುಗಳ ಸದಸ್ಯರುಗಳಿಗೆ ತರಬೇತಿ ನೀಡುವುದರ ಮೂಲಕ ಪ್ರವಾಸ ಕೈಗೊಳ್ಳುವ ಕಾರ್ಯಕ್ರಮಗಳನ್ನು ಸಹ ಹಮ್ಮಿಕೊಳ್ಳಲಾಗುತ್ತಿದೆ.

ಕೃಷಿ ಇಲಾಖೆ ಪ್ರಗತಿ ವರದಿ

ಕ್ರ. ಸಂ	ಯೋಜನೆಗಳು	ಘಟಕ	ವಾರ್ಷಿಕ ಗುರಿ		01–04–2019 ರಿಂದ 31–03–2020 ರವರೆಗೆ						ಷರಾ
					ಆರ್ಥಿಕ			ಭೌತಿಕ			
			ಆರ್ಥಿಕ	ಭೌತಿಕ	ಗುರಿ	ಸಾಧನೆ	ಶೇಕಡ	ಗುರಿ	ಸಾಧನೆ	ಶೇಕಡ	
1	2	3	4	5	6	7	8	9	10	11	12
I	ಪ್ರಧಾನ ಮಂತ್ರಿ ಕೃಷಿ ಸಿಂಚಯಿ ಯೋಜನೆ – ಜಲಾನಯನ ಅಭಿವೃದ್ಧಿ (ಸಮಗ್ರ ಜಲಾನಯನ ನಿರ್ವಹಣೆ ಯೋಜನೆ) **(PMKSY-WD)**										
1	ಬ್ಯಾಚ್ –3	ಹೆಕ್ಟೇರ್ ಸಂ.	207.00	0	140.00	135.85	97%	350.0 30	327.46 25	94%	ಕಂದಕಬದು – 170.46 ಹೆ. ತಡೆಅಣೆ – 10 ಸಂ. ಕೃಷಿ ಹೊಂಡ 9 ನಾಲಾಬದು 2 ಕೆರೆ ಅಭಿವೃದ್ಧಿ –2 ಆರ್.ಎಫ್.ಡಿ. 2 ಸಂ. ಹಾಗೂ ಅರಣ್ಯ ಕಾಮಗಾರಿ 157 ಹೆ. ಮತ್ತು ಆಡಳಿತಾತ್ಮಕ ವೆಚ್ಚವನ್ನು ಭರಿಸಿದೆ.
2	ಬ್ಯಾಚ್–4	ಹೆಕ್ಟೇರ್ ಸಂ.	271.66	1140 94	300.00	292.76	98%	1950 45	1886.58 44	97%	ಕಂದಕಬದು 963.83 ಹೆ. ತಡೆಅಣೆ–10 ಕೃಷಿಹೊಂಡ–9ಸಂ. ನಾಲಾಬದು–4ಸಂ. ಕೆರೆ ಅಭಿವೃದ್ಧಿ–5ಸಂ. ಆರ್.ಎಫ್.ಡಿ.–16 ಸಂ, ಅರಣ್ಯ – 395 ಹೆ., ತೋಟಗಾರಿಕೆ – 527.75 ಹೆ. ಮತ್ತು ಆಡಳಿತಾತ್ಮಕ ವೆಚ್ಚ ಭರಿಸಲಾಗಿದೆ.
3	ಬ್ಯಾಚ್–5	ಹೆಕ್ಟೇರ್ ಸಂ.	0.50	0 0	0.50	0.50	100%	0.0 0	0 0	0%	ಆಡಳಿತಾತ್ಮಕ ವೆಚ್ಚ ಭರಿಸಿದೆ.
4	ಬ್ಯಾಚ್–6	ಹೆಕ್ಟೇರ್ ಸಂ.	1.00	0 0	1.00	1.00	100%	0.0 0	0 0	0%	

13. ಕೃಷಿ ಮಾರುಕಟ್ಟೆ ಇಲಾಖೆ

ಸಿಬ್ಬಂದಿವರ್ಗದವರ ವಿವರ

ಕ್ರ.ಸಂ	ಕಛೇರಿ/ಸಮಿತಿಯ ಹೆಸರು	ಮಂಜೂರಾತಿ	ಭರ್ತಿ	ಖಾಲಿ
1	ಕೃಷಿ ಉಪ ಮಾರುಕಟ್ಟೆ ಸಹಾಯಕರು, ಚಾಮರಾಜನಗರ	14	05	09
2	ಕೃಷಿ ಉಪ ಮಾರುಕಟ್ಟೆ ಸಹಾಯಕರು, ಗುಂಡ್ಲುಪೇಟೆ	11	04	07
3	ಕೃಷಿ ಉಪ ಮಾರುಕಟ್ಟೆ ಸಹಾಯಕರು, ಕೊಳ್ಳೇಗಾಲ	21	07	14
4	ಸಹಾಯಕ ನಿರ್ದೇಶಕರ ಕಛೇರಿ ಕೃಷಿ ಮಾರಾಟ ಇಲಾಖೆ ಚಾಮರಾಜನಗರ	07	02	05
	ಒಟ್ಟು	**53**	**18**	**35**

ಕ್ರ.ಸಂ	ಕಾಮಗಾರಿ ವಿವರ	ಅಂದಾಜು ಮೊತ್ತ	ಖರ್ಚು	ಉಳಿಕೆ
1	ತೆರಕಣಾಂಬಿ ಉಪಮಾರುಕಟ್ಟೆ ಪ್ರಾಂಗಣದಲ್ಲಿ ಶೌಚಾಲಯದ ಮುಂದುವರೆದ ಕಾಮಗಾರಿ ಮತ್ತು ದುರಸ್ಥಿ	3.00	3.00	–
2	ಗುಂಡ್ಲುಪೇಟೆ ತಾಲ್ಲೋಕು ತೆರಕಣಾಂಬಿ ಉಪ ಪ್ರಾಂಗಣಕ್ಕೆ ಸುತ್ತುಗೋಡೆ ನಿರ್ಮಾಣ ಕಾಮಗಾರಿ	5.00	5.00	–
3	ಗುಂಡ್ಲುಪೇಟೆ ತಾಲ್ಲೋಕು ತೆರಕಣಾಂಬಿ ಉಪ ಪ್ರಾಂಗಣಕ್ಕೆ ಗೇಟ್ ಅಳವಡಿಸುವುದು.	1.00	1.00	–
4	ಸಂತೇಮರಳ್ಳಿ ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ಕರ್ನಾಟಕ ಆಹಾರ ನಾಗಾರಿಕ ಸರಬರಾಜು ನಿಗಮಕ್ಕೆ ನೀಡಿರುವ ಗೋದಾಮು ಸಂಖ್ಯೆ 2 ಮತ್ತು 3 ರ ಕಟ್ಟಡಗಳ ಮೇಲೆ ಚುರುಕಿ ಹಾಕುವುದು	5.00	5.00	
5	ಸಂತೇಮರಳ್ಳಿ ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ಸಣ್ಣ ಮಳಿಗೆಗಳ ದುರಸ್ಥಿ ಹಾಗೂ ಕಟ್ಟಡಗಳ ಮೇಲೆ ಚುರುಕಿ ಹಾಕುವುದು.	2.50	2.50	–
6	ಹನೂರು ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ಅಗ್ನಿ ಶಾಮಕ ದಳಕ್ಕೆ ಬಾಡಿಗೆಗೆ ನೀಡಲಾಗಿದ್ದ ಕಟ್ಟಡದ ಮೇಲ್ಚಾವಣಿ ಬದಲಾವಣೆ ಕಾಮಗಾರಿ.	2.50	2.50	–
7	ಹನೂರು ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ಅಗ್ನಿ ಶಾಮಕ ದಳಕ್ಕೆ ಬಾಡಿಗೆಗೆ ನೀಡಲಾಗಿದ್ದ ಕಟ್ಟಡವನ್ನು ಗೋದಾಮಾಗಿ ಪರಿವರ್ತಿಸುವ ಕಾಮಗಾರಿ	2.00	2.00	–
8	ಹನೂರು ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ಆಡಳಿತ ಕಛೇರಿಯ 3 ಸಂಖ್ಯೆ ಶೌಚಾಲಯಗಳ ನವೀಕರಿಸುವುದು.	2.00	2.00	–
9	ಕೊಳ್ಳೇಗಾಲ ತಾಲ್ಲೋಕು ಹನೂರು ಉಪಮಾರುಕಟ್ಟೆ ಪ್ರಾಂಗಣಕ್ಕೆ ತೊಂಬೆ ಮತ್ತು ಪೈಪ್‌ಲೈನ್ ಅಳವಡಿಸುವ ಕಾಮಗಾರಿ **(ಷರಾ: ಕಾಮಗಾರಿ ನಡೆದಿರುವುದಿಲ್ಲ)**	2.00	–	2.00
	ಒಟ್ಟು	**25.00**	**23.00**	**2.00**

14. ತೋಟಗಾರಿಕೆ ಇಲಾಖೆ

ಪೀಠಿಕೆ:– ಚಾಮರಾಜನಗರ ಜಿಲ್ಲೆಯು ಕರ್ನಾಟಕ ರಾಜ್ಯದ ದಕ್ಷಿಣ ಒಣವಲಯಕ್ಕೆ ಸೇರಿದ್ದು, ಕನಿಷ್ಟ ಉಷ್ಣಾಂಶ 12 ಡಿಗ್ರಿ ಸೆಲ್ಸಿಯಸ್ ಹಾಗೂ ಗರಿಷ್ಟ ಉಷ್ಣಾಂಶ 35 ಡಿಗ್ರಿ ಸೆಲ್ಸಿಯಸ್‌ಗಳಿದ್ದು, ವಾರ್ಷಿಕ ವಾಡಿಕೆ ಮಳೆ 750 ಮಿ ಮೀ ಗಳಿರುತ್ತದೆ ಹಾಗೂ ಜಿಲ್ಲೆಯು ಕೆಂಪು ಮತ್ತು ಮರಳು ಮಿಶ್ರಿತ ಕಪ್ಪು ಮಣ್ಣನ್ನು ಹೊಂದಿದ್ದು, ತೋಟಗಾರಿಕೆ ಬೆಳೆಗಳನ್ನು ಬೆಳೆಯಲು ಸೂಕ್ತ ವಾತಾವರಣ ಹೊಂದಿದೆ. ಜಿಲ್ಲೆಯಲ್ಲಿ ಪ್ರಮುಖವಾಗಿ ಬಾಳೆ, ಅರಿಶಿಣ, ತೆಂಗು, ಅಡಿಕೆ, ಮಾವು, ಸಪೋಟ, ಪರಂಗಿ, ಹಲಸು, ದಾಳಿಂಬೆ, ಟಮೋಟೋ, ಈರುಳ್ಳಿ, ಮೆಣಸಿನಕಾಯಿ, ಬದನೆ ಇತರೆ ತರಕಾರಿಗಳೊಂದಿಗೆ ಸಂರಕ್ಷಿತ ಬೇಸಾಯವಾದ ಹಸಿರು ಮನೆಯಲ್ಲಿ ಜರ್ಬೆರಾ, ಕಾರ್ನೇಷನ್ ಹಾಗೂ ಕ್ಯಾಪ್ಸಿಕಮ್ ಬೆಳೆಗಳನ್ನು ಇತ್ತೀಚಿನ ದಿನಗಳಲ್ಲಿ ಬೆಳೆಯುತ್ತಿದ್ದು, ಒಟ್ಟಾರೆ ಜಿಲ್ಲೆಯ ಭೌಗೋಳಿಕ **ವಿಸ್ತೀರ್ಣ 5,69,900 ಹೆಕ್ಟೇರ್ ಪ್ರದೇಶದಲ್ಲಿ 2,59,432 ಹೆಕ್ಟೇರ್ ಪ್ರದೇಶ**ವು ಸಾಗುವಳಿಗೆ ಯೋಗ್ಯವಾಗಿದ್ದು, **ಶೇ.23.02 ಭಾಗ**ದಷ್ಟು ತೋಟಗಾರಿಕೆ ಬೆಳೆಗಳನ್ನು ಬೆಳೆಯಲಾಗತ್ತಿದೆ.

ಅಧಿಕಾರಿ / ಸಿಬ್ಬಂದಿ ವಿವರ

ಕ್ರ.ಸಂ.	ಪದನಾಮ	ಮಂಜೂರಾದ ಹುದ್ದೆಗಳು	ಭರ್ತಿ ಹುದ್ದೆಗಳು	ಖಾಲಿ ಹುದ್ದೆಗಳು
1	ತೋಟಗಾರಿಕೆ ಉಪನಿರ್ದೇಶಕರು	1	1	0
2	ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು	5	5	0
3	ಸಹಾಯಕ ತೋಟಗಾರಿಕೆ ನಿರ್ದೇಶಕರು	10	8	2
4	ಸಹಾಯಕ ತೋಟಗಾರಿಕೆ ಅಧಿಕಾರಿ	4	2	2
5	ಸಹಾಯಕ ತೋಟಗಾರಿಕೆ ಅಧಿಕಾರಿ (ರೈತ ಸಂಪರ್ಕ ಕೇಂದ್ರ)	16	3	13
6	ಅಧೀಕ್ಷಕರು	4	4	0
7	ಪ್ರಥಮ ದರ್ಜೆ ಸಹಾಯಕರು	5	3	2
8	ದ್ವಿತೀಯ ದರ್ಜೆ ಸಹಾಯಕರು	5	5	0
9	ಬೆರಳಚ್ಚುಗಾರರು	1	0	1
10	ತೋಟಗಾರಿಕೆ ಸಹಾಯಕರು	22	16	6
11	ಜೇನು ಕೃಷಿ ಸಹಾಯಕರು	2	0	2
12	ವಾಹನ ಚಾಲಕರು	2	1	1
13	ಡಿ ಗ್ರೂಪ್ ನೌಕರರು	1	1	0
14	ತೋಟಗಾರರು	40	16	24
ಒಟ್ಟು		**118**	**65**	**53**

2019–20ನೇ ಸಾಲಿನಲ್ಲಿ ಅನುಷ್ಠಾನಗೊಳಿಸಿದ ಯೋಜನೆಗಳ ವಿವರ:

ತೋಟಗಾರಿಕೆ ಇಲಾಖೆಯಿಂದ 2019–20 ನೇ ಸಾಲಿನಲ್ಲಿ ಜಿಲ್ಲಾವಲಯ, ರಾಜ್ಯವಲಯ ಮತ್ತು ಕೇಂದ್ರವಲಯ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದ್ದು, ಸದರಿ ಸಾಲಿಗೆ ಜಿಲ್ಲಾವಲಯ ಯೋಜನೆಯಡಿ ಜಿಲ್ಲೆಗೆ **ರೂ.123.99 ಲಕ್ಷ** ಅನುದಾನ ಬಿಡುಗಡೆಯಾಗಿದ್ದು, **ರೂ.117.60595 ಲಕ್ಷ** ಅನುದಾನವನ್ನು ವೆಚ್ಚ ಭರಿಸಲಾಗಿದೆ. ಜಿಲ್ಲಾ ವಲಯ ಕಾರ್ಯಕ್ರಮಗಳಾದ ರಾಷ್ಟ್ರೀಯ ಎಣ್ಣೆಕಾಳು ಮತ್ತು ಎಣ್ಣೆ ತಾಳೆ ಅಭಿಯಾನ, ತೋಟಗಾರಿಕೆ ಬೆಳೆಗಳಿಗೆ ವಿಶೇಷ ಹನಿ ನೀರಾವರಿ, ತೆಂಗು ಬೀಜ ಸಂಗ್ರಹಣೆ ಮತ್ತು ನರ್ಸರಿ ನಿರ್ವಹಣೆ, ಜೇನು ಸಾಕಾಣಿಕೆ, ತೋಟಗಾರಿಕೆ ಕಟ್ಟಡಗಳು, ತೋಟಗಾರಿಕೆ ಕ್ಷೇತ್ರಗಳ ನಿರ್ವಹಣೆ ಹಾಗೂ ಪ್ರಚಾರ ಸಾಹಿತ್ಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಹನಿ ನೀರಾವರಿ ಯೋಜನೆಯಲ್ಲಿ ಜಿಲ್ಲೆಯ ರೈತರಿಗೆ ತೋಟಗಾರಿಕೆ ಬೆಳೆಗಳಿಗೆ ಹನಿ ನೀರಾವರಿ ಅಳವಡಿಕೆಗಾಗಿ ಸಹಾಯಧನ ಹಾಗೂ ತೆಂಗು ಬೀಜ ಸಂಗ್ರಹಣೆ ಮತ್ತು ನರ್ಸರಿ ನಿರ್ವಹಣೆ ಯೋಜನೆಯಡಿ ಜಿಲ್ಲೆಯ ರೈತರಿಗೆ ಉತ್ತಮ ಗುಣಮಟ್ಟದ ತೆಂಗು ಸಸಿಗಳನ್ನು ಉತ್ಪಾದಿಸಿ ಇಲಾಖಾ ದರದಲ್ಲಿ ಆಯಾ ತಾಲ್ಲೂಕಿನ ತೋಟಗಾರಿಕೆ ಕ್ಷೇತ್ರಗಳಲ್ಲಿ ಮಾರಾಟ ಮಾಡಲಾಗುತ್ತಿದೆ ಹಾಗೂ ವಿವಿಧ ಯೋಜನೆಗಳಲ್ಲಿ ರೈತರಿಗೆ ವಿತರಿಸಿದೆ. ಎಣ್ಣೆ ತಾಳೆ ಬೇಸಾಯ ಯೋಜನೆಯಡಿ ಜಿಲ್ಲೆಯ ರೈತರಿಗೆ ತಾಂತ್ರಿಕ ತರಬೇತಿ, ಶೇ.50ರ ದರದಲ್ಲಿ ತಾಳೆ ಕೊಯ್ಲು ಉಪಕರಣಗಳಿಗೆ, ಡೀಸೆಲ್ ಪಂಪ್‌ಸೆಟ್ ಖರೀದಿಗೆ, ಕೊಳವೆ ಬಾವಿ ಹಾಗೂ ನೀರು ಸಂಗ್ರಹಣಾ ಘಟಕಗಳಿಗೆ ಮತ್ತು ಅಂತರ ಬೆಳೆಗೆ ಸಹಾಯಧನ ವಿತರಿಸಿದೆ.

ತಾಲ್ಲೂಕು ಪಂಚಾಯತ್ ಯೋಜನೆಗಳಾದ ರೈತರಿಗೆ ತರಬೇತಿ ಹಾಗೂ ರೈತರಿಗೆ ಸಹಾಯ ಕಾರ್ಯಕ್ರಮಗಳಲ್ಲಿ ಆಯಾ ತಾಲ್ಲೂಕುಗಳ ರೈತ / ರೈತ ಮಹಿಳೆಯರಿಗೆ ತೋಟಗಾರಿಕೆ ವಿಷಯಗಳ ಬಗ್ಗೆ 2 ದಿನಗಳ ತರಬೇತಿ ನೀಡಲಾಗಿದೆ ಹಾಗೂ ರೈತರಿಗೆ ಸಹಾಯ ಕಾರ್ಯಕ್ರಮದಲ್ಲಿ ಮಾವು, ಸಪೋಟ ಮತ್ತು ತೆಂಗು ಸಸಿ / ಕಸಿ ಗಿಡಗಳನ್ನು ವಿತರಿಸುವ ಮೂಲಕ ಪ್ರದೇಶ ವಿಸ್ತರಣೆ ಕೈಗೊಂಡು ಪ್ರಾತ್ಯಕ್ಷತೆ ತಾಕುಗಳನ್ನು ನಿರ್ಮಿಸಲಾಗಿದೆ ಹಾಗೂ ಶೇ.50 ರ ರಿಯಾಯಿತಿ ದರದಲ್ಲಿ ಸಸ್ಯ ಸಂರಕ್ಷಣಾ ಔಷಧಿ ಖರೀದಿಗೆ ಸಹಾಯ ನೀಡಲಾಗಿದೆ. ಅಲಂಕಾರಿಕ ಕುಂಡಗಳನ್ನು ಉತ್ಪಾದಿಸಿ ಸರ್ಕಾರಿ ಕಛೇರಿ ಮತ್ತು ಅತಿಥಿ ಗೃಹಗಳಿಗೆ ವಿತರಿಸಲು ಕ್ರಮವಹಿಸಲಾಗಿದೆ **(ಅನುಬಂಧ–1)**.

ರಾಜ್ಯವಲಯ ಯೋಜನೆಯಡಿ ಜಿಲ್ಲೆಗೆ **ರೂ.360.58 ಲಕ್ಷ** ಅನುದಾನ ಬಿಡುಗಡೆಯಾಗಿದ್ದು **ರೂ.353.09 ಲಕ್ಷ** ಅನುದಾನ ವೆಚ್ಚ ಭರಿಸಲಾಗಿದೆ. ಪ್ರಮುಖ ಯೋಜನೆಗಳಾದ ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆ, ಕೃಷಿಭಾಗ್ಯ, ತೋಟಗಾರಿಕೆ ಕೀಟ ರೋಗ ನಿಯಂತ್ರಣ ಯೋಜನೆ, ಮಧುವನ ಮತ್ತು ಜೇನು ಸಾಕಾಣೆ ಅಭಿವೃದ್ಧಿ ಮತ್ತು ಕರ್ನಾಟಕ ಜಲಾನಯನ ಅಭಿವೃದ್ಧಿ ಯೋಜನೆ (ಸುಜಲಾ–III) ಅನುಷ್ಠಾನಗೊಳಿಸಲಾಗಿದೆ.

ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿ **ರೂ.218.214 ಲಕ್ಷ** ಅನುದಾನ ಬಿಡುಗಡೆಗೆ **ರೂ.211.65825 ಲಕ್ಷ** ವೆಚ್ಚ ಭರಿಸಿ ಗುಚ್ಚ ಗ್ರಾಮಗಳಲ್ಲಿ ಆಯ್ದ ಬೆಳೆಯಾದ ಬಾಳೆ, ಕಲ್ಲಂಗಡಿ, ಟಮೋಟೋ, ಪ್ರದೇಶ ವಿಸ್ತರಣೆ ಕೈಗೊಂಡು ಸಮಗ್ರವಾಗಿ ಪೂರ್ಣ ಪ್ರಮಾಣದಲ್ಲಿ ಇತ್ತೀಚಿನ ವೈಜ್ಞಾನಿಕ ತಂತ್ರಜ್ಞಾನ ಅಳವಡಿಸಿ ಬೇಸಾಯ ಕ್ರಮ ಕೈಗೊಳ್ಳಲು ತರಬೇತಿ, ಅಧ್ಯಯನ ಪ್ರವಾಸ, ಕ್ಷೇತ್ರೋತ್ಸವ ಹಮ್ಮಿಕೊಳ್ಳುವುದರ ಮೂಲಕ ಜಿಲ್ಲೆಯಲ್ಲಿ ತೋಟಗಾರಿಕೆ ಪ್ರದೇಶವನ್ನು ಅಭಿವೃದ್ಧಿ ಪಡಿಸಲಾಗುತ್ತಿದೆ.

ಕೃಷಿಭಾಗ್ಯ ಯೋಜನೆಯಡಿ ಕಳೆದ ಸಾಲಿನ ಬಾಕಿ ಪಾಲಿಮನೆ ಬೆಳೆಪದ್ಧತಿ ಕಾರ್ಯಕ್ರಮಕ್ಕೆ **ರೂ.6.165 ಲಕ್ಷ** ಅನುದಾನ ಬಿಡುಗಡೆಯಾಗಿದ್ದು, ಪೂರ್ಣ ವೆಚ್ಚ ಭರಿಸಲಾಗಿದೆ.

ತೋಟಗಾರಿಕೆ ಬೆಳೆಗಳ ಕೀಟ ಮತ್ತು ರೋಗಗಳ ಸಮಗ್ರ ನಿಯಂತ್ರಣ ಯೋಜನೆಯಡಿ **ರೂ.41.00 ಲಕ್ಷ** ಬಿಡುಗಡೆಯಾಗಿದ್ದು, **ರೂ.40.89443 ಲಕ್ಷ** ವೆಚ್ಚ ಭರಿಸಿ ಜಿಲ್ಲೆಯ ರೈತರಿಗೆ ತೋಟಗಾರಿಕೆ ಬೆಳೆಗಳಲ್ಲಿ ಕಂಡು ಬರುವ ರೋಗ ಮತ್ತು ಕೀಟ ನಿಯಂತ್ರಣಕ್ಕಾಗಿ ಶೇ.75ರ ರಿಯಾಯಿತಿಯಲ್ಲಿ ಔಷಧಿ ಖರೀದಿಗೆ ಸಹಾಯಧನ ನೀಡಲಾಗುತ್ತಿದೆ ಹಾಗೂ ಕಪ್ಪು ತಲೆ ಕಂಬಳಿ ಹುಳು ಬಾಧೆ ಇರುವ ರೈತರ ತೆಂಗಿನ ತಾಕುಗಳಿಗೆ ಗೋನಿಯೋಜಸ್ ಪರೋಪ ಜೀವಿಗಳನ್ನು ಉಚಿತವಾಗಿ ವಿತರಣೆ ಮಾಡಿ ಕೀಟ ಬಾಧೆಯನ್ನು ತಡೆಗಟ್ಟಲು ಅಗತ್ಯ ಕ್ರಮವಹಿಸಲಾಗಿದೆ.

ಕೇಂದ್ರವಲಯ ಯೋಜನೆಯಡಿ ಒಟ್ಟಾರೆ ಜಿಲ್ಲೆಗೆ **ರೂ.1246.64 ಲಕ್ಷ** ಅನುದಾನ ಬಿಡುಗಡೆಗೆ **ರೂ.1236.67 ಲಕ್ಷ** ವೆಚ್ಚ ಭರಿಸಿ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿದೆ. ಪ್ರಮುಖವಾಗಿ ಹನಿ ನೀರಾವರಿ ಯೋಜನೆಯಡಿ **ರೂ.698.34 ಲಕ್ಷ** ಅನುದಾನ ಬಿಡುಗಡೆಯಾಗಿದ್ದು, **ರೂ.695.39261 ಲಕ್ಷ** ಅನುದಾನ ಖರ್ಚು ಭರಿಸಿ ಜಿಲ್ಲೆಯ ರೈತರ ತೋಟಗಾರಿಕೆ ಬೆಳೆಗಳಿಗೆ ಹನಿ ನೀರಾವರಿ ಉಪಕರಣಗಳ ಅಳವಡಿಕೆಗೆ ಶೇ.90ರ ಸಹಾಯಧನ ನೀಡುವ ಮೂಲಕ ಜಿಲ್ಲೆಯಲ್ಲಿ ನೀರಿನ ಮಿತ ಬಳಕೆಯಿಂದಾಗಿ ಹೆಚ್ಚಿನ ಮಟ್ಟದಲ್ಲಿ ತೋಟಗಾರಿಕೆ ಬೆಳೆಗಳ ಪ್ರದೇಶ ವಿಸ್ತರಣೆ ಕೈಗೊಳ್ಳಲಾಗಿದೆ.

ರಾಷ್ಟ್ರೀಯ ತೋಟಗಾರಿಕೆ ಮಿಷನ್:

ಯೋಜನೆಯಡಿ **ರೂ.420.67 ಲಕ್ಷ** ಅನುದಾನ ಬಿಡುಗಡೆಗೆ **ರೂ.414.77904 ಲಕ್ಷ** ವೆಚ್ಚ ಭರಿಸುವ ಮೂಲಕ ಜಿಲ್ಲೆಯ ರೈತರಿಗೆ ತೋಟಗಾರಿಕೆ ಬೆಳೆಗಳ ಪ್ರದೇಶ ವಿಸ್ತರಣೆ, ಸಂಸ್ಕರಣೆ, ಕೀಟ ಮತ್ತು ರೋಗ ನಿಯಂತ್ರಣ, ಕೃಷಿಹೊಂಡ, ಪ್ಯಾಕ್‌ಹೌಸ್, ಪಾಲಿಹೌಸ್ ಮತ್ತು ರೈತರಿಗೆ ತರಬೇತಿ ಹಾಗೂ ಹೊರರಾಜ್ಯ ಪ್ರವಾಸ ನೀಡುವ ಮೂಲಕ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗಿದೆ. ತೆಂಗು ಅಭಿವೃದ್ಧಿ ಮಂಡಳಿ ವತಿಯಿಂದ ಜಿಲ್ಲೆಯ ತೆಂಗು ಬೆಳೆಗೆ ಸಂಬಂಧಿಸಿದಂತೆ ಹಳೆಯ ಪ್ರಾತ್ಯಕ್ಷತೆ ತಾಕುಗಳ ನಿರ್ವಹಣೆ, ಹೊಸ ಪ್ರಾತ್ಯಕ್ಷತೆ ತಾಕುಗಳ ನಿರ್ವಹಣೆ, ಮರುನಾಟಿ ಮತ್ತು ಪುನಃಶ್ಚೇತನ, ಹಾಗೂ ನಿರ್ವಹಣೆ ಕಾರ್ಯಕ್ರಮವನ್ನು ಕೈಗೊಳ್ಳುವ ಮೂಲಕ ತೆಂಗು ಬೆಳೆಯ ಉತ್ಪಾದಕತೆ ಹೆಚ್ಚಿಸುವ ನಿಟ್ಟಿನಲ್ಲಿ ಜಿಲ್ಲೆಯ ತೆಂಗು ಬೆಳೆಗಾರರಿಗೆ ನೆರವಾಗಿದೆ (ಅನುಬಂಧ–4) ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ **ರೂ.74.50576 ಲಕ್ಷ** ಬಿಡುಗಡೆಗೆ **ರೂ.74.17966 ಲಕ್ಷ** ವೆಚ್ಚಭರಿಸಲಾಗಿದ್ದು ಸದರಿ ಯೋಜನೆಯಡಿ ಪ್ಯಾಕ್‌ಹೌಸ್ ಹಾಗೂ ಯಾಂತ್ರೀಕರಣ ಕಾರ್ಯಕ್ರಮಕ್ಕೆ ಸಹಾಯಧನ ನೀಡಲಾಗಿರುತ್ತದೆ.

ಪ್ರಸಕ್ತ ಸಾಲಿನಲ್ಲಿ ರೈತರಿಗೆ ತೋಟಗಾರಿಕೆ ಬೆಳೆಗಳ ತಾಂತ್ರಿಕ ಮಾಹಿತಿ ಒದಗಿಸಲು ಅರಿವಾಗುವಂತೆ ಜಿಲ್ಲಾ ಮಟ್ಟದಲ್ಲಿ ಹಾರ್ಟಿಕ್ಲಿನಿಕ್‌ನ್ನು ಸ್ಥಾಪಿಸಿದ್ದು, ವಿಷಯ ತಜ್ಞರ ಮೂಲಕ ಜಿಲ್ಲೆಯ ರೈತರಿಗೆ ಮಾರ್ಗದರ್ಶನ ನೀಡುತ್ತಾ ಕೆಲಸ ನಿರ್ವಹಿಸುತ್ತಿದೆ.

2019–20ನೇ ಸಾಲಿನ ಮಾರ್ಚ್–2020ರ ಮಾಹೆಯ ಅಂತ್ಯದವರೆಗೆ ಅನುಷ್ಠಾನಾಧಿಕಾರಿ / ಘಟಕವಾರು ರಾಜ್ಯವಲಯ ಪ್ರಗತಿ ವರದಿ.

ಜಿಲ್ಲೆ : ಚಾಮರಾಜನಗರ ಆರ್ಥಿಕ : ರೂ.ಲಕ್ಷಗಳಲ್ಲಿ

ಕ್ರ.ಸಂ.	ಯೋಜನೆಯ ಹೆಸರು	ವಾರ್ಷಿಕ ಗುರಿ		ಸಾಧನೆ				ಬಿಡುಗಡೆಯಾಗಿರುವ ಅನುದಾನ
		ಆರ್ಥಿಕ	ಭೌತಿಕ	ಆರ್ಥಿಕ		ಭೌತಿಕ		
				ಗುರಿ	ಸಾಧನೆ	ಗುರಿ	ಸಾಧನೆ	
1	ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ.	698.35	1312.66	698.35	695.39261	1312.66	755	698.34
2	ತೆಂಗು ಉತ್ಪಾದಕತೆ ಅಭಿವೃದ್ಧಿಗಾಗಿ ಸಮಗ್ರ ತೆಂಗು ಬೇಸಾಯ ಯೋಜನೆ.	56.419	377.50	56.419	21.86317	377.50	189.10	22.009
3	ಇಲಾಖಾ ಪ್ರಯೋಗ ಶಾಲೆಗಳ ಅಭಿವೃದ್ಧಿ ಯೋಜನೆ (ತರಕಾರಿ ಬೀಜಗಳ ಮಾದರಿ ಸಂಗ್ರಹಣೆ ಮತ್ತು ವಿಶ್ಲೇಷಣೆ)	0.60	60	0.60	0.59280	60	60	0.60
4	ತೋಟಗಾರಿಕೆ ಬೆಳೆಗಳ ಹಾನಿಕಾರಕ ಕೀಟ ಮತ್ತು ರೋಗಗಳ ಸಮಗ್ರ ನಿಯಂತ್ರಣಕ್ಕಾಗಿ ಯೋಜನೆ.	41.00	477.66	41.00	40.89443	477.66	490.27	41.00
5	ಕೃಷಿ ಕ್ಷೇತ್ರ ಮತ್ತು ಸಸ್ಯವಾಟಿಕೆಗಳ ಅಭಿವೃದ್ಧಿ ಮತ್ತುನಿರ್ವಹಣೆ.	14.20	10933	14.20	6.24	10933		6.26
6	ನಿರ್ದೇಶನ ಮತ್ತು ಆಡಳಿತ.	10.50		10.50	10.46854			10.50
7	ತೋಟಗಾರಿಕೆ ಕಟ್ಟಡಗಳು	40.00	1	40.00	40.00	1	1	40.00
8	ತೋಟಗಾರಿಕೆ ಮಾಹಿತಿ ಮತ್ತು ಸಲಹಾ ಕೇಂದ್ರ "ಹಾರ್ಟಿ ಕ್ಲಿನಿಕ್".	8.28	8	8.28	8.27998	8	1	8.28
9	ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ	90.50576	280	90.50576	74.17966	280	280	74.50576
10	ಸಮಗ್ರ ತೋಟಗಾರಿಕಾ ಅಭಿವೃದ್ಧಿ ಯೋಜನೆ.	225.340	3074.74	225.340	203.37827	3074.74	2142.28	209.934
11	ಮಧುವನ ಅಭಿವೃದ್ಧಿ ಜೇನು ಸಾಕಾಣಿಕೆ.	6.24	218	6.24	5.76741	218	152	6.24
12	ರಾಷ್ಟ್ರೀಯ ಎಣ್ಣೇ ಕಾಳು ಹಾಗೂ ಎಣ್ಣೆ ತಾಳೆ ಮಿಷನ್ ಯೋಜನೆ.	30.65	747.586	30.65	30.45579	747.586	787.295	30.456
13	ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆ.	466.09	968.40	466.09	414.77904	968.40	870.93	420.67
14	ಕೃಷಿಭಾಗ್ಯ ಯೋಜನೆ	6.165	0.35	6.165	6.165	0.35	0.35	6.165
	ಒಟ್ಟು	**1694.34**	**18458.90**	**1694.34**	**1558.46**	**18458.90**	**5729.23**	**1574.96**

15. ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ ಚಾಮರಾಜನಗರ ಜಿಲ್ಲೆ

2019-20ನೇ ಸಾಲಿನ ವಾರ್ಷಿಕ ಆಡಳಿತ ವರದಿ.

ಜಿಲ್ಲೆಯಲ್ಲಿರುವ ರೈತರ ಬೇಸಾಯದ ಜೊತೆಗೆ ಪಶುಪಾಲನೆಯು ಬೆನ್ನೆಲುಬಾಗಿಯೂ, ಉಪಕಸುಬಾಗಿಯೂ ಇರುವುದು. ಜಿಲ್ಲೆಯಲ್ಲಿರುವ ಜಾನುವಾರು ಹಾಗೂ ಇತರೆ ಸಂಪತ್ತನ್ನು ಸಂವರ್ಧಿಸಿ ತನ್ಮೂಲಕ ಅವುಗಳ ಉತ್ಪಾದನೆಯನ್ನು ಹೆಚ್ಚಿಸಲು ಪಶುಪಾಲನಾ ಇಲಾಖೆಯು ಪ್ರಯುತ್ನಿಸುತ್ತಿದ್ದು, ಇದರಿಂದ ಜನಸಾಮಾನ್ಯರಿಗೆ ಉದ್ಯೋಗಾವಕಾಶ ದೊರಕುವಂತಾಗಿ ಅವರ ಆರ್ಥಿಕ ಮಟ್ಟವನ್ನು ಸುಧಾರಿಸಲು ಸಾಧ್ಯವಾಗಿದೆ. ಜಿಲ್ಲೆಯಲ್ಲಿ ಕ್ಷೀರೋತ್ಪಾದನೆಯನ್ನು ಹೆಚ್ಚುಸುವುದಕ್ಕಾಗಿ ಜಾನುವಾರುಗಳಿಗೆ ಕೃತಕ ಗರ್ಭಧಾರಣೆ ಮೂಲಕ ಉತ್ತಮ ಗುಣಮಟ್ಟದ ದೇಶೀತಳಿ ಮತ್ತು ಮಿಶ್ರತಳಿ ಹಸುಗಳನ್ನು ಮತ್ತು ಸುಧಾರಿತ ಎಮ್ಮೆ ತಳಿಗಳನ್ನು ವೃದ್ಧಿಸುವ ಮಹತ್ತರ ಕಾರ್ಯದಲ್ಲಿ ಇಲಾಖೆಯು ತೊಡಗಿದೆ. ಹೈನುಗಾರಿಕೆ, ಕೋಳಿ ಸಾಕಾಣಿಕೆ, ಕುರಿ ಸಾಕಾಣಿಕೆ, ಕರು ಸಾಕಾಣಿಕೆ ಹಾಗೂ ಮೇವು ಅಭಿವೃದ್ಧಿ ಮುಂತಾದ ಯೋಜನೆಗಳ ಅನುಷ್ಠಾನ, ತರಬೇತಿ ಇತ್ಯಾದಿ ಚಟುವಟಿಕೆಗಳನ್ನು ಇಲಾಖೆಯು ನಡೆಸಿಕೊಂಡು ಬರುತ್ತಿದೆ.

ಜಿಲ್ಲೆಯಲ್ಲಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ, ಸಣ್ಣ ಹಾಗೂ ಅತಿಸಣ್ಣ ಹಿಡುವಳಿದಾರರಿಗೆ, ಭೂ ರಹಿತ ಕೃಷಿ ಕಾರ್ಮಿಕರಿಗೆ ಆರ್ಥಿಕವಾಗಿ ದುರ್ಬಲರಾದವರಿಗೆ ಮತ್ತು ಮಹಿಳೆಯರಿಗಾಗಿ ಇಲಾಖೆಯು ಜಿಲ್ಲಾ ಪಂಚಾಯತ್ ನೆರವಿನಿಂದ ಹಲವಾರು ಅಭಿವೃದ್ಧಿ ಯೋಜನೆಗಳನ್ನು ರೂಪಿಸಿಕೊಂಡು ಅನುಷ್ಠಾನಗೊಳಿಸುತ್ತಿದೆ. ಈ ಯೋಜನೆಗಳ ಪ್ರಯೋಜನವು ಅರ್ಹ ಫಲಾನುಭವಿಗಳನ್ನು ತಲುಪುವಂತೆ ಮಾಡಲು ಶ್ರಮಿಸುತ್ತಿದೆ. ಇವುಗಳಲ್ಲಿ ವಿಶೇಷ ಘಟಕ ಯೋಜನೆ, ಗಿರಿಜನ ಉಪಯೋಜನೆ, ಜಾನುವಾರು ಚಿಕಿತ್ಸಾ ಶಿಬಿರಗಳು, ಗಿರಿರಾಜ ಕೋಳಿ ಸಾಕಾಣಿಕೆ ಮತ್ತು ಮೇವು ಅಭಿವೃದ್ಧಿ ಕಾರ್ಯಕ್ರಮ ಇವೇ ಮೊದಲಾದ ಹಲವಾರು ಜನಪ್ರಿಯ ಯೋಜನೆಗಳಾಗಿರುತ್ತವೆ.

2019ರ 20ನೇ ಜಾನುವಾರು ಗಣತಿ (ತಾತ್ಕಾಲಿಕ ವರದಿ)ಯ ಪ್ರಕಾರ ಚಾಮರಾಜನಗರ ಜಿಲ್ಲೆಯಲ್ಲಿ ಒಟ್ಟು 5.49ಲಕ್ಷ ಜಾನುವಾರುಗಳು ಹಾಗೂ 7.30ಲಕ್ಷ ಕುಕ್ಕುಟಗಳಿವೆ. ಜಿಲ್ಲೆಯಲ್ಲಿ ಒಟ್ಟು 83 ವಿವಿಧ ರೀತಿಯ ಪಶುವೈದ್ಯ ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿದ್ದು, ಇವುಗಳಲ್ಲಿ ಹಳ್ಳಿಯಿಂದ ಹಳ್ಳಿಗೆ ರೈತರಿಗೆ ಅನುಕೂಲವಾಗುವಂತೆ ಜಾನುವಾರುಗಳ ಚಿಕಿತ್ಸೆ ಹಾಗೂ ಔಷಧೋಪಚಾರಕ್ಕಾಗಿ ಕಾರ್ಯ ನಿರ್ವಹಿಸುತ್ತಿರುವ 4 ಸಂಚಾರಿ ಪಶುಚಿಕಿತ್ಸಾಲಯಗಳು ಮತ್ತು 1 ಜಿಲ್ಲಾ ಪಶುಆಸ್ಪತ್ರೆ (ಪಾಲಿಕ್ಲಿನಿಕ್) ಸಹ ಸೇರಿವೆ.

ಜಿಲ್ಲೆಯಲ್ಲಿ ಎಲ್ಲಾ ವೃಂದಗಳು ಸೇರಿ ಒಟ್ಟು 356 ಹುದ್ದೆಗಳು ಮಂಜೂರಾಗಿದ್ದು, ಅವುಗಳಲ್ಲಿ 193 ಹುದ್ದೆಗಳು ಭರ್ತಿಯಾಗಿದ್ದು 163 ಹುದ್ದೆಗಳು ಖಾಲಿ ಇರುತ್ತವೆ. ಹುದ್ದೆಗಳ ವಿವರ ಈ ಕೆಳಕಂಡಂತಿದೆ;

ಕ್ರಸಂ	ಹುದ್ದೆಗಳ ಪದನಾಮದ ವಿವರ	ಹುದ್ದೆವಾರು ವಿವರ		
		ಮಂಜೂರು	ಭರ್ತಿ	ಖಾಲಿ
1	ಉಪ ನಿರ್ದೇಶಕರು	2	1	1
2	ಸಹಾಯಕ ನಿರ್ದೇಶಕರು	6	4	2
3	ಮುಖ್ಯ/ಹಿರಿಯ ಪಶುವೈದ್ಯಾಧಿಕಾರಿ	19	5	14
4	ಪಶುವೈದ್ಯಾಧಿಕಾರಿ	37	18	19
5	ಜಾನುವಾರು ಅಭಿವೃದ್ಧಿ ಅಧಿಕಾರಿ	6	5	1

6	ಜಾನುವಾರು ಅಧಿಕಾರಿ	9	7	2
7	ಹಿರಿಯ ಪಶುಪರೀಕ್ಷಕರು	41	27	14
8	ಪಶುವೈದ್ಯ ಪರೀಕ್ಷಕರು	31	29	2
9	ಪಶುವೈದ್ಯ ಸಹಾಯಕರು	48	18	30
10	ಆಡಳಿತ ಸಹಾಯಕರು	1	1	0
11	ಅಧೀಕ್ಷಕರು	1	1	0
12	ಪ್ರಥಮ ದರ್ಜೆ ಸಹಾಯಕರು	3	3	0
13	ದ್ವಿತೀಯ ದರ್ಜೆ ಸಹಾಯಕರು	6	6	0
14	ಎಕ್ಸ್‌ರೇ ಟೆಕ್‌ನಿಷಿಯನ್	1	0	1
15	ಬೆರಳಚ್ಚುಗಾರರು	1	1	0
16	ವಾಹನ ಚಾಲಕರು	6	2	4
17	ಡಿ. ದರ್ಜೆ ನೌಕರರು	138	61	77
ಒಟ್ಟು		**356**	**189**	**167**

2019-20ನೇ ಸಾಲಿನಲ್ಲಿ ಈ ಇಲಾಖೆಗೆ **ಜಿಲ್ಲಾ ಪಂಚಾಯತ್** ಯೋಜನಾ ಕಾರ್ಯಕ್ರಮಗಳಿಗೆ ರೂ.347.25 ಲಕ್ಷಗಳು ಮತ್ತು **ತಾಲ್ಲೂಕು ಪಂಚಾಯತ್** ಯೋಜನಾ ಕಾರ್ಯಕ್ರಮಗಳಿಗೆ ರೂ.982.88 ಲಕ್ಷಗಳು ಒಟ್ಟು **ರೂ.1330.13** ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು, **ರೂ.1297.29** ಲಕ್ಷಗಳು ವೆಚ್ಚವಾಗಿರುತ್ತದೆ. **ರಾಜ್ಯವಲಯ** ಯೋಜನೆಯಡಿಯಲ್ಲಿ **ರೂ.46.535** ಲಕ್ಷಗಳು ಅನುದಾನ ಬಿಡುಗಡೆಯಾಗಿದ್ದು **ರೂ.46.535**ಲಕ್ಷಗಳು ವೆಚ್ಚವಾಗಿರುತ್ತದೆ.

ಪ್ರಗತಿಯ ವಿವರ: 2019-20ನೇ ಸಾಲಿನಲ್ಲಿ ಚಾಮರಾಜನಗರ ಜಿಲ್ಲೆಯಲ್ಲಿನ ಪಶುವೈದ್ಯ ಸಂಸ್ಥೆಗಳಲ್ಲಿ ಜಾನುವಾರುಗಳಿಗೆ ಚಿಕಿತ್ಸೆ ನೀಡಿರುವುದು, ರೋಗ ನಿರೋಧಕ ಲಸಿಕೆ ಹಾಕಿರುವುದು, ಕಸಿ ಮಾಡಿರುವುದು, ಜಂತುನಾಶಕ ಔಷಧಿ ಕುಡಿಸಿರುವುದು ಹಾಗೂ ಕೃತಕ ಗರ್ಭಧಾರಣೆ ಮಾಡಿರುವ ಬಗ್ಗೆ ಪ್ರಗತಿಯ ವಿವರಗಳು ಕೆಳಕಂಡಂತಿವೆ.

1	ಹೊರರೋಗಿಗಳ ಚಿಕಿತ್ಸೆ	280553
2	ಕಸಿ ಮಾಡಿರುವುದು	24948
3	ಜಂತುನಾಶಕ ಔಷಧಿ ಕುಡಿಸಿರುವುದು	344758
4	ಕಾಲುಬಾಯಿ ಜ್ವರದ ವಿರುದ್ಧ ಲಸಿಕೆ ಹಾಕಿರುವುದು	245759
5	ಗಳಲೆ ರೋಗದ ವಿರುದ್ಧ ಲಸಿಕೆ ಹಾಕಿರುವುದು	-
6	ಕೊಕ್ಕರೆ ರೋಗದ ವಿರುದ್ಧ ಲಸಿಕೆ ಹಾಕಿರುವುದು	158495
7	ಚಪ್ಪೆ ರೋಗದ ವಿರುದ್ಧ ಲಸಿಕೆ ಹಾಕಿರುವುದು	6377
8	ಕರುಳುಬೇನೆ ರೋಗದ ವಿರುದ್ಧ ಲಸಿಕೆ ಹಾಕಿರುವುದು	461643
9	ಪಿಪಿಆರ್ ರೋಗದ ವಿರುದ್ಧ ಲಸಿಕೆ ಹಾಕಿರುವುದು	150852
10	ಗೊಡ್ಡುರಾಸು ಚಿಕಿತ್ಸಾ ಶಿಬಿರ	64
11	ಕೃತಕ ಗರ್ಭಧಾರಣೆ ಮಾಡಿರುವುದು	50257
12	ಫಲ ನಿಂತ ರಾಸುಗಳ ಸಂಖ್ಯೆ	21895
13	ಕರುಗಳ ಜನನ ಗಂಡು 6656	13068
	ಹೆಣ್ಣು 6412	

ಮುಖ್ಯ ಯೋಜನೆಗಳು ಹಾಗೂ ಅವುಗಳ ಗುರಿ ಮತ್ತು ಸಾಧನೆ

ಕಟ್ಟಡಗಳು :

ಜಿಲ್ಲೆಯಲ್ಲಿ ಸ್ವಂತ ಕಟ್ಟಡ ಹೊಂದಿರುವ ಪಶುವೈದ್ಯ ಸಂಸ್ಥೆಗಳ ದುರಸ್ಥಿಗಾಗಿ ಈ ಯೋಜನೆಯಡಿ ಬಿಡುಗಡೆಯಾಗುವ ಅನುದಾನದಲ್ಲಿ ಹಂತ ಹಂತವಾಗಿ ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗದಿಂದ ದುರಸ್ಥಿಗೊಳಿಸಲಾಗುವುದು. 2019-20ನೇ ಸಾಲಿನಲ್ಲಿ ಜಿಲ್ಲಾ ಪಂಚಾಯತ್ ವತಿಯಿಂದ ಬಿಡುಗಡೆಯಾದ ರೂ. 55.00 ಲಕ್ಷಗಳನ್ನು 27 ಕಟ್ಟಡಗಳ ಕಾಮಗಾರಿಗಳಿಗಾಗಿ ವೆಚ್ಚ ಮಾಡಲಾಗಿದೆ.

ಔಷಧಿಗಳು, ರಾಸಾಯನಿಕಗಳು ಮತ್ತು ಸಾಮಗ್ರಿಗಳ ಸರಬರಾಜು :

ಜಿಲ್ಲೆಯಲ್ಲಿ ಕೃತಕ ಗರ್ಭಧಾರಣೆಗೆ ಬೇಕಾಗುವ ವೀರ್ಯನಳಿಕೆಗಳ ಸಂರಕ್ಷಣೆಗೆ ಅಗತ್ಯವಿರುವ ದ್ರವಸಾರಜನಕವನ್ನು ಶೇಖರಿಸಿಡಲು ಬೇಕಾದ ಕ್ರಯೋಕ್ಯಾನುಗಳು, ದ್ರವಸಾರಜನಕ ಹಾಗೂ ಇತರೆ ಕೃತಕ ಗರ್ಭಧಾರಣಾ ಉಪಕರಣಗಳನ್ನು ಖರೀದಿಸಿ ವಿತರಿಸುವ ಕಾರ್ಯವನ್ನು ಈ ಯೋಜನೆಯಡಿ ಕೈಗೊಳ್ಳಲಾಗುತ್ತದೆ ಹಾಗೂ ಜಿಲ್ಲೆಯಲ್ಲಿರುವ ಜಾನುವಾರುಗಳ ಆರೋಗ್ಯವನ್ನು ಕಾಪಾಡಲು ಅವುಗಳಿಗೆ ಸಕಾಲಕ್ಕೆ ಜಂತುನಾಶಕ ಔಷಧಿ ಕುಡಿಸುವುದು, ಸೂಕ್ತ ಚಿಕಿತ್ಸೆ ಹಾಗೂ ಔಷಧೋಪಚಾರ ಮಾಡುವುದು ಅತ್ಯಾವಶ್ಯಕವಾಗಿರುತ್ತದೆ. ಈ ಎರಡೂ ಕಾರ್ಯಕ್ರಮಗಳ ಉದ್ದೇಶ ಸಾಧನೆಗಾಗಿ ಪ್ರಸಕ್ತ ಸಾಲಿನಲ್ಲಿ ಈ ಯೋಜನೆಯಡಿ ಜಿಲ್ಲಾ ಪಂಚಾಯತ್‌ನಿಂದ ಬಿಡುಗಡೆಯಾದ ರೂ. 110.00ಲಕ್ಷಗಳ ಅನುದಾನವನ್ನು ಪೂರ್ಣವಾಗಿ ವೆಚ್ಚ ಮಾಡಿ ಪ್ರಗತಿ ಸಾಧಿಸಲಾಗಿದೆ.

ಗಿರಿರಾಜ ಕೋಳಿಮರಿ ಸಾಕಾಣಿಕೆ :

ಈ ಕಾರ್ಯಕ್ರಮದಲ್ಲಿ ಗಿರಿರಾಜ ಕೋಳಿಮರಿಗಳನ್ನು 5-6 ವಾರದ ವಯಸ್ಸಿನವರೆಗೆ ಸಾಕಿ ವಿವಿಧ ಸಾಂಕ್ರಾಮಿಕ ರೋಗಗಳ ವಿರುದ್ಧ ಲಸಿಕೆ ಹಾಕಿದ ನಂತರ ಕೋಳಿಮರಿಗಳನ್ನು ಆಸಕ್ತ ರೈತರಿಗೆ ಹಾಗೂ ಮಹಿಳೆಯರಿಗೆ ಮಾರಾಟ ಮಾಡಲಾಗುವುದು.

ಕರ್ನಾಟಕ ಸಹಕಾರ ಕುಕ್ಕುಟ ಮಹಾ ಮಂಡಳಿ (ನಿ), ಬೆಂಗಳೂರು ಇಲ್ಲಿಂದ 2019-20ನೇ ಸಾಲಿಗೆ 12000 ಗಿರಿರಾಜ ಕೋಳಿಮರಿಗಳನ್ನು ಸಾಕುವ ಗುರಿ ಹೊಂದಲಾಗಿದ್ದು, 12000 ಕೋಳಿಮರಿಗಳನ್ನು ಸಾಕಾಣಿಕೆ ಮಾಡಿ ಪರಿಶಿಷ್ಟ ಜಾತಿ/ಪಂಗಡದ ಮಹಿಳಾ ಫಲಾನುಭವಿಗಳಿಗೆ ಉಚಿತವಾಗಿ ಹಾಗೂ ಸಾಮಾನ್ಯ ವರ್ಗದವರಿಗೆ ಶೇ.90%ರ ಸಹಾಯಧನದಲ್ಲಿ ವಿತರಣೆ ಮಾಡಲು ಕ್ರಮವಹಿಸಲಾಗಿದೆ. ಆರ್ಥಿಕವಾಗಿ ಶೇ. 100% ರಷ್ಟು ಪ್ರಗತಿ ಸಾಧಿಸಿದೆ.

ಈ ಯೋಜನೆಯಲ್ಲಿ ಜಿಲ್ಲಾ ಪಂಚಾಯತ್ ವತಿಯಿಂದ ಬಿಡುಗಡೆಯಾದ ರೂ. 12.00 ಲಕ್ಷಗಳ ಅನುದಾನವನ್ನು ಕೋಳಿ ಮರಿಗಳು, ಕೋಳಿ ಆಹಾರ ಹಾಗೂ ಔಷಧಿ ಮತ್ತು ರಾಸಾಯನಿಕಗಳನ್ನು ಖರೀದಿಸಲು ಪೂರ್ಣವಾಗಿ ವೆಚ್ಚ ಮಾಡಲಾಗಿದೆ.

ಗಿರಿಜನ ಉಪಯೋಜನೆ : (ಜಿಲ್ಲಾ ವಲಯ)

ಈ ಯೋಜನೆಯು ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿಯೂ ಅನುಷ್ಠಾನದಲ್ಲಿದ್ದು, ಆಯಾ ವರ್ಷ ಗ್ರಾಮ ಸಭೆಯಲ್ಲಿ ಆಯ್ಕೆಯಾಗಿ ತಾಲ್ಲೂಕು ಪಂಚಾಯತ್ ವತಿಯಿಂದ ಅನುಮೋದಿಸಲ್ಪಡುವ ಗಿರಿಜನ ಫಲಾನುಭವಿಗಳಿಗೆ ಉಳುಮೆ 3 ಕುರಿ/ಮೇಕೆ ಘಟಕಗಳನ್ನು ಖರೀದಿಸಿ ವಿತರಿಸಲಾಗುತ್ತಿದೆ. ಘಟಕದ ಒಟ್ಟು ವೆಚ್ಚ ರೂ.15,000-00 ಆಗಿದ್ದು, ತಲಾ ಘಟಕ ವೆಚ್ಚವೊಂದರಲ್ಲಿ ಶೇ.90 ರಷ್ಟು ಸಹಾಯಧನ ಹಾಗೂ ಶೇ. 10 ರಷ್ಟು ಫಲಾನುಭವಿ ವಂತಿಕೆ ಒಳಗೊಂಡಿರುತ್ತದೆ. ಈ ಯೋಜನೆಯಲ್ಲಿ ಮಹಿಳೆಯರಿಗೆ ಶೇ.33 ರಷ್ಟು ಮೀಸಲಾತಿ ಇರುತ್ತದೆ.

ಈ ಯೋಜನೆಯ ಅನುಷ್ಠಾನಕ್ಕಾಗಿ ಪ್ರಸಕ್ತ ಸಾಲಿಗೆ ಜಿಲ್ಲಾವಲಯದಡಿ ಬಿಡುಗಡೆಯಾದ ರೂ. 11.50 ಲಕ್ಷಗಳನ್ನು ಪೂರ್ಣವಾಗಿ ಖರ್ಚು ಮಾಡಿ 84 ಫಲಾನುಭವಿಗಳಿಗೆ 3 ಕುರಿ/ಮೇಕೆ ಘಟಕಗಳನ್ನು ಅನುಷ್ಠಾನಗೊಳಿಸಲಾಗಿದೆ.

ಗೊಡ್ಡುರಾಸು ಚಿಕಿತ್ಸಾ ಶಿಬಿರ :

ಚಾಮರಾಜನಗರ ಜಿಲ್ಲೆಯ ವಿವಿಧೆಡೆಗಳಲ್ಲಿ ಕಾಲಕಾಲಕ್ಕೆ ಏರ್ಪಡಿಸಲಾಗಿರುವ ಚಿಕಿತ್ಸಾ ಶಿಬಿರಗಳು ವಿಶಿಷ್ಟ ಬಗೆಯ ಸೇವೆಯನ್ನು ನೀಡುತ್ತಿದೆ. ರಾಸುಗಳಲ್ಲಿ ಫಲ ನಿಲ್ಲುವಲ್ಲಿ ಉಂಟಾಗಿರುವ ತೊಂದರೆಗಳನ್ನು ತಪಾಸಣೆ ಮಾಡಿ ಸೂಕ್ತ ಚಿಕಿತ್ಸೆ ನೀಡುವುದು. ಜಿಲ್ಲಾ ಪಂಚಾಯಿತಿಯು ಈ ಉದ್ದೇಶಕ್ಕಾಗಿ ಪ್ರಸಕ್ತ ಸಾಲಿನಲ್ಲಿ ಬಿಡುಗಡೆಯಾದ ರೂ. 14.39ಲಕ್ಷಗಳ ಅನುದಾನವನ್ನು ಪೂರ್ಣವಾಗಿ ವೆಚ್ಚ ಮಾಡಿ ಚಿಕಿತ್ಸೆಗೆ ಬೇಕಾದ ಅಗತ್ಯ ಔಷಧಿಗಳನ್ನು ಖರೀದಿಸಿ ಉಪಯೋಗಿಸಲಾಗಿದೆ. ಪ್ರಸಕ್ತ ಸಾಲಿನಲ್ಲಿ 57 ಶಿಬಿರಗಳನ್ನು ನಡೆಸುವ ಗುರಿ ಹೊಂದಲಾಗಿದ್ದು, ಇಲಾಖೆಯು ಒಟ್ಟು 64 ಶಿಬಿರಗಳನ್ನು ನಡೆಸಿ ಪ್ರಗತಿ ಸಾಧಿಸಲಾಗಿದೆ.

ಸಂಚಾರಿ ಪಶುಚಿಕಿತ್ಸಾಲಯಗಳು :

ಜಿಲ್ಲೆಯಲ್ಲಿ ಯಾವುದೇ ರೀತಿಯ ಪಶುವೈದ್ಯಕೀಯ ನೆರವು ಲಭಿಸದಂತಹ ದುರ್ಗಮ ಪ್ರದೇಶದಲ್ಲಿರುವ ಜಾನುವಾರುಗಳಿಗೆ ಚಿಕಿತ್ಸೆ ಹಾಗೂ ಇನ್ನಿತರೆ ಸೇವೆಗಳನ್ನು ನೀಡುವ ಉದ್ದೇಶದಿಂದ ಇವುಗಳು ಸ್ಥಾಪಿತವಾಗಿರುತ್ತದೆ. ಜಿಲ್ಲೆಯ 4 ತಾಲ್ಲೂಕುಗಳಲ್ಲಿ ಸಂಚಾರಿ ಪಶುಚಿಕಿತ್ಸಾಲಯಗಳು ಕಾರ್ಯ ನಿರ್ವಹಿಸುತ್ತಿವೆ.

ಮೇವು ಅಭಿವೃದ್ಧಿ ಕಾರ್ಯಕ್ರಮ :

ಜಾನುವಾರುಗಳಿಗೆ ವರ್ಷದ ಎಲ್ಲಾ ಋತುಗಳಲ್ಲಿಯೂ ಸಹ ಹಸಿರು ಮೇವು ಸಾಕಷ್ಟು ಪ್ರಮಾಣದಲ್ಲಿ ಲಭಿಸುವಂತೆ ಮಾಡಲು ಸಾಧ್ಯವಾದಲ್ಲಿ ಮಾತ್ರ ಅವುಗಳಿಂದ ಹೆಚ್ಚಿನ ಕ್ಷೀರೋತ್ಪಾದನೆ ನಿರೀಕ್ಷಿಸಲು ಸಾಧ್ಯ. ಮೇವು ಅಭಿವೃದ್ಧಿ ಕಾರ್ಯವನ್ನು ಈ ಉದ್ದೇಶ ಸಾಧನೆಗೆಂದೇ ರೂಪಿಸಿದ್ದು, ಸುಧಾರಿತ ಹುಲ್ಲಿನ ಬೀಜದ ಕಿರುಪೊಟ್ಟಣಗಳನ್ನು ಹಾಗೂ ಮೇವಿನ ಸಸಿಗಳನ್ನು ರೈತರಿಗೆ ಉಚಿತವಾಗಿ ಹಂಚುವ ಕಾರ್ಯ ಮಾಡಲಾಗುತ್ತಿದೆ. ಪ್ರಸಕ್ತ ಸಾಲಿನಲ್ಲಿ 1812ಹೆಕ್ಟೇರ್ ನಿಗದಿಪಡಿಸಲಾಗಿದ್ದು, ಇದರಲ್ಲಿ 3544.00 ಹೆಕ್ಟೇರುಗಳಲ್ಲಿ ಮೇವು ಬೆಳೆಸಿ ಪ್ರಗತಿ ಸಾಧಿಸಲಾಗಿದೆ.

ದೊಡ್ಡರೋಗ ನಿವಾರಣಾ ಯೋಜನೆ :

ಈ ಯೋಜನೆಯಡಿಯಲ್ಲಿ ಕೈಗೊಳ್ಳಲಾಗಿರುವ ಕಾರ್ಯಕ್ರಮಗಳು ಈ ಕೆಳಗಿನಂತಿವೆ;

1) ರಾಸುಗಳಲ್ಲಿ ದೊಡ್ಡರೋಗದ ಬಗ್ಗೆ ಗ್ರಾಮಾನ್ವೇಷಣೆ ಕಾರ್ಯಕ್ರಮದಲ್ಲಿ ಪ್ರಸಕ್ತ ಸಾಲಿಗೆ 864 ಹಳ್ಳಿಗಳ ಗುರಿ ಹೊಂದಲಾಗಿದ್ದು, 870 ಹಳ್ಳಿಗಳನ್ನು ಗ್ರಾಮಾನ್ವೇಷಣೆ ಕೈಗೊಂಡು ಶೇ.101ರಷ್ಟು ಸಾಧನೆ ಮಾಡಲಾಗಿದೆ.
2) ರಾಸುಗಳಲ್ಲಿ ದೊಡ್ಡರೋಗವನ್ನು ರಾಜ್ಯ ಹೆದ್ದಾರಿಯಲ್ಲಿ ಬರುವ ಹಳ್ಳಿಗಳಲ್ಲಿ ಪತ್ತೆ ಹಚ್ಚುವ ಕಾರ್ಯಕ್ರಮದಲ್ಲಿ 1116 ಹಳ್ಳಿಗಳ ಗುರಿ ಹೊಂದಲಾಗಿದ್ದು, 1116 ಹಳ್ಳಿಗಳನ್ನು ಪತ್ತೆ ಹಚ್ಚಿ ಶೇ.100 ರಷ್ಟು ಸಾಧನೆ ಮಾಡಲಾಗಿದೆ.
3) ದೊಡ್ಡರೋಗದ ದಿನದ ಪುಸ್ತಕ ಪರಿಶೀಲನೆ ಕಾರ್ಯಕ್ರಮದಲ್ಲಿ 132 ಸಂಸ್ಥೆಗಳ ಗುರಿ ಹೊಂದಲಾಗಿದ್ದು, 132 ಪಶುವೈದ್ಯ ಸಂಸ್ಥೆಗಳಲ್ಲಿ ಪರಿಶೀಲನೆ ಮಾಡಿ ಶೇ.100 ರಷ್ಟು ಸಾಧನೆ ಮಾಡಲಾಗಿದೆ.

ಮಾದರಿ ಸಮೀಕ್ಷೆ ಯೋಜನೆ :

ಈ ಯೋಜನೆಯಲ್ಲಿ ಜಾನುವಾರು ಹಾಗೂ ಕುಕ್ಕುಟಗಳ ಉತ್ಪನ್ನಗಳಾದ ಹಾಲು, ಮೊಟ್ಟೆ, ಉಣ್ಣೆ ಮತ್ತು ಮಾಂಸ ಇವುಗಳ ಉತ್ಪಾದನೆಯ ಸವಿಸ್ತಾರ ಅಧ್ಯಯನವನ್ನು ಋತುವಾರು ಸಂಗ್ರಹಿಸಲಾಗುತ್ತಿದೆ.

ಈ ಸಮೀಕ್ಷಾ ಕಾರ್ಯವನ್ನು ಬೇಸಿಗೆ ಕಾಲ, ಮಳೆಗಾಲ ಮತ್ತು ಚಳಿಗಾಲಗಳೆಂಬ ಮೂರು ಋತುಗಳನ್ನಾಗಿ ವಿಂಗಡಿಸಿ ನಡೆಸಲಾಗುತ್ತಿದ್ದು, ಪ್ರಸಕ್ತ ಸಾಲಿನಲ್ಲಿ ಎಲ್ಲಾ ಋತುಗಳಿಂದ 76 ಹಳ್ಳಿಗಳ ಗುರಿಗಳನ್ನು ಹೊಂದಿದ್ದು, 76 ಹಳ್ಳಿಗಳಲ್ಲಿ ಸಮೀಕ್ಷಾ ಕಾರ್ಯವನ್ನು ಕೈಗೊಂಡು ಶೇ.100ರಷ್ಟು ಪ್ರಗತಿ ಸಾಧಿಸಲಾಗಿದೆ.

ಹಾಲು ಉತ್ಪಾದಕರಿಗೆ ಪ್ರೋತ್ಸಾಹಧನ :

2019-20ನೇ ಸಾಲಿನಲ್ಲಿ ಹಾಲು ಉತ್ಪಾದನೆಯನ್ನು ಪ್ರೋತ್ಸಾಹಿಸುವ ಹಾಗೂ ಹಾಲು ಉತ್ಪಾದಕರ ಆರ್ಥಿಕಮಟ್ಟ ಸುಧಾರಿಸುವ ಉದ್ದೇಶದಿಂದ ಪ್ರತಿ ಲೀಟರಿಗೆ ರೂ.5/- ರಂತೆ ಕರ್ನಾಟಕ ಹಾಲು ಮಂಡಳಿಗೆ ಸರಬರಾಜು ಮಾಡುವ ಹಾಲು ಉತ್ಪಾದಕರಿಗೆ ಪ್ರೋತ್ಸಾಹಧನ ನೀಡುವ ಕಾರ್ಯಕ್ರಮ ಇದಾಗಿದ್ದು, ಏಪ್ರಿಲ್-2019 ರಿಂದ ಮಾರ್ಚ್-2020ರ ಅಂತ್ಯಕ್ಕೆ ಜಿಲ್ಲೆಯಲ್ಲಿ ಹಾಲು ಉತ್ಪಾದಕರಿಂದ 680.35 ಲಕ್ಷ ಲೀಟರ್ ಹಾಲು ಸರಬರಾಜು ಮಾಡಿದ್ದು, ಈ ಸಂಬಂಧ ರೂ.3401.77ಲಕ್ಷಗಳ ಪ್ರೋತ್ಸಾಹಧನ ವಿತರಿಸಲಾಗಿದೆ.

ರಾಜ್ಯ ವಲಯ (ಮಹಿಳೆಯರಿಗಾಗಿ ಪಶುಸಂಗೋಪನೆ (ಅಮೃತ), ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆ):

ಚಾಮರಾಜನಗರ ಜಿಲ್ಲೆಯಲ್ಲಿ ಪ್ರಸ್ತುತ ಸಾಲಿನಲ್ಲಿ ಮಹಿಳೆಯರಿಗಾಗಿ ಪಶುಸಂಗೋಪನೆ (ಅಮೃತ) ಯೋಜನೆಯಡಿ ಹೈನುಗಾರಿಕೆ, ಮತ್ತು ತಿಕುರಿ/ಮೇಕೆ ಘಟಕಗಳನ್ನು ಅನುಷ್ಠಾನಗೊಳಿಸಬೇಕಾಗಿದ್ದು, ಈ ಸಂಬಂಧ ಒಟ್ಟಾರೆ ರೂ. 23.45 ಲಕ್ಷ ಅನುದಾನ ಬಿಡುಗಡೆಯಾಗಿದ್ದು, 129 ಫಲಾನುಭವಿಗಳಿಗೆ ಸವಲತ್ತುಗಳನ್ನು ಒದಗಿಸಲಾಗಿದೆ.

ವಿಶೇಷ ಘಟಕ ಯೋಜನೆಯಡಿ ಹೈನುಗಾರಿಕೆ, ಕುರಿ/ಮೇಕೆ ಘಟಕ, ಹಾಗೂ ಹಂದಿ ಘಟಕಗಳನ್ನು ಅನುಷ್ಠಾನಗೊಳಿಸಬೇಕಾಗಿದ್ದು, ಈ ಸಂಬಂಧ ರೂ.21.87 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು, 48 ಫಲಾನುಭವಿಗಳಿಗೆ ಸವಲತ್ತುಗಳನ್ನು ಒದಗಿಸಲಾಗಿದೆ.

ಗಿರಿಜನ ಉಪ ಯೋಜನೆಯಡಿ ಕುರಿ/ಮೇಕೆ ಘಟಕ, ಹಾಗೂ ಹಂದಿ ಘಟಕಗಳನ್ನು ಅನುಷ್ಠಾನಗೊಳಿಸಬೇಕಾಗಿದ್ದು, ಈ ಸಂಬಂಧ ರೂ.1.62ಲಕ್ಷ ಅನುದಾನ ಬಿಡುಗಡೆಯಾಗಿದ್ದು, 3 ಫಲಾನುಭವಿಗಳಿಗೆ ಸವಲತ್ತುಗಳನ್ನು ಒದಗಿಸಲಾಗಿದೆ.

ಒಟ್ಟಾರೆ ರಾಜ್ಯ ವಲಯ ಯೋಜನೆಯಡಿ ರೂ.46.535 ಲಕ್ಷ ಅನುದಾನ ಬಿಡುಗಡೆಯಾಗಿದ್ದು, 180 ಫಲಾನುಭವಿಗಳಿಗೆ ಸವಲತ್ತುಗಳನ್ನು ಒದಗಿಸಲಾಗಿದೆ.

2019-20ನೇ ಸಾಲಿನ ರಾಷ್ಟ್ರೀಯ ಜಾನುವಾರು ವಿಮಾ ಯೋಜನೆ (ಎನ್.ಎಲ್.ಎಂ) :

2019-20ನೇ ಸಾಲಿನಲ್ಲಿ ಚಾಮರಾಜನಗರ ಜಿಲ್ಲೆಯಲ್ಲಿ ರಾಷ್ಟ್ರೀಯ ಜಾನುವಾರು ವಿಮಾ ಯೋಜನೆ (ಎನ್.ಎಲ್.ಎಂ) ಯೋಜನೆಯಡಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳ ಜಾನುವಾರುಗಳಿಗೆ ಉಚಿತ ಜಾನುವಾರು ವಿಮಾ ಯೋಜನೆಯನ್ನು ಅನುಷ್ಠಾನಗೊಳಿಸುವ ಸಂಬಂಧ ರೂ. 4.61ಲಕ್ಷ ಅನುದಾನ ನಿಗದಿಪಡಿಸಲಾಗಿದ್ದು, 1102 ಜಾನುವಾರುಗಳಿಗೆ ವಿಮೆ ಮಾಡಿಸಲಾಗಿರುತ್ತದೆ.

16. ಮೀನುಗಾರಿಕೆ ಇಲಾಖೆ

ಪರಿಚಯ :-

ಮೀನು ಒಂದು ಉತ್ತಮ ಪೌಷ್ಟಿಕ ಆಹಾರವಾಗಿದ್ದು, ಆಹಾರ ಉತ್ಪಾದನೆಯಲ್ಲಿ ಹಾಗೂ ಆರ್ಥಿಕತೆಯಲ್ಲಿ ಮಹತ್ವದ ಪಾತ್ರವನ್ನು ವಹಿಸಿರುತ್ತದೆ. ಚಾಮರಾಜನಗರ ಜಿಲ್ಲೆಯು 1997 ರಲ್ಲಿ ಹೊಸದಾಗಿ ರಚನೆಯಾದ ಜಿಲ್ಲೆಯಾಗಿದ್ದು, ಇಲ್ಲಿ ಮೀನುಗಾರಿಕೆ ಸಂಪನ್ಮೂಲ ಅಭಿವೃದ್ಧಿಗೆ ವಿಪುಲ ಅವಕಾಶ ಇರುವ ಕಾರಣ ಸರ್ಕಾರಿ ಆದೇಶ ಸಂಖ್ಯೆ: ಪಸಂಮೀ/210/ಮೀಇಸೇ/ 2010, ಬೆಂಗಳೂರು ದಿನಾಂಕ: 30-06-2011 ರಂತೆ ಜಿಲ್ಲಾ ಮಟ್ಟದ ಕಛೇರಿಯನ್ನು ಪ್ರಾರಂಭಿಸಲಾಗಿದೆ. 2019-20ನೇ ಸಾಲಿನಲ್ಲಿ ಜಿಲ್ಲಾ ಪಂಚಾಯತ್ ವ್ಯಾಪ್ತಿಯ ಜಿಲ್ಲಾ ವಲಯ ಯೋಜನೆಗಳು, ರಾಜ್ಯವಲಯ ಯೋಜನೆ ಹಾಗೂ ಕೇಂದ್ರ ಪುರಸ್ಕೃತ ಯೋಜನೆಗಳನ್ನು ಜಿಲ್ಲೆಯ 4 ತಾಲೂಕು ಮಟ್ಟದ ಅಧೀನಾಧಿಕಾರಿಗಳಾದ ಮೀನುಗಾರಿಕೆ ಸಹಾಯಕ ನಿರ್ದೇಶಕರು (ಗ್ರೇಡ್-2), ಚಾಮರಾಜನಗರ, ಗುಂಡ್ಲುಪೇಟೆ, ಕೊಳ್ಳೇಗಾಲ ಹಾಗೂ ಯಳಂದೂರು ಇವರ ಸಹಕಾರದೊಂದಿಗೆ ಕಾರ್ಯಗತಗೊಳಿಸಲಾಗಿದೆ.

ವಿವಿಧ ಅಧೀನ ಕಛೇರಿಗಳ ಕಾರ್ಯನಿರ್ವಹಣೆ ಮತ್ತು ಸಾಧನೆಗಳನ್ನು ಈ ಕೆಳಗೆ ಸಂಕ್ಷಿಪ್ತವಾಗಿ ವಿವರಿಸಿದೆ.

2.ಆಡಳಿತ

2-1 :- ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು, ಚಾಮರಾಜನಗರ :-

ಮೀನುಗಾರಿಕಾ ಹಿರಿಯ ಸಹಾಯಕ ನಿರ್ದೇಶಕರು, ಚಾಮರಾಜನಗರ, ಇವರ ಕಛೇರಿಯು ಜಿಲ್ಲಾ ಆಡಳಿತ ಭವನದಲ್ಲಿರುವ ಕೊಠಡಿ ಸಂಖ್ಯೆ 221 ರಲ್ಲಿ ಜುಲೈ 2011 ರಿಂದ ಕಾರ್ಯ ನಿರ್ವಹಿಸುತ್ತಿದೆ.

ಮೀನುಗಾರಿಕಾ ಹಿರಿಯ ಸಹಾಯಕ ನಿರ್ದೇಶಕರು, ಚಾಮರಾಜನಗರ, ಇವರು ಜಿಲ್ಲಾ ಮಟ್ಟದ ಅಧಿಕಾರಿಯಾಗಿದ್ದು, ಸದರಿ ಕಛೇರಿಯು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾಪಂಚಾಯತ್, ಇವರ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಮೀನುಗಾರಿಕೆ ಸಹಾಯಕ ನಿರ್ದೇಶಕರು (ಗ್ರೇಡ್-2), ಚಾಮರಾಜನಗರ, ಗುಂಡ್ಲುಪೇಟೆ, ಕೊಳ್ಳೇಗಾಲ ಹಾಗೂ ಯಳಂದೂರು ಇವರುಗಳಿಗೆ ಮೀನುಗಾರಿಕೆ ಅಭಿವೃದ್ಧಿ ಮತ್ತು ಆಡಳಿತ ಕೆಲಸಗಳ ಬಗ್ಗೆ ಸಲಹೆ ಸೂಚನೆಗಳನ್ನು ಈ ಕಛೇರಿಯಿಂದ ನೀಡಲಾಗುತ್ತಿದೆ.

2.2:-ಮೀನುಗಾರಿಕಾ ಹಿರಿಯ ಸಹಾಯಕ ನಿರ್ದೇಶಕರು, ಚಾಮರಾಜನಗರ, ಇವರ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಿವಿಧ ಕಛೇರಿಗಳಲ್ಲಿರುವ ನೌಕರರ ವಿಂಗಡಣೆ.

(ದಿನಾಂಕ 31-03-2020 ರಲ್ಲಿದ್ದಂತೆ)

ಕ್ರ.ಸ.	ಹುದ್ದೆಗಳ ವಿವರ	ಮಂಜೂರಾತಿ	ಭರ್ತಿ	ಖಾಲಿ
1	ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು	1	1	0
2	ಮೀನುಗಾರಿಕೆ ಸಹಾಯಕ ನಿರ್ದೇಶಕರು	4	4	0
3	ಪ್ರಥಮ ದರ್ಜೆ ಸಹಾಯಕರು	2	2	0
4	ಬೆರಳಚ್ಚುಗಾರರು	1	0	1
5	ಮೀನುಗಾರಿಕೆ ಹಿರಿಯ ಮೇಲ್ವಿಚಾರಕರು	1	0	1
6	ವಾಹನ ಚಾಲಕರು	1	1	0
7	ಮೀನುಗಾರಿಕೆ ಕ್ಷೇತ್ರ ಪಾಲಕರು	7	2	5
8	ಡಿ.ಗ್ರೂಪ್	2	1	1
	ಒಟ್ಟು	**19**	**11**	**8**

3. ಅಭಿವೃದ್ಧಿ ಕಾರ್ಯಕ್ರಮಗಳು :ದಿನಾಂಕ:-31-03-2020ರ ಅಂತ್ಯಕ್ಕೆ

3-1:- ಒಳನಾಡು ಮೀನುಗಾರಿಕೆ :-

ಚಾಮರಾಜನಗರ ಜಿಲ್ಲೆಯಲ್ಲಿ 40 ಹೆಕ್ಟೇರ್‌ಗಿಂತ ಹೆಚ್ಚು ಅಚ್ಚುಕಟ್ಟು ಹೊಂದಿರುವ **92 ಕೆರೆಗಳಿದ್ದು, ಇವುಗಳ ಒಟ್ಟು** ಜಲವಿಸ್ತೀರ್ಣ 5717 ಹೆಕ್ಟೇರ್ ಆಗಿರುತ್ತದೆ. ಹಾಗೂ 3 ಜಲಾಶಯಗಳಿದ್ದು, ಇವುಗಳು ಒಟ್ಟು 885 ಹೆಕ್ಟೇರ್ ಜಲವಿಸ್ತೀರ್ಣ ಹೊಂದಿರುತ್ತದೆ. ಜಿಲ್ಲೆಯಲ್ಲಿ 76.10 ಕಿ.ಮೀ ಉದ್ದದ ಕಾವೇರಿ ನದಿಯ ಭಾಗವು ಹರಿಯುತ್ತಿದ್ದು, ಅದನ್ನು ಆಡಳಿತಾತ್ಮಕ ಕಾರಣಗಳಿಗಾಗಿ 5 ಭಾಗವನ್ನಾಗಿ ವಿಭಾಗಿಸಿಕೊಳ್ಳಲಾಗಿದೆ. ಸರ್ಕಾರದ ಆದೇಶದ ಸಂಖ್ಯೆ: ಪಸಂಮೀ/125/ಮೀಇಇ/ 2013 ಬೆಂಗಳೂರು ದಿನಾಂಕ: 21/02/2014ರ ಮಾರ್ಗಸೂಚಿಯಂತೆ 40 ಹೆಕ್ಟೇರ್‌ಗಿಂತ ಹೆಚ್ಚು ಅಚ್ಚುಕಟ್ಟು ಹೊಂದಿರುವ ಕೆರೆಗಳ ಮೀನು ಪಾಶುವಾರು ಹಕ್ಕನ್ನು ವಿಲೇ ಮಾಡಲಾಗುತ್ತಿದೆ. 2019-20ನೇ ಸಾಲಿನಲ್ಲಿ 21 ಕೆರೆ, 3 ಜಲಾಶಯ ಮತ್ತು 1 ನದಿಭಾಗದ ಮೀನುಪಾಶುವಾರು ಹಕ್ಕನ್ನು ಮೀನುಗಾರಿಕೆ ಸಹಕಾರ ಸಂಘಗಳಿಗೆ ಗುತ್ತಿಗೆಗೆ ನೀಡಲಾಗಿದೆ. 55 ಕೆರೆಗಳ ಮೀನು ಪಾಶುವಾರು ಹಕ್ಕನ್ನು ಟೆಂಡರ್ ಕಂ ಹರಾಜಿನ ಮೂಲಕ ವಿಲೇ ಮಾಡಲಾಗಿದೆ. 2 ನದಿಭಾಗಗಲನ್ನು ಪರವಾನಗಿ ನೀಡಲಾಗದೆ. 40 ಹೆಕ್ಟೇರ್‌ಗಿಂತ ಹೆಚ್ಚು ಅಚ್ಚುಕಟ್ಟು ಹೊಂದಿರುವ ವಿಲೇವಾರಿಯಾದ 76 ಕೆರೆ, 3 ಜಲಾಶಯ ಮತ್ತು 1 ನದಿಭಾಗಗಳಿಗೆ 2019-20ನೇ ಸಾಲಿನಲ್ಲಿ ಒಟ್ಟು 67.81 ಲಕ್ಷ ಮೀನುಮರಿ ಬಿತ್ತನೆ ಮಾಡಲಾಗಿದೆ.

3-2:- ಮೀನುಗಾರರ ಸಹಕಾರ ಸಂಘಗಳು :-

ಚಾಮರಾಜನಗರ ಜಿಲ್ಲೆಯಲ್ಲಿ ಚಾಮರಾಜನಗರ ಹಾಗೂ ಯಳಂದೂರು ತಾಲೂಕಿನಲ್ಲಿ ತಲಾ 5, ಗುಂಡ್ಲುಪೇಟೆ ತಾಲೂಕಿನಲ್ಲಿ 3 ಹಾಗೂ ಕೊಳ್ಳೇಗಾಲ ತಾಲೂಕಿನಲ್ಲಿ 11 ಹೀಗೆ ಒಟ್ಟು 24 ಮೀನುಗಾರರ ಸಹಕಾರ ಸಂಘಗಳಿದ್ದು, 2019-20ನೇ ಸಾಲಿನಲ್ಲಿ ಒಟ್ಟು 22 ಮೀನುಗಾರರ ಸಹಕಾರ ಸಂಘಗಳು ಕಾರ್ಯಾಚರಿಸುತ್ತಿವೆ. ಯಳಂದೂರು ಹಾಗೂ ಗುಂಡ್ಲುಪೇಟೆ ತಾಲ್ಲೂಕುಗಳಲ್ಲಿ ತಲಾ ಒಂದು ಮಹಿಳಾ ಮೀನುಗಾರರ ಸಹಕಾರ ಸಂಘಗಳು ಇರುತ್ತದೆ. ಚಾಮರಾಜನಗರ ಹಾಗೂ ಕೊಳ್ಳೇಗಾಲ ತಾಲ್ಲೂಕುಗಳಲ್ಲಿ ತಲಾ ಒಂದು ಪ.ಜಾ/ಪ.ಪಂ ಮೀನುಗಾರರ ಸಹಕಾರ ಸಂಘಗಳ ಇರುತ್ತದೆ. ಜಿಲ್ಲೆಯ ಪ್ರಾಥಮಿಕ ಮೀನುಗಾರರ ಸಹಕಾರ ಸಂಘಗಳಲ್ಲಿ ಸುಮಾರು 6320 ಸದಸ್ಯರಿರುತ್ತಾರೆ.

3.3:- ಆದಾಯ ಮತ್ತು ವೆಚ್ಚದ ವಿವರ.

2019-20ನೇ ಸಾಲಿನಲ್ಲಿ ಇಲಾಖಾ ಲೆಕ್ಕ ಶೀರ್ಷಿಕೆಯಡಿ ಗಳಿಸಿದ ಆದಾಯ ಹಾಗೂ ಯೋಜನೇತರ (ಜಿಲ್ಲಾ ವಲಯ) ವೆಚ್ಚಕ್ಕೆ ಸಂಬಂಧಿಸಿದ ವಿವರಗಳ ತಃಖ್ತೆಯನ್ನು ಅನುಬಂಧ (1) ಮತ್ತು ಅನುಬಂಧ (2) ರಲ್ಲಿ ನೀಡಿದೆ.

4. ರಾಜ್ಯ ವಲಯ ಯೋಜನೆಗಳು:-

4.1:- ಮೀನು ಮರಿ ಖರೀದಿಗೆ ಸಹಾಯಧನ:- ಈ ಯೋಜನೆಯಡಿ ರಾಜ್ಯದ ಕೆರೆಗಳನ್ನು ಗುತ್ತಿಗೆ ಅಥವಾ ಟೆಂಡರ್ ಮತ್ತು ಹರಾಜಿನಲ್ಲಿ ಪಡೆದು ಇಲಾಖೆಯ ಅಥವಾ ಇಲಾಖೆಯಿಂದ ಅನುಮೋದನೆ ಪಡೆದ ಮೀನುಮರಿ ಕೇಂದ್ರಗಳಿಂದ ಮಾತ್ರ ಖರೀದಿಸಿ ದಾಸ್ತಾನು ಮಾಡಿದ ಪ್ರತಿ ಹೆಕ್ಟೇರ್‌ಗೆ 2,000 ಬಿತ್ತನೆ ಮೀನುಮರಿಗಳ ಮೌಲ್ಯದ ಶೇ. 50 ರಷ್ಟು ಪ್ರತಿ ಫಲಾನುಭವಿಗೆ ಗರಿಷ್ಟ ರೂ.5,000/- ಹಾಗೂ ನೋಂದಾಯಿತ ಸಂಘ ಸಂಸ್ಥೆಯಾಗಿದ್ದಲ್ಲಿ ಗರಿಷ್ಟ ರೂ.20,000/- ಮಿತಿಗೊಳಿಸಿ ಸಹಾಯಧನ ನೀಡಲಾಗುವುದು. 2019-20ನೇ ಸಾಲಿಗೆ ಸದರಿ ಯೋಜನೆಗೆ ರೂ. 2.03 ಆರ್ಥಿಕ ಗುರಿ ಮತ್ತು 31 ಭೌತಿಕ ಗುರಿಯನ್ನು ನಿಗಧಿಪಡಿಸಲಾಗಿದ್ದು, ರೂ. 2.03 ಲಕ್ಷ ಸಹಾಯಧನವನ್ನು ನೀಡಲಾಗಿದೆ.

4.2:–ಮೀನುಗಾರಿಕೆ ಸಲಕರಣೆ ಕಿಟ್ಟುಗಳ ವಿತರಣೆ:–

ರಾಜ್ಯದ ಒಳನಾಡು ಪ್ರದೇಶಗಳ ನದಿ / ಜಲಾಶಯಗಳಲ್ಲಿ ಮೀನುಗಾರಿಕೆ ಮಾಡುವ ಸಾಂಪ್ರದಾಯಿಕ ಮೀನುಗಾರರಿಗೆ ಮೀನುಗಳನ್ನು ಹಿಡಿಯಲು ಅಗತ್ಯವಾದ ಬಲೆ, ಕ್ರೇಟ್, ತಕ್ಕಡಿ ಮತ್ತು ಇತರೆ ಪೂರಕ ಸಾಮಗ್ರಿಗಳು ಅಗತ್ಯವಾಗಿದ್ದು, ಈ ಯೋಜನೆಯಡಿ ರೂ. 10,000/– ಮೌಲ್ಯದ ಸಲಕರಣೆಗಳನ್ನು ಕಿಟ್ ರೂಪದಲ್ಲಿ ಮೀನುಗಾರರಿಗೆ ಉಚಿತವಾಗಿ ವಿತರಿಸಲಾಗುವುದು.

ಪ್ರಸ್ತುತ ವರ್ಷದಲ್ಲಿ ಚಾಮರಾಜನಗರ ಜಿಲ್ಲೆಗೆ ಒಟ್ಟು 5.00 ಆರ್ಥಿಕ ಗುರಿ ಮತ್ತು 50 ಭೌತಿಕ ಗುರಿಯನ್ನು ನಿಗಧಿಪಡಿಸಲಾಗಿದ್ದು, ಜಿಲ್ಲೆಯಲ್ಲಿ ಒಟ್ಟು 50 ಜನ ಮೀನುಗಾರರಿಗೆ ನಿರ್ದೇಶನಾಲಯದಿಂದ ಇ–ಟೆಂಡರ್ ಮೂಲಕ ಅನುಮೋದನೆಗೊಂಡ ಸಂಸ್ಥೆಯಿಂದ ಬಲೆ, ಕ್ರೇಟ್ಸ್ ಮತ್ತಿತರ ಮೀನುಗಾರಿಕೆ ಸಲಕರಣೆಗಳ ಕಿಟ್‌ಗಳನ್ನು ಖರೀದಿಸಿ ಉಚಿತವಾಗಿ ವಿತರಿಸಲಾಗಿದೆ.

4.3:– ಮತ್ಸ್ಯಕೃಷಿ ಆಶಾಕಿರಣ:

ಮೀನುಪಾಶುವಾರು ಹಕ್ಕನ್ನು ಗುತ್ತಿಗೆ ಪಡೆದ ಮೀನುಕೃಷಿಕರು ಅರೆ ತೀವ್ರಕೃಷಿ ಕೈಗೊಳ್ಳಲು ಉತ್ತೇಜಿಸುವ ಉದ್ದೇಶದಿಂದ ಕೆರೆಗಳಲ್ಲಿ ಅರೆ ತೀವ್ರ ಮೀನುಕೃಷಿಗೆ ಪ್ರೇತ್ಸಾಹ ನೀಡಲು ಈ ಕಾರ್ಯಕ್ರಮವನ್ನು ಪ್ರಾರಂಬಿಸಲಾಗಿದೆ. ಹಾಗೂ ಸದರಿ ಯೋಜನೆಯಡಿ ಪ್ರತಿ ಹೆಕ್ಟೇರ್ ಉಪಯುಕ್ತ ಜಲ ವಿಸ್ತೀರ್ಣಕ್ಕೆ 4000 ಬಲಿತ ಮೀನುಮರಿ ಬಿತ್ತನೆ ಹಾಗೂ ಕೃತಕ ಆಹಾರ (2 ಟನ್‌ಗಳು) ಖರೀದಿಸಲು ಘಟಕ ವೆಚ್ಚದ ಶೇ.50 ರಷ್ಟು ಗರಿಷ್ಠ ರೂ. 27,000 ಪ್ರತಿ ಹೆಕ್ಟೇರ್‌ಗೆ ನೀಡಲಾಗುವುದು.

ಪ್ರಸ್ತುತ ವರ್ಷದಲ್ಲಿ ಚಾಮರಾಜನಗರ ಜಿಲ್ಲೆಗೆ ಒಟ್ಟು 11.65 ಲಕ್ಷ ಅನುದಾನವನ್ನು ನೀಡಲಾಗಿದೆ. ಮೀನುಮರಿ ಬಿತ್ತನೆ ಹಾಗೂ ಕೃತಕ ಆಹಾರ ಖರೀದಿಸಲು ಚಾಮರಾಜನಗರ ತಾಲ್ಲೂಕಿನ 1 ಫಲಾನುಭವಿಗೆ 4.32 ಲಕ್ಷ, ಗುಂಡ್ಲುಪೇಟೆ ತಾಲ್ಲೂಕಿನ 2 ಫಲಾನುಭವಿಗಳಿಗೆ 7.33 ಲಕ್ಷ ಒಟ್ಟು ಸದ್ರಿಯವರಿಗೆ 11.65 ಲಕ್ಷ ಸಹಾಯಧನ ನೀಡಲಾಗಿದೆ.

5. ಕೇಂದ್ರ ಪುರಸ್ಕೃತ ಯೋಜನೆಗಳು

5.1. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ:

ಮೀನುಗಾರರಿಗೆ ಸಲಕರಣೆ ಕಿಟ್ಟು ಮತ್ತು ಫೈಬರ್ ಗ್ಲಾಸ್ ಹರಿಗೋಲುಗಳನ್ನು ವಿತರಿಸುವ ಯೋಜನೆ.:–

ಈ ಯೋಜನೆಯಡಿ ರಾಜ್ಯದಲ್ಲಿ ಒಳನಾಡು ಪ್ರದೇಶಗಳ ನದಿ / ಜಲಾಶಯಗಳಲ್ಲಿ ಮೀನುಗಾರಿಕೆ ಮಾಡುವ ಪರಿಶಿಷ್ಟ ಜಾತಿ/ಪಂಗಡದ ಮೀನುಗಾರರಿಗೆ ಅನುಕೂಲವಾಗಲೆಂದು ಫೈಬರ್‌ಗ್ಲಾಸ್ ಹರಿಗೋಲುಗಳನ್ನು ಹಾಗೂ ಮೀನುಗಳನ್ನು ಹಿಡಿಯಲು ಅಗತ್ಯವಾದ ಬಲೆ, ಕ್ರೇಟ್, ತಕ್ಕಡಿ ಮತ್ತು ಇತರೆ ಪೂರಕ ಸಾಮಗ್ರಿಗಳು ಅಗತ್ಯವಾಗಿದ್ದು, ಈ ಯೋಜನೆಯಡಿ ರೂ. 10,000/– ಮೌಲ್ಯದ ಸಲಕರಣೆ ಕಿಟ್/ಫೈಬರ್‌ಗ್ಲಾಸ್ ಹರಿಗೋಲುಗಳನ್ನು ಮೀನುಗಾರರಿಗೆ ಉಚಿತವಾಗಿ ವಿತರಿಸಲಾಗುವುದು.

ಪ್ರಸ್ತುತ ವರ್ಷದಲ್ಲಿ ಚಾಮರಾಜನಗರ ಜಿಲ್ಲೆಗೆ ನೀಡಲಾದ ರೂ. 3.00 ಲಕ್ಷ ಅನುದಾನದಲ್ಲಿ ಪರಿಶಿಷ್ಟ ಜಾತಿ ಫಲಾನುಭವಿಗಳಿಗೆ ರೂ. 1.50/– ಲಕ್ಷ ಹಾಗೂ ಪರಿಶಿಷ್ಟ ಪಂಗಡ ಫಲಾನುಭವಿಗಳಿಗೆ ರೂ. 1.50/– ಲಕ್ಷ ಸಹಾಯಧನ ನೀಡಲಾಗಿದೆ. ಜಿಲ್ಲೆಯಲ್ಲಿ ಒಟ್ಟು 30 ಮೀನುಗಾರರಿಗೆ ಹರಿಗೋಲು ಮತ್ತು ಕಿಟ್ಸ್‌ಗಳನ್ನು ಖರೀದಿಸಿ ಉಚಿತವಾಗಿ ವಿತರಿಸಲಾಗಿದೆ.

5.2:– ನೀಲಿಕ್ರಾಂತಿ ಯೋಜನೆ:–

ಈ ಯೋಜನೆಯು ಕೇಂದ್ರ ಪುರಷ್ಕೃತ ಯೋಜನೆಯಾಗಿದ್ದು, ಸದರಿ ಯೋಜನೆಯಡಿ ಮೀನುಗಾರರಿಗೆ ಅನುಕೂಲವಾಗಲೆಂದು ಮೀನುಕೃಷಿ ಕೊಳ ನಿರ್ಮಾಣಕ್ಕೆ 1 ಹೆಕ್ಟೇರ್‌ಗೆ ಘಟಕ ವೆಚ್ಚ ರೂ. 7.00 ಲಕ್ಷ ಆಗಿರುತ್ತದೆ.

ಪ.ಜಾ ಮತ್ತು ಪ.ಪಂ ಫಲಾನುಭವಿಗಳು ಹಾಗೂ ಸಾಮಾನ್ಯ ವರ್ಗದ ಮಹಿಳೆಯರಿಗೆ ಘಟಕ ವೆಚ್ಚದ ಶೇ. 60 ರಷ್ಟು ಗರಿಷ್ಟ ರೂ. 4.20 ಲಕ್ಷ ಹಾಗೂ ಸಾಮಾನ್ಯ ವರ್ಗದ ಫಲಾನುಭವಿಗಳಿಗೆ ಘಟಕ ವೆಚ್ಚದ ಶೇ. 40 ರಷ್ಟು ಗರಿಷ್ಟ ರೂ. 2.80 ಲಕ್ಷ ಸಹಾಯಧನ ನೀಡಲಾಗುವುದು. ಮತ್ತು ಮೀನು ಮಾರಾಟಕ್ಕಾಗಿ ದ್ವಿಚಕ್ರವಾಹನ ಖರೀದಿಗೆ ಮತ್ತು ಐಸ್ ಬಾಕ್ಸ್ ಖರೀದಿಗೆ ರೂ. 0.30 ಲಕ್ಷ ಸಹಾಯಧನ ನೀಡಲಾಗಿದೆ.

ಪ್ರಸ್ತುತ ವರ್ಷದಲ್ಲಿ ಮೀನುಕೃಷಿ ಕೊಳ ನಿರ್ಮಾಣಕ್ಕಾಗಿ ರೂ. 5.92 ಲಕ್ಷ ಅನುದಾನವನ್ನು ನೀಡಲಾಗಿದೆ. ಚಾಮರಾಜನಗರ ತಾಲ್ಲೂಕಿನ 2 ಫಲಾನುಭವಿಗಳಿಗೆ ಮೀನುಕೃಷಿ ಕೊಳ ನಿರ್ಮಾಣಕ್ಕಾಗಿ ರೂ.5.57 ಲಕ್ಷ ಸಹಾಯಧನ ನೀಡಲಾಗಿದೆ.

ಮತ್ತು ಗುಂಡ್ಲುಪೇಟೆ ತಾಲ್ಲೂಕಿನ 2 ಫಲಾನುಭವಿಗಳಿಗೆ ಮೀನು ಮಾರಾಟಕ್ಕಾಗಿ ದ್ವಿಚಕ್ರವಾಹನ ಖರೀದಿಗೆ ರೂ. 0.35 ಲಕ್ಷ ಸಹಾಯಧನ ನೀಡಲಾಗಿದೆ.

6. ಜಿಲ್ಲಾ ವಲಯ ಯೋಜನೆಗಳು

6-1:- ನಿರ್ದೇಶನ ಮತ್ತು ಆಡಳಿತ ಕಟ್ಟಡಗಳು:-

ಪ್ರಸ್ತುತ ವರ್ಷದಲ್ಲಿ ಈ ಯೋಜನೆಯಡಿ ನೀಡಲಾದ ರೂ. 10.00 ಲಕ್ಷ ಅನುದಾನದಲ್ಲಿ ಗುಂಡ್ಲುಪೇಟೆ ಮೀನುಮರಿ ಪಾಲನಾ ಕೇಂದ್ರದ ನೀರು ಸೋರುತ್ತಿರುವ ಸಿಮೆಂಟ್ ಕೊಳಗಳನ್ನು ರಿಪೇರಿ, ಪಂಪ್‌ಲೈನ್ ದುರಸ್ತಿ, ಚರಂಡಿ ನಿರ್ಮಾಣ, ಹೊಸದಾಗಿ ಬೋರ್‌ವೆಲ್ ನಿರ್ಮಾಣ, ಕಟ್ಟಡ ದುರಸ್ತಿ ಹಾಗೂ ಇತರೆ ಕಾಮಗಾರಿಗಳನ್ನು ಕೈಗೊಂಡು ಸದರಿ ಅನುದಾನವನ್ನು ವೆಚ್ಚ ಮಾಡಲಾಗಿದೆ.

6.2:- ಒಳನಾಡು ಮೀನುಗಾರಿಕೆ ಅಭಿವೃದ್ಧಿಗೆ ಸಹಾಯ:-

ಒಳನಾಡು ಮೀನುಗಾರಿಕೆ ಅಭಿವೃದ್ಧಿಗಾಗಿ, ಮೀನುಮರಿ ಪಾಲನಾ ಕೇಂದ್ರಗಳಲ್ಲಿ ಮತ್ತು ತಾಲ್ಲೂಕು ನರ್ಸರಿಗಳಲ್ಲಿ ಮೀನುಮರಿ ಪಾಲನೆ ಮಾಡಿ, ಬಿತ್ತನೆ ಮೀನುಮರಿಗಳನ್ನು ಮೀನು ಕೃಷಿಕರಿಗೆ ಸರಬರಾಜು ಮಾಡುವುದರ ಮೂಲಕ, ಒಳನಾಡಿನಲ್ಲಿರುವ ಜಲಸಂಪನ್ಮೂಲಗಳಾದ ಕೆರೆ, ನದಿ, ಕೊಳ, ಜಲಾಶಯಗಳಲ್ಲಿ ಉತ್ತಮ ತಳಿಯ ಮೀನುಮರಿಗಳನ್ನು ಬಿತ್ತನೆ ಮಾಡಿ ಮೀನು ಉತ್ಪಾದನೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಈ ಯೋಜನೆಯಡಿ ಅನುದಾನ ನೀಡಲಾಗಿದೆ.

2019-20 ನೇ ಸಾಲಿನಲ್ಲಿ ಈ ಯೋಜನೆಯಡಿ ಚಾಮರಾಜನಗರ ಜಿಲ್ಲೆಗೆ ನೀಡಲಾದ ರೂ. 14.00 ಲಕ್ಷ ಅನುದಾನದಲ್ಲಿ ಬಿತ್ತನೆ ಮೀನುಮರಿಗಳ ಖರೀದಿ, ದೊಡ್ಡ ಕೆರೆಗಳ ಟೆಂಡರ್ ಕಂ ಹರಾಜು ಮಾಡುವ ಬಗ್ಗೆ ಪತ್ರಿಕಾ ಪ್ರಕಟಣೆ ಹೊರಡಿಸುವುದು, ಹರಾಜು ಇಸ್ತೀಯಾರ್ ಮುದ್ರಣ, ಪಾಲಿಥೀನ್ ಚೀಲಗಳ ಖರೀದಿ, ಪ್ಲಾಸ್ಟಿಕ್ ಕ್ರೇಟ್ಸ್, ಸಲಕರಣೆಗಳ ಖರೀದಿ, ಮೀನುಮರಿ ಆಹಾರ, ಗೊಬ್ಬರ, ವಿದ್ಯುತ್ ವೆಚ್ಚ, ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರ ಕಛೇರಿಯ ಸರ್ಕಾರಿ ವಾಹನದ ಇಂಧನ, ಸಾದಿಲ್ವಾರು ವೆಚ್ಚ, ಹಾಗೂ ಕಛೇರಿ ದೂರವಾಣಿ ವೆಚ್ಚ, ಹಾಗೂ ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ-2), ಗುಂಡ್ಲುಪೇಟೆ ಮೀನುಮರಿ ಪಾಲನಾ ಕೇಂದ್ರದ ಸುತ್ತ ಸುತ್ತುಗೋಡೆ ನಿರ್ಮಾಣದ ಕಾಮಗಾರಿಯ ವೆಚ್ಚ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ಹೊರಗುತ್ತಿಗೆ ಮೂಲಕ ವಾಹನ ಬಾಡಿಗೆ ಪಾವತಿ ಇತ್ಯಾದಿಗಳನ್ನು ಭರಿಸಲು ದಿನಾಂಕ: 31-03-2020 ರವರೆಗೆ ರೂ. 13.97 ಲಕ್ಷ ವೆಚ್ಚ ಮಾಡಲಾಗಿದೆ ಅಲ್ಲದೆ, ಈ ಯೋಜನೆಯಡಿ ಪರಿಶಿಷ್ಟ ಜಾತಿ ಕಲ್ಯಾಣಕ್ಕಾಗಿ ರೂ. 1.00 ಲಕ್ಷ ಅನುದಾನ ನೀಡಲಾಗಿದೆ. ಇದರಲ್ಲಿ ಪರಿಶಿಷ್ಟ ಜಾತಿಯ ಗುಂಡ್ಲುಪೇಟೆ ತಾ. 1 ಫಲಾನುಭವಿಗೆ 1/2 ಎಕರೆ ಮೀನು ಕೃಷಿ ಕೊಳ ನಿರ್ಮಾಣಕ್ಕೆ ರೂ, 1.00 ಲಕ್ಷ ಸಹಾಯಧನ ನೀಡಲಾಗಿದೆ.

ಪರಿಶಿಷ್ಟ ಪಂಗಡಗಳ ಕಲ್ಯಾಣಕ್ಕಾಗಿ ರೂ. 1.00 ಲಕ್ಷ ಅನುದಾನ ನೀಡಲಾಗಿದೆ. ಇದರಲ್ಲಿ ಪರಿಶಿಷ್ಟ ಪಂಗಡದ ಗುಂಡ್ಲುಪೇಟೆ ತಾ. 1 ಫಲಾನುಭವಿಗೆ 1/2 ಎಕರೆ ಮೀನು ಕೃಷಿ ಕೊಳ ನಿರ್ಮಾಣಕ್ಕೆ ರೂ, 1.00 ಲಕ್ಷ ಸಹಾಯಧನ ನೀಡಲಾಗಿದೆ.

6.3:– ಮೀನು ಮಾರಾಟಕ್ಕಾಗಿ ಸಹಾಯಧನ ಮತ್ತು ಮತ್ಸ್ಯವಾಹಿನಿ ಯೋಜನೆ:–

ಈ ಯೋಜನೆಯಡಿಯಲ್ಲಿ ತಾಜಾ ಮೀನನ್ನು ದೂರದ ಪ್ರದೇಶಗಳಿಗೆ ಮಾರಾಟಕ್ಕಾಗಿ ಉತ್ತಮ ಸ್ಥಿತಿಯಲ್ಲಿ ಸಾಗಿಸಲು ಅನುಕೂಲವಾಗುವಂತೆ ದ್ವಿಚಕ್ರ ವಾಹನ ಖರೀದಿಗೆ ಘಟಕ್ಕ ವೆಚ್ಚ ರೂ. 40,000/– ಎಂದು ನಿಗದಿಯಾಗಿದ್ದು, ಇದರ ಶೇ. 25 ರಷ್ಟು ಅಂದರೆ ಗರಿಷ್ಟ ರೂ.10,000/–ಗಳನ್ನು ಸಹಾಯಧನವನ್ನಾಗಿ ನೀಡಲಾಗುವುದು. ಪ್ರಸ್ತುತ ವರ್ಷದಲ್ಲಿ ರೂ. 3..60 ಲಕ್ಷ ಆರ್ಥಿಕ ಗುರಿ ನಿಗಧಿಯಾಗಿರುತ್ತದೆ. ದ್ವಿಚಕ್ರ ವಾಹನವನ್ನು ಪ್ಲಾಸ್ಟಿಕ್ ಕ್ರೇಟ್ಸ್ ಖರೀದಿಸಿದ ಚಾಮರಾಜನಗರ ಜಿಲ್ಲೆಯ ಒಟ್ಟು 36 ಫಲಾನುಭವಿಗಳಿಗೆ ರೂ. 3.60 ಲಕ್ಷ ಅನುದಾನವನ್ನು ಸಹಾಯಧನವನ್ನಾಗಿ ನೀಡಲಾಗಿದೆ.

6.4:– ವಸ್ತು ಪ್ರದರ್ಶನ ಮತ್ತು ತರಬೇತಿ:–

ಈ ಕಾರ್ಯಕ್ರಮದಡಿಯಲ್ಲಿ ಒಳನಾಡು ಮೀನುಗಾರಿಕೆ ಅಭಿವೃದ್ಧಿಗೆ ಸಂಬಂಧಿಸಿದಂತೆ ಮೀನುಗಾರರಿಗೆ ಹಾಗೂ ಮೀನು ಕೃಷಿಕರಿಗೆ ತರಬೇತಿ / ಕಾರ್ಯಾಗಾರವನ್ನು ಏರ್ಪಡಿಸುವುದು ಮತ್ತು ಇಲಾಖಾ ಚಟುವಟಿಕೆಗಳ ಬಗ್ಗೆ ಸಾರ್ವಜನಿಕರಿಗೆ ಮಾಹಿತಿಗಾಗಿ ವಸ್ತು ಪ್ರದರ್ಶನವನ್ನು ಏರ್ಪಡಿಸುವುದು ಇತ್ಯಾದಿ ಸೇರಿರುತ್ತದೆ. ಚಾಮರಾಜನಗರ ಜಿಲ್ಲೆಗೆ ನಿಗದಿ ಪಡಿಸಲಾದ ರೂ. 1.50 ಲಕ್ಷ ನಿಗಧಿಯಾಗಿರುತ್ತದೆ. ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ–2) ಚಾಮರಾಜನಗರ/ಯಳಂದೂರು/ಗುಂಡ್ಲುಪೇಟೆ ತಾಲ್ಲೂಕುಗಳ ಹೋಬಳಿವಾರು ನಡೆದ ಕೃಷಿ ಅಭಿಯಾನ ಕಾರ್ಯಕ್ರಮಕ್ಕೆ, ಫಲಪುಷ್ಪ ಪ್ರದರ್ಶನದ ಕಾರ್ಯಕ್ರಮಕ್ಕೆ ಹಾಗೂ ಗ್ರಾಮೀಣ ದಸರಾ ಕಾರ್ಯಕ್ರಮಕ್ಕೆ ಇಲಾಖಾ ವತಿಯಿಂದ ವಸ್ತು ಪ್ರದರ್ಶನ ಆಯೋಜಿಸಲು ಹಾಗೂ ಯಳಂದೂರು ಕಛೇರಿಯ ಅಕ್ವೇರಿಯಂಗೆ ಅಲಂಕಾರಿಕ ಮೀನು ಹಾಗೂ ಇತರೆ ಸಲಕರಣೆಗಳನ್ನು ಖರೀದಿಸಿದ ಒಟ್ಟು ರೂ. 1.48 ಲಕ್ಷ ವೆಚ್ಚ ಮಾಡಲಾಗಿದೆ.

ಜಿಲ್ಲಾ ವಲಯ ಯೋಜನೆಗಳಲ್ಲಿ ಬಿಡುಗಡೆ ಮಾಡಲಾದ ಅನುದಾನ ಮತ್ತು ವೆಚ್ಚದ ವಿವರವನ್ನು ವಿವರವನ್ನು ಅನುಬಂಧ (2) ರಲ್ಲಿ ನೀಡಲಾಗಿದೆ.

–: ಅಂಕಿ ಅಂಶದ ವಿವರಗಳು :–

ಅನುಬಂಧ–1	2019–20ನೇ ಸಾಲಿನಲ್ಲಿ ಗಳಿಸಿದ ಆದಾಯದ ವಿವರ.
ಅನುಬಂಧ–2	201–20ನೇ ಸಾಲಿನಲ್ಲಿ ಯೋಜನೇತರ(ಜಿಲ್ಲಾ ವಲಯ) ವೆಚ್ಚಕ್ಕೆ ಸಂಬಂಧಿಸಿದ ವಿವರಗಳ ತಃಖ್ತೆ.
ಅನುಬಂಧ–3	2019–20ನೇ ಸಾಲಿನಲ್ಲಿ ರಾಜ್ಯ ವಲಯ ಯೋಜನೆಗಳಲ್ಲಿ ಸಾಧಿಸಿದ ಪ್ರಗತಿಯ ವಿವರ.

2019–20ನೇ ಸಾಲಿನಲ್ಲಿ ದಿನಾಂಕ: 31.03.2020 ರವರೆಗೆ ಸಾಧಿಸಲಾದ ಆದಾಯದ ವಿವರ.

ಆದಾಯ	16,86,455–00
ಇತರೆ ಶುಲ್ಕ	63,827–00
ಒಟ್ಟು ರೆವಿನ್ಯೂ	17,50.282–00

2019-20 ನೇ ಸಾಲಿನ ಜಿಲ್ಲಾ ಯೋಜನಾ ಕಾರ್ಯಕ್ರಮಗಳ ಪ್ರಗತಿ ವರದಿ (ಎಂ.ಎಂ.ಆರ್).

ಕ್ರ. ಸಂ.	ಯೋಜನೆ-ಲೆಕ್ಕ ಶೀರ್ಷಿಕೆ	ವಾರ್ಷಿಕ ಗುರಿ		ಸಾಧನೆ		ಷರಾ
		ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	
1	ಸಿಬ್ಬಂದಿ ವೇತನ (2405-00-101-0-26-001)	54.72	12	54.72	12	
	ವೇತನೇತರ (2405-00-101-0-26-090)	3.67	0	3.67	0	
	ಹೊರಗುತ್ತಿಗೆ (2405-00-101-0-27-034)	8.88	4	8.88	4	
	ಒಟ್ಟು	**67.27**	**16**	**67.27**	**16**	
2	ಮೀನುಗಾರಿಕೆ ಕಟ್ಟಡಗಳು ಮತ್ತು ಸೌಲಭ್ಯಗಳ ನಿರ್ಮಾಣ ಮತ್ತು ನಿರ್ವಹಣೆ (2405-00-101-0-27-140)	**10.00**	4	**10.00**	4	-
3	ಒಳನಾಡು ಮೀನುಗಾರಿಕೆ ಅಭಿವೃದ್ಧಿಗಾಗಿ ಸಹಾಯ (2405-00-101-0-28-090)	14.00	0	14.00	0	-
	ವಿಶೇಷ ಘಟಕ ಯೋಜನೆ - 422	1.00	1	1.00	1	
	ಗಿರಿಜನ ಉಪಯೋಜನೆ - 423	1.00	1	1.00	1	
	ಒಟ್ಟು	16.00	2	16.00	2	
4	ಮೀನುಮಾರುಕಟ್ಟೆಗಳ ನಿರ್ಮಾಣ ಮತ್ತು ಮೀನು ಮಾರಾಟಕ್ಕೆ ಸಹಾಯ (2405-00-101-0-30-100)	3.60	36	3.60	36	-
5	ವಸ್ತುಪ್ರದರ್ಶನಗಳು ಮತ್ತು ತರಬೇತಿ (2405-00-101-0-32-090)	1.50	4	1.48	4	-
	ಒಟ್ಟು	**98.37**	**62**	**93.75**	**62**	

17. ಸಾಮಾಜಿಕ ಅರಣ್ಯ ಇಲಾಖೆ, ಚಾಮರಾಜನಗರ

ಚಾಮರಾಜನಗರ ಜಿಲ್ಲೆಯ ರೂಪುರೇಷೆ:

ಕರ್ನಾಟಕ ರಾಜ್ಯದ ದಕ್ಷಿಣ ಭಾಗದಲ್ಲಿರುವ ಚಾಮರಾಜನಗರ ಜಿಲ್ಲೆಯು 5676 ಚ.ಕಿ.ಮೀ. ಪ್ರದೇಶವನ್ನೊಳಗೊಂಡಿರುತ್ತದೆ. ಜಿಲ್ಲೆಯ ಮೈದಾನ ಪ್ರದೇಶದಲ್ಲಿ ಸಾಮಾನ್ಯವಾಗಿ ವಾರ್ಷಿಕ 550 ರಿಂದ 600 ಮಿ.ಮೀ. ಸರಾಸರಿ ಮಳೆಯಾಗುತ್ತದೆ. ರಾಜ್ಯದ ಕೃಷಿ ಹವಾಮಾನ ವಲಯದೊಳಗೆ ಇದ್ದು, ದಕ್ಷಿಣ ಒಣ ವಲಯವಾಗಿರುತ್ತದೆ. ಈ ಜಿಲ್ಲೆಯಲ್ಲಿ 5 ತಾಲ್ಲೂಕುಗಳು, 16 ಹೋಬಳಿಗಳು, 132 ಗ್ರಾಮ ಪಂಚಾಯಿತಿಗಳು ಮತ್ತು 5 ಪಟ್ಟಣಗಳನ್ನು ಒಳಗೊಂಡಿರುತ್ತದೆ. ಒಟ್ಟು 10.20 ಲಕ್ಷ ಜನಸಂಖ್ಯೆಯನ್ನು ಒಳಗೊಂಡಿರುತ್ತದೆ. ಜನಸಂಖ್ಯೆಯ ಸಾಂದ್ರತೆಯಲ್ಲಿ ಚದರ ಕಿಲೋಮೀಟರ್ ಒಂದಕ್ಕೆ 180 ಮಂದಿ ಇರುತ್ತಾರೆ. ಜಿಲ್ಲೆಯ ಭೌಗೋಳಿಕ ಪ್ರದೇಶದಲ್ಲಿ ಶೇಕಡಾ 33 ರಷ್ಟು ವ್ಯವಸಾಯ ಮತ್ತು ಶೇ. 49.5 ರಷ್ಟು ವನ್ಯಜೀವಿ ಮತ್ತು ರಕ್ಷಿತ ಅರಣ್ಯ ಪ್ರದೇಶವು ಒಳಗೊಂಡಿರುತ್ತದೆ.

ಜಿಲ್ಲೆಯಲ್ಲಿ ಕೃಷಿ, ತೋಟಗಾರಿಕೆ ಚಟುವಟಿಕೆಗಳಿಗೆ 247768.29 ಹೆ. ಮತ್ತು ಕಾಫಿ ಬೆಳೆಗೆ 273.30 ಹೆ. ವಿಸ್ತೀರ್ಣ ಪ್ರದೇಶ ಬಳಕೆಯಾಗುತ್ತಿದೆ. ಪ್ರಮುಖವಾಗಿ ಹೊಂದಿರುವಂತಹ ಸ್ವಾಭಾವಿಕ ಸಸ್ಯ ಸಂಪನ್ಮೂಲಗಳು ಅಂದರೆ ಎಲೆ ಉದುರವ (ಡ್ರೈಡಿಸಿಡಿಯೋಸ್) ಮತ್ತು ಎಲೆ ಉದುರದ ಅರೆ ನಿತ್ಯಹರಿದ್ವರ್ಣ semi evergreen forest ಅರಣ್ಯ ಮತ್ತು ವಿರಳ ಕುರುಚಲು ಅರಣ್ಯ ಪ್ರದೇಶ (Thorny & scrub jungle) ಪೊದೆಗಳು ಹಾಗೂ ಮುಳ್ಳಿನಿಂದ ಕೂಡಿದ ಗಿಡ ಮರಗಳ ಕಾಡು ಮತ್ತು ಇಳಿಜಾರು ಪ್ರದೇಶಗಳಿಂದ ಕೂಡಿದ್ದು ಬೆಟ್ಟಗುಡ್ಡಗಳನ್ನೊಳಗೊಂಡ ಜೈವಿಧ್ಯತೆ ಹೊಂದಿರುವ ಪ್ರದೇಶಗಳನ್ನು ಹೊಂದಿರುತ್ತದೆ. ವ್ಯವಸಾಯವು ಜಿಲ್ಲೆಯ ಆರ್ಥಿಕ ಬೆನ್ನಲುಬಾಗಿರುತ್ತದೆ. ಜಿಲ್ಲೆಯಲ್ಲಿ ಪ್ರಮುಖವಾದ ಬೆಳೆಗಳೆಂದರೆ ರಾಗಿ, ಭತ್ತ, ಕಬ್ಬು, ಮುಸುಕಿನ ಜೋಳ, ಜೋಳ, ಕಡ್ಲೇಕಾಯಿ, ಸೂರ್ಯಕಾಂತಿ, ಹತ್ತಿ, ಹುರುಳಿ, ಹುಚ್ಚೆಳ್ಳು, ಉದ್ದು, ಅವರೆ, ಹರಳು ಬೆಳೆಯುವ ಬೆಳೆಗಳಾಗಿರುತ್ತದೆ.

ಜಿಲ್ಲೆಯ ಅಂಕಿ ಅಂಶಗಳು

ಜಿಲ್ಲೆಯ ಒಟ್ಟು ಭೂ ಪ್ರದೇಶದ ಶೇಕಡ 49.5 ಭಾಗ ಅಂದರೆ 280732.09 ವಿಸ್ತೀರ್ಣವುಳ್ಳ ವನ್ಯಜೀವಿ ಮತ್ತು ಕಾದಿರಿಸಿದ ಅರಣ್ಯ ಪ್ರದೇಶ ಇದೆ. ಜಿಲ್ಲಾ ಪುನರ್ ವಿಂಗಡಣೆ ಅಂಗವಾಗಿ ಹೊಸದಾಗಿ ರಚಿಸಿದ ಚಾಮರಾಜನಗರ ಜಿಲ್ಲೆಯಲ್ಲಿ, ಸರ್ಕಾರದ ಆದೇಶದ ಸಂ. ಅಪಜೀ–148–ಅಪಸೇ–98 ದಿನಾಂಕ: 12/08/1998 ರನ್ವಯ ಸಾಮಾಜಿಕ ಅರಣ್ಯ ವಿಭಾಗ, ಚಾಮರಾಜನಗರವು ಅಸ್ತಿತ್ವಕ್ಕೆ ಬಂದಿದ್ದು ಇದು ಹಿಂದೆ ಮೈಸೂರು ಜಿಲ್ಲೆಯಲ್ಲಿ ವಿಲೀನವಾಗಿತ್ತು.

ಸಾಮಾಜಿಕ ಅರಣ್ಯ ವಿಭಾಗವು 4 ಸಾಮಾಜಿಕ ಅರಣ್ಯ ವಲಯಗಳನ್ನೊಳಗೊಂಡಿದ್ದು, ಅವುಗಳು ಸಾಮಾಜಿಕ ಅರಣ್ಯ ವಲಯ, ಚಾಮರಾಜನಗರ/ ಗುಂಡ್ಲುಪೇಟೆ/ ಕೊಳ್ಳೇಗಾಲ ತಾಲ್ಲೂಕುಗಳು ಮತ್ತು ಸರ್ಕಾರಿ ಆದೇಶ ಸಂ: ಅಪಜಿ 186 ಎಫ್.ಎ.ಪಿ 99 ದಿನಾಂಕ: 16/02/2000 ರ ಮೇರೆಗೆ ಸಾಮಾಜಿಕ ಅರಣ್ಯ ವಲಯ, ಯಳಂದೂರು ಹೊಸದಾಗಿ ಸೃಷ್ಟಿಯಾಗಿರುತ್ತದೆ.

ಚಾಮರಾಜನಗರ ಜಿಲ್ಲೆಯಲ್ಲಿ ಅತಿವೃಷ್ಟಿ ರೀತಿಯಲ್ಲಿ ವ್ಯಾಪಕ ಮಳೆಬಿದ್ದಾಗ, ಮಳೆಯ ನೀರು ಹರಿದು, ರೈತರ ಜಮೀನಿನಲ್ಲಿರುವ ಫಲವತ್ತಾದ ಮಣ್ಣು, ಮಳೆ ನೀರಿನೊಡನೆ ಕೊಚ್ಚಿಕೊಂಡು ಅಂತಿಮವಾಗಿ ಕೆರೆ ಅಥವಾ ಕಟ್ಟೆ, ನದಿ ಬದಿಗಳಲ್ಲಿ ಹೊಳಾಗಿ ಸಂಗ್ರಹಗೊಳ್ಳುತ್ತದೆ. ಇದರಿಂದ ಜಲಸಂಗ್ರಹಣೆ ಮಟ್ಟದಲ್ಲಿ ಕುಸಿತ ಉಂಟಾಗುತ್ತದೆ. ಸಸ್ಯ ಸಂಪನ್ಮೂಲವಿದ್ದ ಪಕ್ಷದಲ್ಲಿ ಮಣ್ಣಿನ ಸವಕಳಿಯನ್ನು ಸಸ್ಯ ಸಂಪನ್ಮೂಲಗಳು ತಡೆಗಟ್ಟುತ್ತಿದ್ದವು. ಸಸ್ಯ ಸಂಪನ್ಮೂಲಗಳ ಫಲಿತಾಂಶವು ಭೂಮಿಯ ಮೇಲಿನ ಮಣ್ಣು ಫಲವತ್ತತೆ ಹೊಂದುವುದಲ್ಲದೆ ಭೂಮಿಯಲ್ಲಿ ಜಲಸಂಗ್ರಹಣೆ ಹೆಚ್ಚಾಗುವುದರ ಜೊತೆ ಫಲವತ್ತಾದ ಗುಣವು ಮಣ್ಣು ಹೊಂದುವುದು. ಬರಡು ಬೆಟ್ಟ ಪ್ರದೇಶದಲ್ಲಿ ಜಲ ಮತ್ತು ಭೂ ಸಂರಕ್ಷಣೆ ಕಾಮಗಾರಿ ಕೈಗೊಂಡು ಸಸ್ಯ ಸಂಪನ್ಮೂಲ ಬೆಳೆಸುವುದರಿಂದ ಆ ಪ್ರದೇಶವು ಫಲವತ್ತಾಗಿ ಪರಿವರ್ತನೆ ಹೊಂದುವುದರಿಂದ ರೈತರ ಜಮೀನಿನಲ್ಲಿ ಕೃಷಿ ಉತ್ಪನ್ನ ಹೆಚ್ಚಾಗಿ ಆರ್ಥಿಕವಾಗಿ ಸಬಲಗೊಳಿಸಬಹುದಾಗಿರುತ್ತದೆ.

ಚಾಮರಾಜನಗರ ಸಾಮಾಜಿಕ ಅರಣ್ಯ ವಿಭಾಗ ಹುದ್ದೆಗಳ ವಿವರ

ಕ್ರ.ಸಂ	ಪದನಾಮ	ಮಂಜೂರು	ಭರ್ತಿ	ಖಾಲಿ
1	ಉಪ ಅರಣ್ಯ ಸಂರಕ್ಷಣಾಧಿಕಾರಿ	1	1	–
2	ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ	1	–	1
3	ವಲಯ ಅರಣ್ಯಾಧಿಕಾರಿ	4	3	1
4	ಅಧೀಕ್ಷಕರು	1	1	–
5	ಪ್ರಥಮ ದರ್ಜೆ ಸಹಾಯಕ	1	–	1
6	ದ್ವಿತೀಯ ದರ್ಜೆ ಸಹಾಯಕ	2	1	1
7	ಉಪ ವಲಯ ಅರಣ್ಯಾಧಿಕಾರಿ	10	10	–
8	ಅರಣ್ಯ ರಕ್ಷಕರು	11	9	2
9	ಗ್ರೂಪ್ "ಡಿ" ನೌಕರರು	1	1	–
10	ಸೂಪರ್ ನ್ಯೂಮರರಿ "ಡಿ" ಗ್ರೂಪ್ ನೌಕರರು	3	3	–
	ಒಟ್ಟು	**35**	**29**	**6**

ಚಾಮರಾಜನಗರ ಜಿಲ್ಲೆಯಲ್ಲಿ ನಾಲ್ಕು ವಲಯಗಳಿದ್ದು ಅವುಗಳು ಆಯಾಯ ತಾಲ್ಲೂಕಿನ ವ್ಯಾಪ್ತಿಯಲ್ಲಿರುತ್ತದೆ. ಈ ವಲಯಗಳ ವಿಸ್ತೀರ್ಣ ಕೆಳಕಂಡಂತಿರುತ್ತದೆ.

ಕ್ರ.ಸಂ	ವಲಯದ ಹೆಸರು	ಕೇಂದ್ರ ಸ್ಥಾನ
1.	ಸಾಮಾಜಿಕ ಅರಣ್ಯ ವಲಯ, ಚಾಮರಾಜನಗರ	ಚಾಮರಾಜನಗರ
2.	ಸಾಮಾಜಿಕ ಅರಣ್ಯ ವಲಯ, ಗುಂಡ್ಲುಪೇಟೆ	ಗುಂಡ್ಲುಪೇಟೆ
3.	ಸಾಮಾಜಿಕ ಅರಣ್ಯ ವಲಯ, ಕೊಳ್ಳೇಗಾಲ	ಕೊಳ್ಳೇಗಾಲ
4.	ಸಾಮಾಜಿಕ ಅರಣ್ಯ ವಲಯ, ಯಳಂದೂರು	ಯಳಂದೂರು

ಸಸ್ಯಕ್ಷೇತ್ರಗಳು:–

ಕ್ರ.ಸಂ	ವಲಯದ ಹೆಸರು	ಸಸ್ಯಕ್ಷೇತ್ರಗಳ ಹೆಸರು
1.	ಸಾಮಾಜಿಕ ಅರಣ್ಯ ವಲಯ, ಚಾಮರಾಜನಗರ	ಎಣ್ಣೆಹೊಳೆ ಸಸ್ಯಕ್ಷೇತ್ರ
2.	ಸಾಮಾಜಿಕ ಅರಣ್ಯ ವಲಯ, ಗುಂಡ್ಲುಪೇಟೆ	ಅರೇಪುರ ಸಸ್ಯಕ್ಷೇತ್ರ
3.	ಸಾಮಾಜಿಕ ಅರಣ್ಯ ವಲಯ, ಕೊಳ್ಳೇಗಾಲ	ಗುಂಡಾಲ್ ಸಸ್ಯಕ್ಷೇತ್ರ
4.	ಸಾಮಾಜಿಕ ಅರಣ್ಯ ವಲಯ, ಯಳಂದೂರು	ಗುಂಬಳ್ಳಿ ಸಸ್ಯಕ್ಷೇತ್ರ

ಸಾಮಾಜಿಕ ಅರಣ್ಯದ ಉದ್ದೇಶಗಳು

- ಅರಣ್ಯೀಕರಣ ಮತ್ತು ಸಾಮಾಜಿಕ ಅರಣ್ಯ ಕಾರ್ಯಕ್ರಮಗಳ ಮೂಲಕ ವಿಶೇಷವಾಗಿ ಖಾಲಿ ಇರುವ ನಶಿಸಿದ ಮತ್ತು ಅನುತ್ಪಾದಕ ಜಮೀನುಗಳಲ್ಲಿ ಗಣನೀಯ ಪ್ರಮಾಣದಲ್ಲಿ ವೃಕ್ಷ ಸಂತತಿಯನ್ನು ಹೆಚ್ಚಿಸುವುದು.
- ಮಾರುಕಟ್ಟೆಯಲ್ಲಿ ಉಂಟಾಗುವ ಬೇಡಿಕೆಗೆ ಅನುಗುಣವಾಗಿ ಅರಣ್ಯ ಉತ್ಪನ್ನಗಳು ಮತ್ತು ಚೌಬೀನೇತರ ಅರಣ್ಯ ಉತ್ಪನ್ನಗಳನ್ನು ವೃಕ್ಷ ಸಂಪನ್ಮೂಲಗಳಿಂದ ಹೆಚ್ಚಿಸುವುದು.
- ಅತ್ಯವಶ್ಯಕ ತಳಹದಿ ಮತ್ತು ಕಾಲಮಿತಿ ಕಾರ್ಯಯೋಜನೆ ಅನುಸಾರ ಬಂಜರು ಹಾಗೂ ನಶಿಸಿದ ಭೂಮಿಗಳನ್ನು ಮತ್ತು ಸಮುದಾಯದ ಭೂಮಿಗಳನ್ನು ಅರಣ್ಯೀಕರಣಗೊಳಿಸುವುದು.
- ರಸ್ತೆಬದುಗಳು, ರೈಲ್ವೆಬದುಗಳಲ್ಲಿ, ನದಿ ದಂಡೆಗಳ ಮೇಲೆ, ಕೆರೆಯಂಗಳದಲ್ಲಿ, ಕಾಲುವೆ ಮತ್ತು ಹೊಳೆ ದಂಡೆಗಳ ಮೇಲೆ ರಾಜ್ಯ ನಿಗಮಗಳಲ್ಲಿ ಉಪಯೋಗಿಸದ ಭೂಮಿಗಳ ಮೇಲೆ ಸಂಘ–ಸಂಸ್ತೆಗಳು ಅಥವಾ ಖಾಸಗೀ ಒಡೆತನದಲ್ಲಿರುವ ಖಾಲಿ ಭೂಮಿಗಳಲ್ಲಿ ಸಸಿಗಳನ್ನು ನೆಡುವುದು ಮತ್ತು ಪ್ರೋತ್ಸಾಹಿಸುವುದು.
- ನಗರ / ಕೈಗಾರಿಕಾ ಪ್ರದೇಶ ಹಾಗೂ ಶುಷ್ಕ ಬಯಲು ಪ್ರಾಂತ್ಯಗಳ ಸುತ್ತ ಹಸಿರು ಪಟ್ಟಿಯನ್ನು ನಿರ್ಮಿಸುವುದು.
- ರೈತರಿಗೆ ಅಲ್ಪ ಅವಧಿಯಲ್ಲಿ ಆದಾಯ ತರುವಂತಹ ಹೆಬ್ಬೇವು, ಸಿಲ್ವರ್‌ಓಕ್, ದೀರ್ಘ ಅವಧಿಯಲ್ಲಿ ಆದಾಯ ತರುವಂತಹ ಶ್ರೀಗಂಧ, ಬೀಟೆ, ನೇರಳೆ, ಹುಣಸೆ, ನೆಲ್ಲಿ, ಹಲಸು ಮುಂತಾದ ಸಸಿಗಳನ್ನು ನೆಡುವ ಬಗ್ಗೆ ರೈತರಿಗೆ ಆಸಕ್ತಿ ಮೂಡಿಸುವುದು.
- ಉಚಿತ ಮತ್ತು ರಿಯಾಯಿತಿ ದರದಲ್ಲಿ ಸಸಿಗಳನ್ನು ವಿತರಿಸುವುದು. ಹಾಗೂ ಪ್ರೋತ್ಸಾಹ ಧನ ನೀಡುವುದು.
- ಆಮೀನು ಬದುಗಳಲ್ಲಿ ನೆರಳು ಹಾಗೂ ಪ್ರಾಣಿ ಪಕ್ಷಿಗಳಿಗೆ ಹಣ್ಣು ಸಿಗುವಂತಹ ಸಸಿಗಳನ್ನು ನೆಡುವ ಬಗ್ಗೆ ಜನರಲ್ಲಿ ಆಸಕ್ತಿ ಮೂಡಿಸುವುದು.

2019–20ನೇ ಸಾಲಿನಲ್ಲಿ ವಿವಿಧ ಯೋಜನೆಗಳಡಿ ಬೆಳೆಸಿರುವ ನೆಡುತೋಪುಗಳ ವಿವರ:

ಕ್ರ ಸ	ಯೋಜನೆ	ವಲಯ	ಕಾಮಗಾರಿಗಳ ಸ್ಥಳ		ವಿಸ್ತೀರ್ಣ ಹೆಗ್ಗಳಲಿ
1	2	3	4		5
1	**ಸಾಮಾಜಿಕ ಅರಣ್ಯ ಯೋಜನೆ**	ಸಾಮಾಜಿಕ ಅರಣ್ಯ ವಲಯ, ಚಾಮ್ಮರಾಜ ನಗರ.	1)	ಚಾಮರಾಜನಗರ ತಾಲ್ಲೂಕಿನ ವ್ಯಾಪ್ತಿಯ ರಸ್ತೆಬದು/ ನಾಲಾಬದು ಗಳಲ್ಲಿ ನೆಡುತೋಪು ನಿರ್ಮಾಣ	12 ಕಿ.ಮೀ
				ಒಟ್ಟು	**12 ಕಿ.ಮೀ**
		ಸಾಮಾಜಿಕ ಅರಣ್ಯ ವಲಯ, ಗುಂಡ್ಲುಪೇಟೆ	1)	ಗುಂಡ್ಲುಪೇಟೆ ತಾಲ್ಲೂಕಿನ ವ್ಯಾಪ್ತಿಯ ರಸ್ತೆಬದು/ ನಾಲಾಬದು ಗಳಲ್ಲಿ ನೆಡುತೋಪು ನಿರ್ಮಾಣ	14.5ಕಿ.ಮೀ
				ಒಟ್ಟು	14.5ಕಿ.ಮೀ
		ಸಾಮಾಜಿಕ ಅರಣ್ಯ ವಲಯ, ಕೊಳ್ಳೇಗಾಲ	1)	ಕೊಳ್ಳೇಗಾಲ ತಾಲ್ಲೂಕಿನ ವ್ಯಾಪ್ತಿಯ ರಸ್ತೆಬದು/ ನಾಲಾಬದು ಗಳಲ್ಲಿ ನೆಡುತೋಪು ನಿರ್ಮಾಣ	19.5ಕಿ.ಮೀ
				ಒಟ್ಟು	19.5ಕಿ.ಮೀ
		ಸಾಮಾಜಿಕ ಅರಣ್ಯ ವಲಯ, ಯಳಂದೂರು	1)	ಯಳಂದೂರು ತಾಲ್ಲೂಕಿನ ವ್ಯಾಪ್ತಿಯ ರಸ್ತೆಬದು/ ನಾಲಾಬದು ಗಳಲ್ಲಿ ನೆಡುತೋಪು ನಿರ್ಮಾಣ	13 ಕಿಮೀ
				ಒಟ್ಟು	**13 ಕಿಮೀ**
				ಒಟ್ಟು (I)	**59 ಕಿ.ಮೀ**
2	ನಗರ ಪ್ರದೇಶ ಹಸಿರೀಕರಣ (ಕೆಎಫ್‌ಡಿಎಫ್ ಫ್ಲೆಕ್ಸಿ ಫಂಡ್)	ಸಾಮಾಜಿಕ ಅರಣ್ಯ ವಲಯ,	1)	ಕೊಳ್ಳೇಗಾಲ ಟೌನಿನ ವ್ಯಪ್ತಿಯ ರಸ್ತೆಬದು ಮತ್ತು ಹನೂರು ಟೌನಿನ ವ್ಯಾಪ್ತಿಯ ಸರ್ಕಾರಿ ಬಾಲಕರ	**3.03 ಹೆ.**
				ಒಟ್ಟು (II)	**3.03 ಹೆ.**
3	ರಸ್ತೆಬದು ನೆಡುತೋಪು (ಕೆಎಫ್‌ಡಿಎಫ್ ಫ್ಲೆಕ್ಸಿ ಫಂಡ್)	ಸಾಮಾಜಿಕ ಅರಣ್ಯ ವಲಯ, ಗುಂಡ್ಲುಪೇಟೆ	1)	ಗುಂಡ್ಲುಪೇಟೆ ತಾಲ್ಲೂಕಿನ ವ್ಯಾಪ್ತಿಯಲ್ಲಿ ರಸ್ತೆಬದುಗಳಲ್ಲಿ ನೆಡುತೋಪು ನಿರ್ಮಾಣ	**2.42ಕಿ.ಮೀ**
				ಒಟ್ಟು	**2.42ಕಿ.ಮೀ**
		ಸಾಮಾಜಿಕ ಅರಣ್ಯ ವಲಯ, ಕೊಳ್ಳೇಗಾಲ.	1)	ಕೊಳ್ಳೇಗಾಲ ತಾಲ್ಲೂಕಿನ ವ್ಯಾಪ್ತಿಯಲ್ಲಿ ರಸ್ತೆಬದುಗಳಲ್ಲಿ ನೆಡುತೋಪು ನಿರ್ಮಾಣ	**2.5ಕಿ.ಮೀ**
				ಒಟ್ಟು	**2.5ಕಿ.ಮೀ**
				ಒಟ್ಟು (III)	**4.92ಕಿ.ಮೀ**

4	ನಗರ ಪ್ರದೇಶ ಹಸಿರೀಕರಣ	ಸಾಮಾಜಿಕ ಅರಣ್ಯ ವಲಯ, ಚಾ.ನಗರ.	1)	ಚಾಮರಾಜನಗರ ತಾಲ್ಲೂಕಿನ ವ್ಯಾಪ್ತಿಯ ರಸ್ತೆಬದು/ ನಾಲಾಬದು ಗಳಲ್ಲಿ ನೆಡುತೋಪು ನಿರ್ಮಾಣ	**3 ಹೆ.**
				ಒಟ್ಟು (IV)	**3 ಹೆ.**
4	ಎಂಜಿಎನ್‌ಆರ್‌ಇ ಜಿಎಸ್	ಸಾಮಾಜಿಕ ಅರಣ್ಯ	1)	ಚಾಮರಾಜನಗರ ತಾಲ್ಲೂಕಿನ ವ್ಯಾಪ್ತಿಯಲ್ಲಿ ರಸ್ತೆಬದಿ ನೆಡುತೋಪು	2.5ಕಿ.ಮೀ
				ಒಟ್ಟು	**2.5 ಕಿ.ಮೀ**
	ಸಾಮಾಜಿಕ ಅರಣ್ಯ ವಲಯ, ಗುಂಡ್ಲುಪೇಟೆ		1)	ಗುಂಡ್ಲುಪೇಟೆ ತಾಲ್ಲೂಕಿನ ವ್ಯಾಪ್ತಿಯಲ್ಲಿ ರಸ್ತೆಬದಿ ನೆಡುತೋಪು ನಿರ್ಮಾಣ	5.5 ಕಿ.ಮೀ
				ಒಟ್ಟು	**5.5 ಕಿ.ಮೀ**
	ಸಾಮಾಜಿಕ ಅರಣ್ಯ ವಲಯ, ಕೊಳ್ಳೇಗಾಲ		1)	ಕೊಳ್ಳೇಗಾಲ ತಾಲ್ಲೂಕಿನ ವ್ಯಾಪ್ತಿಯಲ್ಲಿ ರಸ್ತೆಬದಿ ನೆಡುತೋಪು ನಿರ್ಮಾಣ	**6 ಕಿ.ಮೀ**
				ಒಟ್ಟು	**6 ಕಿ.ಮೀ**
	ಸಾಮಾಜಿಕ ಅರಣ್ಯ ವಲಯ, ಯಳಂದೂರು		1)	ಯಳಂದೂರು ತಾಲ್ಲೂಕಿನ ರಸ್ತೆಬದಿ ನೆಡುತೋಪು ನಿರ್ಮಾಣ	8.5 ಕಿ.ಮೀ
				ಒಟ್ಟು	**8.5 ಕಿ.ಮೀ**
				ಒಟ್ಟು (V)	**22.5ಕಿ.ಮೀ**
				ಒಟ್ಟು (I+II+III+IV+V)	**92.45 ಹೆ.**

ಕ್ರ. ಸಂ.	ವಿವರ	2019–20ನೇ ಸಾಲಿಗೆ ಕೋರಿರುವ ಅನುದಾನ	2019–20ನೇ ಸಾಲಿಗೆ (31.03.2020 ರವರೆಗೆ) ಬಿಡುಗಡೆಯಾದ ಅನುದಾನ	2018–19ನೇ ಮಾರ್ಚ್2019ರ ಅಂತ್ಯಕ್ಕೆ ವೆಚ್ಚವಾದ ವಿವರ
1	**ವೇತನ ಮತ್ತು ಭತ್ಯೆ –001**	110.00	110.00	109.905
2	**ವೇತನೇತರ**			
	1) ಕಛೇರಿ (ಆಡಳಿತಾತ್ಮಕ) ವೆಚ್ಚ – 090	41.66	41.66	41.66
	2) ಅಧಿಸೂಚಿಸಲ್ಪಟ್ಟ ಕ್ಷೇಮಾಭಿವೃಧಿ ನೌಕರರ ವೇತನ–033	5.895	5.895	5.895
	3) ಗುತ್ತಿಗೆ/ಹೊರಗುತ್ತಿಗೆ ನೌಕರರ ವೇತನ – 034	45.00	45.00	45.00
	ಒಟ್ಟು	**202.555**	**202.555**	**202.459**

2019–20ನೇ ಸಾಲಿನಲ್ಲಿ ವಿವಿಧ ಯೋಜನೆಗಳಡಿ ಸಾಧಿಸಿದ ಪ್ರಗತಿ ವರದಿ.

ಕ್ರ.	ಯೋಜನೆಯ		ಕೆಲಸಗಳ ವಿವರ	ಭೌತಿಕ ಸಾಧನೆ	ಆರ್ಥಿಕ
1	2		3	4	5
1	ಸಾಮಾಜಿಕ ಅರಣ್ಯ ಯೋಜನೇತರ	1)	ಸಿಬ್ಬಂದಿಗಳ ವೇತನ ಮತ್ತು ಇನ್ನೀತರೆ ಸೌಲಭ್ಯ	28 ಸಂಖ್ಯೆ	109.905
		2)	ಕಛೇರಿ ವೆಚ್ಚ, ವಿದ್ಯುತ್‌ವೆಚ್ಚ, ದೂರವಾಣಿ ವೆಚ್ಚ, ಇಲಾಖಾ ವಹನಗಳ ದುರಸ್ಥಿ, ಇಂಧನ, ಪಿಠೋಪಕರಣಗಳ ಖರೀದಿ ಇತ್ಯಾಧಿ	05 ಕಛೇರಿ	41.660
		3)	ಗುತ್ತಿಗೆ / ಹೊರ ಗುತ್ತಿಗೆ ನೌಕರರ ವೇತನ	25 ಸಂಖ್ಯೆ	45.000
		4)	ಅಧಿಸೂಚಿಸಲ್ಪಟ್ಟ ಕ್ಷೇಮಾಭಿವೃಧಿ ನೌಕರರ ವೇತನ	02 ಸಂಖ್ಯೆ	5.895
				ಒಟ್ಟು	202.459
2	ಸಾಮಾಜಿಕ ಅರಣ್ಯ ಯೋಜನೆ	1)	ವಿವಿಧ ಅಳತೆಯ ಸಸಿಗಳ ನಿರ್ವಹಣೆ	49080 ಸಸಿಗಳು	200.00
		2)	2016–17ನೇ ಸಾಲಿನ ಬ್ಲಾಕ್ ನೆಡುತೋಪು ನಿರ್ವಹಣೆ	12 ಹೆ.	
		3)	2016–17ನೇ ಸಾಲಿನ ಶಾಲಾವನ ನೆಡುತೋಪು ನಿರ್ವಹಣೆ	22 ಹೆ.	
		4)	2017–18ನೇ ಸಾಲಿನ ಶಾಲಾವನ ನೆಡುತೋಪು ನಿರ್ವಹಣೆ	4 ಹೆ.	
		5)	2017–18ನೇ ಸಾಲಿನ ರಸ್ತೆಬದು ನೆಡುತೋಪು	81 ಕಿ.ಮೀ	
		6)	2018–19ನೇ ಸಾಲಿನ ಶಾಲಾವನ ನೆಡುತೋಪು	29.25 ಹೆ.	
		7)	2018–19ನೇ ಸಾಲಿನ ರಸ್ತೆಬದು ನೆಡುತೋಪು	40 ಕಿ.ಮೀ	
		8)	2019–20ನೇ ಸಾಲಿನಲ್ಲಿ ರಸ್ತೆಬದು ನೆಡುತೋಪು	59 ಕಿ.ಮೀ	
		9)	ಮುಂಗಡ ಕಾಮಗಾರಿ	44.54 ಕಿ.ಮೀ	
		1	ವಿವಿಧ ಅಳತೆಯ ಸಸಿಗಳನ್ನು ಬೆಳೆಸುವುದು	64581	
				ಒಟ್ಟು	**200.00**
3	ಕಟ್ಟಡಗಳು	1)	ಹಳೆಯ ಇಲಾಖಾ ಕಟ್ಟಡಗಳ ನಿರ್ವಹಣೆ	11 ಕಟ್ಟಡಗಳು	28.50
		2)	ಸಿಬ್ಬಂದಿ ವಸತಿ ಗೃಹ ನಿರ್ಮಾಣ	01 ಕಟ್ಟಡಗಳು	
				ಒಟ್ಟು	**28.50**
4	ನಗರ ಹಸಿರೀಕರಣ	1)	2017–18ನೇ ಸಾಲಿನ ನೆಡುತೋಪು ನಿರ್ವಹಣೆ	20 ಹೆ.	11.962
		2)	2017–18ನೇ ಸಾಲಿನ ನೆಡುತೋಪು ನಿರ್ವಹಣೆ	6 ಹೆ.	
		3)	2019–20ನೇ ಸಾಲಿನಲ್ಲಿ ನೆಡುತೋಪು ನಿರ್ಮಾಣ	3 ಹೆ.	
		4)	14*20 ಅಳತೆಯ ಸಸಿಗಳನ್ನು ಬೆಳೆಸುವುದು	1090 ಸಸಿಗಳು	
				ಒಟ್ಟು	**11.962**
5	ರಸ್ತೆಬದು ನೆಡುತೋಪು	1)	2017–18ನೇ ಸಾಲಿನ ರಸ್ತೆಬದು ನೆಡುತೋಪು	12 ಕಿ.ಮೀ	9.762
		2)	ಮುಂಗಡ ಕಾಮಗಾರಿ	6 ಕಿ.ಮೀ	
		3)	14*20 ಅಳತೆಯ ಸಸಿಗಳನ್ನು ಬೆಳೆಸುವುದು	1980 ಸಸಿಗಳು	
				ಒಟ್ಟು	**9.762**
6	ಆರ್‌ಎಸ್‌ಪಿಡಿ	1)	ವಿವಿಧ ಅಳತೆಯ ಸಸಿಗಳ ನಿರ್ವಹಣೆ	214900 ಸಸಿ	85.642
		2)	ವಿವಿಧ ಅಳತೆಯ ಸಸಿಗಳನ್ನು ಬೆಳೆಸುವುದು	385370 ಸಸಿ	
		3)	ಕೃಷಿ ಅರಣ್ಯ ಪ್ರೋತ್ಸಾಹ ಧನ ವಿತರಿಸುವುದು	53.825 ಲಕ್ಷ	
				ಒಟ್ಟು	**85.642**
7	ಹಸಿರು	1)	6*9 ಅಳತೆಯ ಸಸಿಗಳನ್ನು ನಿರ್ವಹಣೆ	79315 ಸಸಿಗಳು	**24.726**

	ಕರ್ನಾಟಕ	2)	8*12 ಅಳತೆಯ ಸಸಿಗಳನ್ನು ನಿರ್ವಹಣೆ	1835 ಸಸಿಗಳು	
		3)	ಹಸಿರು ಕರ್ನಾಟಕ / ವನಮಹೋತ್ಸವ ಕಾರ್ಯಕ್ರಮ	30 ಸಂಖ್ಯೆ	
		4)	6*9 ಅಳತೆಯ ಸಸಿಗಳನ್ನು ಬೆಳೆಸುವುದು	66500ಸಸಿಗಳು	
		5)	8*12 ಅಳತೆಯ ಸಸಿಗಳನ್ನು ಬೆಳೆಸುವುದು	15000 ಸಸಿಗಳು	
		6)	6*9 ಅಳತೆಯ ಸಸಿಗಳನ್ನು ಬೆಳೆಸುವುದು	11000 ಸಸಿಗಳು	
		7)	ಮುಂಗಡ ಕಾಮಗಾರಿ– ಊರಿಗೊಂದು ತೋಪು	25 ಹೆ.	
		8)	ಮುಂಗಡ ಕಾಮಗಾರಿ–ತಾಲ್ಲೂಕಿಗೊಂದು ಕಿರು ಅರಣ್ಯ	25 ಹೆ.	
				ಒಟ್ಟು	**24.726**
8	ಕೆ.ಎಫ್.ಡಿ.ಎಫ್	1)	8*12 ಅಳತೆಯ ಸಸಿಗಳ ನಿರ್ವಹಣೆ	14825 ಸಸಿಗಳು	8.779
		2)	10*16 ಅಳತೆಯ ಸಸಿಗಳ ನಿರ್ವಹಣೆ	12000 ಸಸಿಗಳು	
		3)	2017–18ನೇ ಸಾಲಿನ ನೆಡುತೋಪು ನಿರ್ವಹಣೆ	55 ಹೆ.	
				ಒಟ್ಟು	**8.779**
9	ಜಿಯುಎ (ಕೆಎಫ್‌ಡಿಎಫ್ ಪ್ಲಕ್ಸಿ ಫಂಡ್)	1)	14*20 ಅಳತೆಯ ಸಸಿಗಳ ನಿರ್ವಹಣೆ	1000 ಸಸಿಗಳು	5.556
		2)	ಮಾನ್ಸೂನ್ ನೆಡುತೋಪು ನಿರ್ಮಾಣ	3.03 ಹೆಕ್ಟೇರ್	
		3)	14*20 ಅಳತೆಯ ಸಸಿಗಳನ್ನು ಬೆಳೆಸುವುದು	91 ಸಸಿಗಳು	
				ಒಟ್ಟು	**5.556**
10	ಆರ್‌ಎಸ್‌ಪಿ (ಕೆಎಫ್‌ಡಿಎಫ್ ಪ್ಲಕ್ಸಿ ಫಂಡ್)	1)	14*20 ಅಳತೆಯ ಸಸಿಗಳ ನಿರ್ವಹಣೆ	2500 ಸಸಿಗಳು	24.135
		2)	2018–19ನೇ ಸಾಲಿನ ನೆಡುತೋಪು ನಿರ್ವಹಣೆ	18 ಕಿ.ಮೀ	
		3)	ಮಾನ್ಸೂನ್ ನೆಡುತೋಪು ನಿರ್ಮಾಣ	4.92 ಕಿ.ಮೀ	
		4)	14*20 ಅಳತೆಯ ಸಸಿಗಳನ್ನು ಬೆಳೆಸುವುದು	148 ಸಸಿಗಳು	
				ಒಟ್ಟು	**24.135**
11	ಕಾವೇರಿ ಕೂಗು (ಕೆಎಫ್‌ಡಿಎಫ್ ಪ್ಲಕ್ಸಿ ಫಂಡ್)	1)	5*8 ಅಳತೆಯ ಸಸಿಗಳನ್ನು ಬೆಳೆಸುವುದು	28000ಸಸಿಗಳು	3.899
		2)	6*9 ಅಳತೆಯ ಸಸಿಗಳನ್ನು ಬೆಳೆಸುವುದು	28000ಸಸಿಗಳು	
		3)	8*12 ಅಳತೆಯ ಸಸಿಗಳನ್ನು ಬೆಳೆಸುವುದು	4000 ಸಸಿಗಳು	
				ಒಟ್ಟು	**3.899**
12	ಎಸ್‌ಎಂ ಎಎಫ್	1)	ಸಸ್ಯಕ್ಷೇತ್ರ ನಿರ್ಮಾಣ (ಬಿಗ್)	1 ಸಂಖ್ಯೆ	**12.191**
		2)	ಬೌಂಡ್ರಿ ಪ್ಲಾಂಟೇಷನ್	2000 ಸಸಿಗಳು	
		3)	ಲೋ ಡೆನ್ಸಿಟಿ ಪ್ಲಾಂಟೇಷನ್(100–500ಸಸಿ/ಹೆ	40 ಹೆ.	
		4)	ಹೈ ಡೆನ್ಸಿಟಿ ಪ್ಲಾಂಟೇಷನ್(500–1000ಸಸಿ/ಹೆ)	10 ಹೆ.	
				ಒಟ್ಟು	**12.191**
13	ಎಂಎನ್‌ಆರ್ ಇಜಿಎಸ್	1)	ರಸ್ತೆಬದು ನೆಡುತೋಪು ನಿರ್ಮಾಣ	22.5 ಕಿ.ಮೀ	**87.551**
		2)	ಸರ್ಕಾರಿ ಜಮೀನುಗಳಲ್ಲಿ ನೆಡುತೋಪು ನಿರ್ಮಾಣ	16 ಹೆ.	
		3)	ರೈತರ ಜಮೀನುಗಳಲ್ಲಿ ಸಸಿಗಳನ್ನು ನೆಡುವುದು	51728ಸಸಿಗಳು	
		4)	ಮಣ್ಣು ಮತ್ತು ನೀರು ಸಂರಕ್ಷಣಾ ಕಾಮಗಾರಿ (ಎಸ್.ಎಂ.ಸಿ)	5245 ಘ.ಮೀ	
			8*12 ಅಳತೆಯ ಸಸಿಗಳನ್ನು ಬೆಳೆಸುವುದು	75000	
			10*16 ಅಳತೆಯ ಸಸಿಗಳನ್ನು ಬೆಳೆಸುವುದು	3000	
			14*20 ಅಳತೆಯ ಸಸಿಗಳನ್ನು ಬೆಳೆಸುವುದು	12000	
				ಒಟ್ಟು	**87.551**

18. ಸಹಕಾರ ಇಲಾಖೆ

ಸಹಕಾರ ಇಲಾಖೆಯು ಜಿಲ್ಲೆಯಲ್ಲಿ ಕೆಳಕಂಡ 5 ಕಛೇರಿಗಳನ್ನು ಹೊಂದಿರುತ್ತದೆ. ಕಛೇರಿವಾರು ಇಲಾಖೆಯಲ್ಲಿರುವ ವೃಂದಬಲ ಕೆಳಗಿನಂತಿರುತ್ತದೆ.

ಕ್ರ.ಸಂ	ಪದನಾಮ	ಮಂಜೂರಾತಿ	ಭರ್ತಿ	ಖಾಲಿ
1	ಸಹಕಾರ ಸಂಘಗಳ ಉಪ ನಿಬಂಧಕರು	01	0	01
2	ಸಹಕಾರ ಸಂಘಗಳ ಸಹಾಯಕ ನಿಬಂಧಕರು,	01	01	0
3	ಸಹಕಾರ ಅಭಿವೃದ್ಧಿ ಅಧಿಕಾರಿ	05	05	0
4	ಅಧೀಕ್ಷಕರು	02	02	0
5	ಹಿರಿಯ ನಿರೀಕ್ಷಕರು	02	01	0
6	ನಿರೀಕ್ಷಕರು	**08**	**0**	**8**
7	ಪ್ರಥಮ ದರ್ಜೆ ಸಹಾಯಕರು	**02**	**02**	**0**
8	ದ್ವಿತೀಯ ದರ್ಜೆ ಸಹಾಯಕರು	**05**	**01**	**4**
9	ಬೆರಳಚ್ಚುಗಾರರು	**01**	**0**	**1**
10	ಶೀಘ್ರಲಿಪಿಗಾರರು	**03**	**0**	**3**
11	ಜಾರಿಗಾರರು	**01**	**01**	**0**
12	ಡಿ ದರ್ಜೆ ನೌಕರರು	**07**	**02**	**5**
13	ವಾಹನ ಚಾಲಕರು	**01**	**0**	**1**
	ಒಟ್ಟು	**39**	**15**	**23**

ಸಹಕಾರ ಸಂಘಗಳ ವಿವರ

ಜಿಲ್ಲೆಯಲ್ಲಿ 31–03–2020 ರ ಅಂತ್ಯಕ್ಕೆ ಒಟ್ಟು 804 ಸಹಕಾರ ಸಂಘಗಳಿದ್ದು ಸದಸ್ಯತ್ವ ವಿವರ ಕೆಳಕಂಡಂತಿದೆ.

ಕ್ರ.ಸಂ	ಸಂಘದ ವಿಧ	ಕಾರ್ಯ ನಿರತ	ನಿಷ್ಕ್ರಿಯ	ಸಮಾಪನೆ	ಒಟ್ಟು	ಒಟ್ಟು ಸದಸ್ಯತ್ವ
1	ಪ್ರಾಥಮಿಕ ಕೃಷಿಪತ್ತಿನ ಸ.ಸಂ	95	0	1	96	92732
2	ಪಿಕಾರ್ಡ್ ಬ್ಯಾಂಕ್	4	0	0	4	13843
3	ಹಾಲು ಉತ್ಪಾದಕರ ಸ.ಸಂ	463	10	15	488	132268
4	ಟಿ.ಎ.ಪಿ.ಸಿ.ಎಂ.ಎಸ್	4	0	0	4	2776
5	ಲ್ಯಾಂಪ್ಸ್	4	0	0	4	4164
6	ಇತರೆ	160	28	20	208	74270
	ಒಟ್ಟು	**730**	**38**	**36**	**804**	**320053**

2019–20 ನೇ ಸಾಲಿನ ವಾರ್ಷಿಕ ಆಡಳಿತ ಮಂಡಳಿ ವರದಿ ಜಿಲ್ಲಾ ಪಂಚಾಯತ್ ಯೋಜನೆ ಕಾರ್ಯಕ್ರಮಗಳ ವಿವರ.

1) ಹಾಲು ಉತ್ಪಾದನಾ ಮಹಿಳಾ ಸಹಕಾರ ಸಂಘಗಳಿಗೆ ಮೂಲಭೂತ ಸೌಕರ್ಯಗಳು. – 2425–00–101–0–30(090) ಈ ಯೋಜನೆಗೆ 2019–20 ನೇ ಸಾಲಿನಲ್ಲಿ ರೂ 8.00 ಲಕ್ಷಗಳು ಗುರಿ ನೀಡಿದ್ದು, ಒಟ್ಟು 16 ಸಹಕಾರ ಸಂಘಗಳು ಆಯ್ಕೆಯಾಗಿದ್ದು ಪ್ರತಿ ಸಹಕಾರ ಸಂಘಕ್ಕೆ ತಲಾ ರೂ.0.50 ರಂತೆ ಹಂಚಿಕೆ ಮಾಡಿದ್ದು ಸಹಕಾರ ಸಂಘಗಳ ಪಟ್ಟಿ ಈ ಕೆಳಕಂಡಂತಿದೆ.

ರೂ. ಲಕ್ಷಗಳಲ್ಲಿ

ಕ್ರ.ಸಂ	ಸಹಕಾರ ಸಂಘಗಳ ಹೆಸರು	ಮೊತ್ತ
1	ಪುಟ್ಟನಪುರ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘ ನಿ., ಚಾಮರಾಜನಗರ ತಾಲ್ಲೂಕು	0.50
2	ಬಂಡಿಗೆರೆ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘ ನಿ., ಚಾಮರಾಜನಗರ ತಾಲ್ಲೂಕು	0.50
3	ವಡ್ಗಲ್ಪುರದಹುಂಡಿ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘನಿ., ಚಾಮರಾಜನಗರ ತಾಲ್ಲೂಕು	0.50
4	ಕೋಟಂಬಳ್ಳಿ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘ ನಿ., ಚಾಮರಾಜನಗರ ತಾಲ್ಲೂಕು	0.50
5	ಬಾಣಹಳ್ಳಿ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘ ನಿ., ಚಾಮರಾಜನಗರ ತಾಲ್ಲೂಕು	0.50
6	ಎ ಶೆಟ್ಟಿಹಳ್ಳಿ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘ ನಿ., ಗುಂಡ್ಲುಪೇಟೆ ತಾಲ್ಲೂಕು	0.50
7	ಬಿ ಶೆಟ್ಟಿಹಳ್ಳಿ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘ ನಿ., ಗುಂಡ್ಲುಪೇಟೆ ತಾಲ್ಲೂಕು	0.50
8	ಚಿಕ್ಕಹುಂಡಿ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘ ನಿ., ಗುಂಡ್ಲುಪೇಟೆ ತಾಲ್ಲೂಕು	0.50
9	ಬೇಗೂರು ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘ ನಿ., ಗುಂಡ್ಲುಪೇಟೆ ತಾಲ್ಲೂಕು	0.50
10	ಬೆಟ್ಟಹಳ್ಳಿ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘ ನಿ., ಗುಂಡ್ಲುಪೇಟೆ ತಾಲ್ಲೂಕು	0.50
11	ನಾಗಣ್ಣನಗರ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘ ನಿ., ಕೊಳ್ಳೇಗಾಲ ತಾಲ್ಲೂಕು	0.50
12	ಚಿಕ್ಕಮಾಲಾಪುರ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘ ನಿ., ಕೊಳ್ಳೇಗಾಲ ತಾಲ್ಲೂಕು	0.50
13	ಹಳೇಕೋಟೆ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘ ನಿ., ಕೊಳ್ಳೇಗಾಲ ತಾ.	0.50

14	ಸಿಂಗನಲ್ಲೂರು ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘ ನಿ., ಕೊಳ್ಳೇಗಾಲ ತಾಲ್ಲೂಕು.	0.50
15	ಜಲ್ಲಿಪಾಳ್ಯ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘ ನಿ., ಕೊಳ್ಳೇಗಾಲ ತಾಲ್ಲೂಕು.	0.50
16	ಅಗರ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘ ನಿ., ಯಳಂದೂರು ತಾಲ್ಲೂಕು.	0.50
	ಒಟ್ಟು	**8.00**

ಈ ಮೇಲ್ಕಂಡ ಸಹಕಾರ ಸಂಘಗಳಿಗೆ ಮಂಜೂರಾಗಿರುವ ಅನುದಾನವನ್ನು ಬಿಡುಗಡೆ ಮಾಡಿಸಿ ಕಾರ್ಯಕ್ರಮವನ್ನು ಸಂಪೂರ್ಣವಾಗಿ ಅನುಷ್ಠಾನಗೊಳಿಸಿದೆ.

ತಾಲ್ಲೂಕು ಪಂಚಾಯಿತಿ ಯೋಜನೆ ಕಾರ್ಯಕ್ರಮಗಳ ವಿವರ.

2) ವಿಶೇಷ ಘಟಕ ಯೋಜನೆಗಳ ಆಸ್ತಿ ಸೃಷ್ಟಿಗಾಗಿ ಪಿಕಾರ್ಡ್ ಬ್ಯಾಂಕ್ ಮಂಜೂರು ಮಾಡಿದ ಸಾಲಗಳ ಮೇಲೆ ಸಹಾಯಧನ (2425–00–101–0–61)

ಈ ಯೋಜನೆಗೆ 2019–20 ನೇ ಸಾಲಿನಲ್ಲಿ ರೂ. 15.50 ಲಕ್ಷಗಳ ಗುರಿ ನಿಗಧಿಯಾಗಿ ಮಂಜೂರಾಗಿ ಬಿಡುಗಡೆಯಾಗಿದ್ದು, ಇದನ್ನು ಈ ಕೆಳಕಂಡ ನಾಲ್ಕು ಪಿಕಾರ್ಡ್ ಬ್ಯಾಂಕುಗಳಿಗೆ ಬಿಡುಗಡೆ ಮಾಡಿಸಿ ಕಾರ್ಯಕ್ರಮವನ್ನು ಸಂಪೂರ್ಣ ಅನುಷ್ಠಾನಗೊಳಿಸಲಾಗಿದೆ.

ಕ್ರ.ಸಂ	ಸಹಕಾರ ಸಂಘಗಳ ಹೆಸರು	ಮೊತ್ತ
1.	ಪಿಕಾರ್ಡ್ ಬ್ಯಾಂಕ್ ಚಾಮರಾಜನಗರ	8.69
2.	ಪಿಕಾರ್ಡ್ ಬ್ಯಾಂಕ್ ಗುಂಡ್ಲುಪೇಟೆ	3.27
3.	ಪಿಕಾರ್ಡ್ ಬ್ಯಾಂಕ್ ಕೊಳ್ಳೇಗಾಲ	2.00
4.	ಪಿಕಾರ್ಡ್ ಬ್ಯಾಂಕ್ ಯಳಂದೂರು	1.54
	ಒಟ್ಟು	**15.50**

ಈ ಮೇಲ್ಕಂಡ ಸಹಕಾರ ಸಂಘಗಳಿಗೆ ಮಂಜೂರಾಗಿರುವ ಅನುದಾನವನ್ನು ಬಿಡುಗಡೆ ಮಾಡಿಸಿ ಕಾರ್ಯಕ್ರಮವನ್ನು ಸಂಪೂರ್ಣವಾಗಿ ಅನುಷ್ಠಾನಗೊಳಿಸಿದೆ.

ರಾಜ್ಯ ಯೋಜನೆ

2019–20 ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ /ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ/ಅಲ್ಪಸಂಖ್ಯಾತ/ಅಲೆಮಾರಿ ಜನಾಂಗ/ಮಹಿಳೆಯರು/ವಿಕಲಚೇತನರು/ಬಿಪಿಎಲ್ ಕಾರ್ಡ್‌ದಾರರನ್ನು ಎಲ್ಲಾ ವಿಧಧ ಸಹಕಾರ ಸಂಘಗಳಲ್ಲಿ ಹಾಗೂ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ ಸದಸ್ಯರನ್ನಾಗಿ ನೋಂದಾಯಿಸಲು ಷೇರು ಸಹಾಯಧನ.

ಕ್ರ. ಸಂ	ಯೋಜನೆಯ ಹೆಸರು	ಘಟಕ	ವಾರ್ಷಿಕ ಗುರಿ		ದಿನಾಂಕ 01–04–2019 ರಿಂದ 31–03–2020					
			ಆರ್ಥಿಕ	ಭೌತಿಕ	ಆರ್ಥಿಕ (ರೂ.ಲಕ್ಷಗಳಲ್ಲಿ)			ಭೌತಿಕ		
					ಗುರಿ	ಸಾಧನೆ	ಶೇ	ಗುರಿ	ಸಾಧನೆ	ಶೇ
1	2	3	4	5	6	7	8	9	10	11
ರಾಜ್ಯ ವಲಯ										
1	2019–20 ನೇ ಸಾಲಿನಲ್ಲಿ ಎಲ್ಲಾ ವಿಧದ ಸಹಕಾರ ಸಂಘಗಳಲ್ಲಿ ಪ.ಜಾ/ಪ.ಪಂಗಡದವರನ್ನು ಅಲ್ಪಸಂಖ್ಯಾತ/ಹಿಂದುಳಿದ ವರ್ಗದವರನ್ನು/ವಿಕಲಚೇತನರು/ಮಹಿಳೆಯರು/ಬಿಪಿಎಲ್ ಕಾರ್ಡ್‌ದಾರರನ್ನು ನೋಂದಾಯಿಸಲು ಸಹಾಯಧನ ಮಂಜೂರಾತಿ.	ಪರಿಶಿಷ್ಟ ಜಾತಿ	0.90	180	0.90	1.95	266.66%	180	390	266.66%
		ಪರಿಶಿಷ್ಟ ಪಂಗಡ	0.20	40	0.20	0.54	270%	40	108	270%
		ಹಿಂದುಳಿದ ವರ್ಗ	0.60	120	0.60	0.60	100%	120	120	100%
		ಅಲ್ಪಸಂಖ್ಯಾತರು	0.90	180	0.90	0.75	83.33%	180	150	83.33%
		ವಿಕಲಚೇತನರು	0.20	40	0.20	0	0	40	0	0
		ಮಹಿಳೆಯರು	2.00	400	2.00	2.00	100%	400	400	100%
		ಬಿಪಿಎಲ್ ಕಾರ್ಡ್‌ದಾರರು.	1.35	270	1.35	0.54	39.62%	270	107	39.62%
	ಒಟ್ಟು		6.15	1230	6.15	6.38	103.73%	1230	1275	103.65%

19. ಖಾದಿ ಮತ್ತು ಗ್ರಾಮೋದ್ಯಮ ಇಲಾಖೆ

ಉಪ ನಿರ್ದೇಶಕರು (ಖಾಗ್ರಾ), ಖಾದಿ ಮತ್ತು ಗ್ರಾಮೋದ್ಯೋಗ ವಿಭಾಗ (ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ), ಜಿಲ್ಲಾ ಪಂಚಾಯತ್, ಚಾಮರಾಜನಗರ ಕಛೇರಿಯ ಮಂಜೂರಾದ, ಭರ್ತಿ ಮತ್ತು ಖಾಲಿ ಹುದ್ದೆಗಳ ವಿವರ

ಕ್ರ.ಸಂ.	ಹುದ್ದೆ	ಮಂಜೂರು	ಭರ್ತಿ	ಖಾಲಿ
1	ಉಪನಿರ್ದೇಶಕರು(ಖಾಗ್ರಾ)	01	–	01
2	ಸಹಾಯಕ ನಿರ್ದೇಶಕರು	01	01	–
3	ಕೈಗಾರಿಕಾ ವಿಸ್ತರಣಾಧಿಕಾರಿಗಳು	04	01	03
4	ಪ್ರಥಮದರ್ಜೆ ಸಹಾಯಕರು	01	–	01
5	ಬೆರಳಚ್ಚುಗಾರರು	01	–	01
6	ಗ್ರೂಫ್ ಡಿ ನೌಕರರು	01	01	–
ಒಟ್ಟು		**09**	**03**	**06**

1. **ಜಿಲ್ಲಾ ಉದ್ಯಮ ಕೇಂದ್ರ(ತರಬೇತಿ)ಕಾರ್ಯಕ್ರಮ :–** ಸದರಿ ಕಾರ್ಯಕ್ರಮದಡಿ ಲೆಕ್ಕ ಶೀರ್ಷಿಕೆ: 2851–00–107–0–27–001ರಲ್ಲಿ ರೂ. 6.00 ಲಕ್ಷಗಳು ವೇತನಕ್ಕಾಗಿ ಭೌತಿಕ ಗುರಿ 01 ಸಿಬ್ಬಂದಿಗೆ ನಿಗಧಿಯಾಗಿದ್ದು, ಭೌತಿಕ 01 ಸಾಧನೆಯಾಗಿರುತ್ತದೆ. ಆರ್ಥಿಕ ರೂ. 6.00 ಲಕ್ಷಕ್ಕೆ ರೂ. 5.50 ಲಕ್ಷಗಳ ಸಾಧನೆಯಾಗಿರುತ್ತದೆ. ಅಬ್ಜೇಕ್ಟೀವ್ ಕೋಡ್ 090 ರಲ್ಲಿ ರೂ. 20.54 ಲಕ್ಷ ಅನುದಾನ ನಿಗಧಿಯಾಗಿದ್ದು, ಬಿಡುಗಡೆಯಾದ ಅನುದಾನ ರೂ. 20.54 ಲಕ್ಷಗಳಲ್ಲಿ ತರಬೇತಿ ಕಾರ್ಯಕ್ರಮಕ್ಕಾಗಿ ರೂ. 10.00 ಲಕ್ಷಗಳನ್ನು ಚಾಮರಾಜನಗರ ಜಿಲ್ಲೆಯ ನಾಲ್ಕು ತಾಲ್ಲೂಕುಗಳ ತಲಾ 25 ಸಂಖ್ಯೆ ಫಲಾನುಭವಿಗಳಂತೆ ಚಾಮರಾಜನಗರ ಮತ್ತು ಕೊಳ್ಳೇಗಾಲ ತಾಲ್ಲೂಕುಗಳಲ್ಲಿ ಡ್ರಸ್ ಮೇಕಿಂಗ್, ಬ್ಯೂಟಿಷೀಯನ್ ಮತ್ತು ಹ್ಯಾಂಡ್ ಎಂಬ್ರಾಯಿಡರಿ ಜರ್ದೋಸಿ ತರಬೇತಿ ಮತ್ತು ಗುಂಡ್ಲುಪೇಟೆ ಮತ್ತು ಯಳಂದೂರು ತಾಲ್ಲೂಕುಗಳಲ್ಲಿ ಕಂಪ್ಯೂಟರ್ ಹಾರ್ಡ್‌ವವೇರ್ ಮತ್ತು ಡಾಟಾ ಎಂಟ್ರಿ ಅಪರೇಟರ್ ತರಬೇತಿಗಳನ್ನು ನೀಡಲಾಗಿದ್ದು, ಭೌತಿಕ ಗುರಿಯಲ್ಲಿ ಒಟ್ಟು 100ಕ್ಕೆ 100ರ ಗುರಿಯನ್ನು ಸಾಧಿಸಲಾಗಿರುತ್ತದೆ. ಶೇ 100ರಷ್ಟು ಭೌತಿಕ ಗುರಿ ಸಾಧನೆಯನ್ನು ಮಾಡಲಾಗಿದೆ. ಉಳಿಕೆ ಅನುದಾನ ರೂ. 10.54 ಲಕ್ಷಗಳಲ್ಲಿ ರೂ. 10.54 ಲಕ್ಷಗಳು ಕಛೇರಿ ವೆಚ್ಚಕ್ಕಾಗಿ ಖರ್ಚುಮಾಡಲಾಗಿದೆ.
